ಉಪಾಧ್ಯಕ್ಷರು : ಇದಕ್ಕೆ ಕನಿಷ್ಟ ಎರಡರಿಂದ ಮೂರು ಗಂಟೆ ಸಮಯ ಬೇಕಾಗಬಹುದು ಅದಕ್ಕಾಗಿ ಊಟವಾದ ಮೇಲೆ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತ. ಈಗ ಸದನವನ್ನು ಮುಂದೂಡುತ್ತಿದ್ದೇನೆ.

(ಸದನವು 1.20ಕ್ಕೆ ಮುಂದೂಡಲ್ಪಟ್ಟು ಪುನಃ 2-30ಕ್ಕೆ ಸೇರಲು ನಿಶ್ಚಯಿಸಿತು.)

ಸದನವು ಮಧ್ಯಾಹ್ನ ಪುನಃ 2.50ಕ್ಕೆ ಸಮಾವೇಶಗೊಂಡಿತು.

(ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಾಮನಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ಕಾವೇರಿ ಜಲ ವಿವಾದ ಕುರಿತಂತೆ ತಮಿಳುನಾಡು ಮುಖ್ಯಮಂತ್ರಿಯವರ ಹೇಳಿಕೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಈ ಗತಿ ಎರಡನೆಯ ದಿವಸಕ್ಕೆ ಬಂತು. ಮಾನ್ಯ ಮುಖ್ಯಮಂತ್ರಿಗಳು ಯಾತ್ರೆಗೆ ಹೋಗಿದ್ದಾರೇನು? ಅವರ ಜೊತೆಯಲ್ಲಿ ಎಲ್ಲಾ ಮಂತ್ರಿಗಳು ಹೋಗಿರಬಹುದು. ಮಾನ್ಯ ನಾಗೇಗೌಡರು ಒಬ್ಬರನ್ನು ಬಿಟ್ಟರೆ ಎಲ್ಲರೂ ಹೋಗಿದ್ದಾರೆ. ನಾಗೇಗೌಡರು ಬಾರಿ ನೀರಾವರಿ ಸಚಿವರು ಎಲ್ಲರಿಗೂ ನೀರು ಬಿಡುವವರು. ಇವತ್ತು ನಾವು ಪ್ರಸ್ತಾಪ ಮಾಡತಕ್ಕ ವಿಷಯ ಬಹಳ ಮಹತ್ವದ್ದು, ಬಹಳ ಗಂಭೀರವಾದ ವಿಷಯ. ನಿನ್ನೆ ಇದನ್ನು ಶೂನ್ಯವೇಳೆಯಲ್ಲಿ ಅನೇಕ ನಮ್ಮ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ವಿಷಯದ ಮಹತ್ವವನ್ನು ಅರಿತುಕೊಂಡು ತಾವು ಪ್ರತ್ಯೇಕವಾದ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ ಮೇಲೆ ಅದೇ ರೀತಿ ತಾವು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ. ಈ ವಿಷಯವನ್ನು ಆಧ್ಯತೆಯ ಮೇಲೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ ಅದಕ್ಕೆ ನಾನು ಮತ್ತೊಮ್ಮೆ ವಂದಿಸುತ್ತೇನೆ. ಪ್ರಮುಖವಾಗಿ ನಮ್ಮ ಮುಂದಿರತಕ್ಕದ್ದು ಏನೆಂದರೆ, ಏಕೆ ಈ ವಿಷಯ ಉದ್ಭವಿಸಿದೆ ಅಂದರೆ ತಮಿಳು ನಾಡಿನ ಮುಖ್ಯಮಂತ್ರಿಗಳಾದ ಎಂ. ಕರುಣಾನಿಧಿಯವರು ಒಂದು ಹೇಳಿಕೆಯನ್ನು ನಿನ್ನೆ ಕೊಟ್ಟಿದ್ದಾರೆ. ಇದರ ಹಿಂದೆ ಏನು ನಡೆಯಿತು ಆ ವಿಷಯಕ್ಕೆ ಆಮೇಲೆ ಬರುತ್ತೇನೆ. ಆದರೆ ಕರುಣಾನಿಧಿಯವರು ನಮ್ಮ ಮುಖ್ಯಮಂತ್ರಿಗಳ ಪ್ರೀತಿಗೆ ಪಾತ್ರರಾದವರು ಅಲ್ಲದೆ ವೈಯಕ್ತಿಕವಾಗಿ ಮಿತ್ರರು. ಆಮೇಲೆ ಸಂಯುಕ್ತ ರಂಗದಲ್ಲಿ ಒಂದು ಕಡೆ ಇದ್ದು ರಾಜಕೀಯ ಮಾಡಿ ನಾವು ಬಹಳ ಚೆನ್ನಾಗಿದ್ದೇವೆ. ಕಾವೇರಿ ಜಲ ವಿವಾದವನ್ನು ಇತ್ಯರ್ಥ ಮಾಡುವುದಕ್ಕೆ ಸೌಹಾರ್ದಯುತವಾದ ಮಾತುಕತೆ ನಡೆಸುತ್ತೇವೆ, ಅದರಲ್ಲಿ ಯಶಸ್ವಿಯಾಗುತ್ತೇವೆಂದು ಅನೇಕ ಸಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿ ಅದನ್ನು ಸಮರ್ಥನೆ ಕೂಡ ಮಾಡಿದ್ದಾರೆ. ಸಮರ್ಥನೆ ಮಾಡಿಕೊಳ್ಳುವುದು ಅಷ್ಟೇ ಅಲ್ಲ, ನೀವು ಮೋಸ ಹೋಗುತ್ತೀರಿ ಅವರನ್ನು ನಂಬಬೇಡಿಯೆಂದೂ ನೀವು ಏನಾದರೂ ಒಂದು ಇತ್ಯರ್ಥಕ್ಕೆ

ಬರುವುದಕ್ಕೆ ಸಾಧ್ಯತೆ ಇದ್ದರೆ ನೀವು ಇದೆಲ್ಲಾ ಹೇಳಿ ಅಂದರೆ ಇವರು ಅನೇಕ ಸಾರಿ ಅವರ ಮೈಮೇಲೆ ಬಿದ್ದು ಪ್ರಯತ್ನ ಮಾಡಿದರು. ಕೊನೆಗೆ ಏನು ಹೇಳಿಕೆಯನ್ನು ಕೊಟ್ಟಿದ್ದಾರೆಂದರೆ, ಸ್ಪಷ್ಟವಾದ ಹೇಳಿಕೆಯನ್ನು ಅವರು ಕೇಂದ್ರ ಸರ್ಕಾರದ ಮುಂದಿಟ್ಟಿದ್ದಾರೆ. ಇದು ಕರ್ನಾಟಕದ ಜನತೆಗೆ ಕೂಡ ಗೊತ್ತಿದೆ. ಕಾವೇರಿ ವಿವಾದವನ್ನು ನ್ಯಾಯಾಂಗದ ಮೂಲಕ ಬಗೆಹರಿಸಿಕೊಳ್ಳಲು ತಮಿಳುನಾಡು ಸರ್ಕಾರ ನಿರ್ಧರಿಸಿದೆ. ಈ ಕುರಿತಂತೆ ಯಾವುದೇ ರೀತಿಯ ಮಾತುಕತೆಯನ್ನು ಕರ್ನಾಟಕದೊಂದಿಗೆ ನಡೆಸದಿರಲು ನಿರ್ಧರಿಸಿದೆ. ಎರಡೂ ರಾಜ್ಯಗಳ ನಡುವೆ ಮಾತುಕತೆ ನಡೆಸಲು ಪ್ರಧಾನಮಂತ್ರಿಗಳಾದ ಅಟಲ್‌ಬಿಹಾರಿ ವಾಜಪೇಯಿಯವರು ಯತ್ನಿಸಿದರೂ ಅದನ್ನು ನಿರಾಕರಿಸುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿಯವರು ಇಂದು ಅಲ್ಲಿನ ವಿಧಾನಸಭೆಯಲ್ಲಿ ಪ್ರಕಟಿಸಿದರು. ಕಾವೇರಿ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೆ ನಡೆದ ಮಾತುಕತೆಗಳನ್ನು ಆ ಮಾತುಕತೆಯ ವಿವರಗಳನ್ನು ಪ್ರಧಾನಮಂತ್ರಿಗಳಿಗೆ ನೀಡಿ ಸಂಧಾನದ ಮಾತುಕತೆ ವ್ಯರ್ಥವಾಗುವ ಸಾಧ್ಯತೆಯನ್ನು ಅವರಿಗೆ ವಿವರಿಸಿದಾಗ, ಸಿಪಿಐನ ಪಳನಿಸ್ವಾಮಿಯವರು ವಿಷಯ ಪ್ರಸ್ತಾಪ ಮಾಡಿದರೆ, ಅದಕ್ಕೆ ಉತ್ತರವಾಗಿ ಅವರು ಏನು ಹೇಳಿದ್ದಾರೆಂದರೆ, "ಕಾವೇರಿ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್‌ರವರೊಂದಿಗೆ ಮಾತುಕತೆ ನಡೆಸುವುದಿಲ್ಲ. ಈ ವಿಚಾರಕ್ಕೆ ಪರಿಹಾರವನ್ನು ನ್ಯಾಯಾಂಗದ ಮೂಲಕವೇ ತೀರ್ಮಾನ ಕಂಡುಕೊಳ್ಳುತ್ತೇವೆಂದು ಹೇಳಿದರು. ರಾಷ್ಟ್ರೀಯ ಜಲನೀತಿ ಜಾರಿಗೆ ಬರುವ ತನಕ ಕಾವೇರಿ ವಿವಾದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ಯತ್ನವನ್ನು ಮುಂದೂಡಲು ನಮ್ಮ ವಿರೋಧವಿದೆ ಎಂದು ಹೇಳಿದರು. ಕಾವೇರಿ ವಿವಾದಕ್ಕೆ ಸುಪ್ರೀಂ ಕೋರ್ಟ್‌ನ ಆದೇಶದಂತೆ ತಾವು ಕರ್ನಾಟಕದ ಮುಖ್ಯಮಂತ್ರಿಗಳಿಗೆ ಅವರೊಂದಿಗೆ ಈ ಕುರಿತಂತೆ ಮಾತುಕತೆ ನಡೆಸುವುದಾಗಿ ತಿಳಿಸಿದ್ದು ಮಾತುಕತೆ ವಿಫಲವಾಗಿರುವುದನ್ನು ಸುಪ್ರೀಂಕೋರ್ಟ್‌ಗೆ ತಿಳಿಸಲಾಗಿದೆ. ಈ ಬಗ್ಗೆ ನಿರ್ಧಾರವನ್ನು ಸ್ಪಷ್ಟಪಡಿಸುವಂತೆ ನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ ಎಂದರು. ಸುಪ್ರೀಂ ಕೋರ್ಟ್‌ನ ಆದೇಶದಂತೆ ಕಾವೇರಿ ನ್ಯಾಯಮಂಡಳಿ ಮಧ್ಯಂತರ ತೀರ್ಪನ್ನು ಜಾರಿಗೊಳಿಸಲು ಆಗಿನ ಸಂಯುಕ್ತ ರಂಗ ಸರ್ಕಾರ ಯೋಜನೆ ರೂಪಿಸಿದೆ. ಈ ಯೋಜನೆ ಬಗ್ಗೆ ತಮಿಳುನಾಡು, ಕೇರಳ, ಪಾಂಡಿಚೇರಿ ಮತ್ತು ಕರ್ನಾಟಕದ ಅಭಿಪ್ರಾಯವನ್ನು ಕೇಳಲಾಯಿತು. ಕಾವೇರಿ ನ್ಯಾಯಮಂಡಳಿ ಮಧ್ಯಂತರ ತೀರ್ಪನ್ನು ಜಾರಿಗೊಳಿಸಲು ಕಾವೇರಿ ಜಲ ಪ್ರಾಧಿಕಾರ ರಚಿಸುವುದನ್ನು ಕರ್ನಾಟಕ ಮಾತ್ರ ವಿರೋಧಿಸಿತು. ಇದು ಕೇವಲ ತಮಿಳುನಾಡಿನ ಹಿತವನ್ನು ಮಾತ್ರ ಕಾಯುತ್ತದೆ ಎಂದು ಆರೋಪಿಸಿತು. ಇದರ ಬದಲು ಕೇವಲ ಸಮಿತಿಯೊಂದನ್ನು ರಚಿಸಲು ಸಲಹೆ ಮಾಡಿತು. ನ್ಯಾಯಾಲಯದಲ್ಲಿ ಇದೇ ಕರ್ನಾಟಕ ಮತ್ತು ತಮಿಳುನಾಡಿನ ಮಧ್ಯೆ ಇರುವ ಮುಖ್ಯ ಭಿನ್ನಾಭಿಪ್ರಾಯ ನ್ಯಾಯಾಲಯದ ಮುಂದೆ ವಿಚಾರಣೆ ಇನ್ನೂ ಮುಂದುವರಿದಿದೆ. ಕಾವೇರಿ ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಸರ್ಕಾರದ ನಿಲುವನ್ನು ಮುಂದುವರಿಸಿಕೊಂಡು ಹೋಗುವಂತೆ ಪ್ರಧಾನಮಂತ್ರಿಗಳಿಗೆ ಸಲಹೆ ಮಾಡಿದ್ದೇವೆಂದು" ಕರುಣಾನಿಧಿಯವರು ಅಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ಒಂದು ಕಡೆ. ಅಂದರೆ ಹಿಂದಿನ ಸಂಯುಕ್ತರಂಗದ ಸರ್ಕಾರ ಬಹಳ ಅನುಕೂಲವಾಗಿತ್ತು. ಅದಕ್ಕೆ ಈ ಸರ್ಕಾರ ಅದನ್ನೇ ಮುಂದುವರೆಸಿಕೊಂಡು ಹೋಗಬೇಕೆನ್ನತಕ್ಕ ಮಾತನ್ನು ಕರುಣಾನಿಧಿಯವರು

ಹೇಳಿದ್ದಾರೆ. ಒಂದು ಕಡೆ ಇವತ್ತು ಕರುಣಾನಿಧಿಯವರು ತನ್ನ ಪಟ್ಟು ಹಿಡಿದುಕೊಂಡು ಕುಳಿತಿದ್ದಾರೆ. ಎರಡನೆಯದಾಗಿ ಇಲ್ಲಿ ವಾದ ವಿವಾದ ಏಕೆ ಎದ್ದಿದೆ ಎನ್ನುವುದು ಗೊತ್ತಾಗುತ್ತಿಲ್ಲ. ಏಕೆಂದರೆ ಮೊನ್ನೆ ಮಾನ್ಯ ಹೆಚ್. ಕೆ. ಪಾಟೀಲ್‌ರವರು ಒಂದು ಹೇಳಿಕೆಯನ್ನು ಕೊಟ್ಟಮೇಲೆ ಅದಕ್ಕೆ ಪ್ರತಿ ಹೇಳಿಕೆಯನ್ನು ನಾಣಯ್ಯನವರು ಕೊಟ್ಟರು. ನಾಗೇಗೌಡರೂ ಕೂಡ ಹೇಳಿದ್ದಾರೆ. ಆದರೆ ಇವತ್ತು ಸತ್ಯಾಂಶ ಏನಿದೆ? ಸತ್ಯಾಂಶ ಇರತಕ್ಕದ್ದು ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್ ಏನಿದೆ ಆ ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಉಪ ಮುಖ್ಯಮಂತ್ರಿಗಳು ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಬಗ್ಗೆ ಮಾತನಾಡಿದರೂ ಕೂಡ ಆವೊಂದು ನಿಮ್ಮ ಹೇಳಿಕೆ ಅಥವಾ ರಿಟನ್ ಸ್ಪೀಚ್ ಏನಿದೆ ಅದು ಇದ್ದರೂ ಕೂಡ ಆ ರಿಟನ್ ಸ್ಪೀಚ್‌ನ್ನು ಗಣನೆಗೆ ತೆಗೆದುಕೊಂಡಿಲ್ಲ. ಪ್ರೊಸೀಡಿಂಗ್ಸ್‌ನಲ್ಲಿ ನೀವು ಹೇಳಿದಂತಹ ಮಾತು ಅಥವಾ ಡಿಸ್‌ಅಗ್ರಿಮೆಂಟ್ ಅದರಲ್ಲಿ ಬರಲಿಲ್ಲ. ಅದರಲ್ಲಿ ಒಂದು ಮಾತನ್ನು ಹೇಳಿದ್ದಾರೆ. ``It was agreed that the prepared speeches brought by distinguished members would be distributed and taken as read. The contents would be taken note by the Secretariat." ಅಂದರೆ ಏನು ನೀವು ರಿಟನ್‌ಸ್ಪೀಚನ್ನು ಕೊಟ್ಟಿದ್ದೀರಿ, ಅದನ್ನು ಆಸ್ ರೆಡ್ ಎಂದು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥಾದ್ದನ್ನು ಮಾತ್ರ ಅವರು ಹೇಳಿದ್ದಾರೆಯೇ ಹೊರತಾಗಿ ಅದರೊಳಗೆ ಇರತಕ್ಕಂಥದ್ದನ್ನು ಇವರು ಏನು ನಾವು ವಿರೋಧ ಮಾಡಿದ್ದೇವೆ ಅಥವಾ ಏನು ಹಾಗೆ ಹೇಳಿದ್ದಕ್ಕೆ ನಾನು ಒಪ್ಪಿಕೊಂಡಿಲ್ಲ ಎಂದು ಏನು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾದದ್ದು. ಪ್ರೊಸೀಡಿಂಗ್ಸನ್ನು ನೋಡಿದರೆ ಮಾನ್ಯ ನಾಗೇಗೌಡರೂ ಕೂಡ ಒಪ್ಪಿಕೊಳ್ಳುತ್ತಾರೆ. ಇವರು ಹೇಳಿದ್ದು ಏನು? ಇವರು ಹೇಳಿದ್ದು- Inter-State River Water Disputes. ಸಿದ್ಧರಾಮಯ್ಯನವರು ಮಾಡಿದಂಥ ಭಾಷಣ, ಅಷ್ಟು ಮಾತ್ರ ನಾನು ಕೋಟ್ ಮಾಡುತ್ತೇನೆ. ಅದು ಈ ರೀವರ್ ಬಗ್ಗೆ ಮಾತ್ರ. ಉಳಿದಂತೆ ಅವರು ಬೇರೆ ಬೇರೆ ವಿಷಯಗಳ ಮೇಲೆ ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಈ ಟ್ಯಾಕ್ಸ್ ಬಗ್ಗೆಯಾಗಲೀ, ಬೇರೆ ಬೇರೆ ಯೋಚನೆಗಳನ್ನು ಮಾಡುತ್ತಾರೆ, ಅಥವಾ ಏನಾದರೂ ಇಂಟರ್‌ಸ್ಟೇಟ್ ಸಮಸ್ಯೆ ಇದ್ದರೆ ಅದನ್ನು ಬಗೆಹರಿಸತಕ್ಕಂಥಾದ್ದು ಆ ವಿಚಾರದಲ್ಲಿ ಅದು ನಡೆಯುತ್ತದೆ. ಅದಕ್ಕಾಗಿ ಹೋಮ್ ಮಿನಿಸ್ಟರ್ ಯಾವಾಗಲೂ ಪ್ರಿಸೈಡ್ ಮಾಡತಕ್ಕಂಥಾದ್ದು. ತಮ್ಮ ಗ್ರೀವೆನ್ಸಸನ್ನು ಆ ರಾಜ್ಯಗಳು ಹೇಳಿಕೊಳ್ಳುತ್ತಾರೆ. ಆದರೆ ಇಲ್ಲಿ ಇವರು ಹೇಳಿರುವುದು ಏನು?

"My state has always believed that the Inter-State River Water Disputes should be resolved amicably through discussions and dialogues among the concerned States. One of the suggestions given by the Sarkaria Commission which is under deliberations now deals with the proposed amendment prescribing the time limit of one year for constitution of the Tribunal from the date of receipt of an application from any of the disputant States. Keeping in view the philosophy of my State, the time limit prescribed could be further extended to two years or more providing sufficient time to the Union Government to solve

the dispute through negotiations. We would however reject the idea of constitution of a Tribunal suo motto by the Union. The suggestion that the Tribunal's award is to have the same force and sanction as of an order or a decree of Supreme Court, is not acceptable to my State. We also do not accept the time limit of 2 years being prescribed for implementation of an award. The main hurdle in providing a satisfactory solution to these river water disputes is the lack of written laws or guidelines formulated by the concerned authorities. Therefore, it is suggested that the Inter-State Council makes an attempt to lay down such guidelines. Although there are many decided cases spelling out principles of equitable apportionment, yet in the larger interest of the nation and for providing suitable basis for resolution of disputes by the Tribunal or Supreme Court, existence of written guidelines have become imperative. A Sub Committee of experts drawn from law, administration, engineering, agriculture etc., may immediately be constituted to prepare the working paper for discussion. In this connection, the guidelines prepared by the International Law Commission which was reportedly placed before the General Assembly of the United Nations could be the starting point. A strict enforcement of the orders of the Tribunal like a decree of a civil court is an impracticable proposition in a federal set up. The ultimate compliance to the orders should be secured not by force but through conciliation in a spirit of give and take."

- ಇದು ಸಿದ್ಧರಾಮಯ್ಯನವರು ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಭಾಷಣ ಮಾಡಿದಂಥಾದ್ದು ಈ ಭಾಷಣದ ಸ್ಪಿರೀಟ್ ಏನಿದೆ ಅದು ನೀವು ಪಾರ್ಟಿಸಿಪೇಟ್ ಮಾಡಿದಂಥ ಡಿಸ್‌ಕಷನ್‌ನಲ್ಲಿ ಇಲ್ಲ. ನೀವೇನು ಅಲ್ಲಿ ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಭಾಗವಹಿಸಿದ್ದೀರಿ, ಅಲ್ಲಿ ಒಂದು ಪ್ರೊಸೀಡಿಂಗ್ಸ್ ಬಂದಿದೆ. ಆ ಪ್ರೊಸೀಡಿಂಗ್ಸ್‌ನಲ್ಲಿ ಇವತ್ತಿನ ದಿನ ನೀವು ಇದಕ್ಕೆ ಡಿಸ್‌ಅಗ್ರಿ ಆಗಿದ್ದೀರಿ ಎನ್ನತಕ್ಕಂಥಾದ್ದು ಇಲ್ಲ. ಇದರ ಅರ್ಥ ಏನು ಎಂದರೆ ಅವರು ಹೇಳಿದ್ದಕ್ಕೆ ನೀವು ಒಪ್ಪಿಕೊಂಡಿದ್ದೀರಿ ಎನ್ನತಕ್ಕಂಥಾದ್ದು ಇದು ಸ್ಪಷ್ಟವಾಗುತ್ತದೆ. ಈಗ ಅವರು ಏನು ಹೇಳಿದ್ದರು? ಐಟಮ್ 212 ಪ್ಯಾರಾ 17.60 ಇದು ಯಾವುದು ಎಂದರೆ -

"Record note of discussions at the fourth meeting of the Inter-State Council held on 28th November, 1997." "The Meeting was held under the Chairmanship of Shri. I. K. Gujaral, Prime Minister, Chief Ministers of States and Union Territories, Ministers from Central and State Governments also attended the meeting. They were accompanied by senior officials of the Central and State Governments. The list of participants.

ಇದು ನಾನು ಹೇಳುವುದಲ್ಲ. ಇದರೊಳಗೆ ಆರು ಐಟಮ್‌ಗಳು ಇವೆ. ಆರು ಐಟಮ್‌ಗಳಲ್ಲಿ ಮೊದಲನೇ ಐಟಮ್ ಯಾವುದು ಎಂದರೆ ಅದು 'ಫೈನಾನ್ಸಿಯಲ್ ರಿಲೇಷನ್ಸ್' ಅದು ಸಂಬಂಧ ಇಲ್ಲ. ಎರಡನೆಯದು ರೋಲ್ ಆಫ್ ಗವರ್ನರ್. ಮೂರನೇಯದ್ದು ಇಂಟರ್‌ಸ್ಟೇಟ್ ರಿವರ್ ವಾಟರ್ ಡಿಸ್‌ಪ್ಯೂಟ್ಸ್. ಈ ಮೂರನೇ ಐಟಮ್‌ನಲ್ಲಿ ಸರ್ಕಾರಿಯಾ ಕಮೀಷನ್‌ದು ಏನು ರೆಕಮಂಡೇಷನ್ಸ್ ಇದೆ? ಸರ್ಕಾರಿಯಾ ಕಮೀಷನ್ ರೆಕಮೆಂಡೇಷನ್ಸ್ ಇರತಕ್ಕಂಥಾದ್ದು ಹೀಗೆ -

"Once an Application under Section 3 of the Inter-State River Water Disputes Act is received from a State, it should be mandatory on the Union Government to constitute a tribunal within a period not exceeding one year from the date of receipt of the application of any disputant State. The Inter-State River Water Disputes Act may be suitably amended for this purpose."

ಇದಕ್ಕೆ, ಈ ಸಜೆಷನ್ಸ್‌ಗೆ ತಾವು ಅಗ್ರಿ ಆಗಿದ್ದೀರಿ. "Agreed with the modification that the Disputes already settled may not be re-opened." ಆದರೆ ಆಮೇಲೆ ಈ ಮಾತಿಗೆ ಎರಡು ವರ್ಷ ಟೈಮ್ ಕೊಡಬೇಕು ಎನ್ನತಕ್ಕಂಥಾದ್ದು ತಾವು ಇದರಲ್ಲಿ ಹೇಳಿದ್ದೀರಿ. ಆಮೇಲೆ ಮುಂದೆ ಐಟಮ್ ನಂಬರ್ 213- ಇದರಲ್ಲಿ "The Inter State Water Disputes Act should be amended to empower the Union Government to appoint a Tribunal suo motto, if necessary, when it is satisfied that such a dispute exists in fact. "Not agreed", "Not agreed".

ನಿಮ್ಮ ಭಾಷಣದಲ್ಲೂ ಕೂಡ ಬಂದಿದೆ. ನಾವು ಅದಕ್ಕೆ ಅಗ್ರಿ ಆಗುವುದಿಲ್ಲ, ಈ ರೀತಿಯಾಗಿ ಸಾಲ್ವ್ ಆಗುವುದಿಲ್ಲ. ನಾವು ಕನ್ಸಿಲೇಷೇನ್ ಮುಖಾಂತರ, ಮಾತುಕತೆ ಮುಖಾಂತರವೇ ಬಗೆಹರಿಸಿಕೊಳ್ಳಬೇಕು. ಅದಕ್ಕಾಗಿ ನಾವು ಯೂನಿಯನ್ ಗವರ್ನ್‌ಮೆಂಟ್‌ಗೆ ಸುವೋಮೋಟೋ ಟ್ರಿಬ್ಯುನಲ್ ಕಾನ್ಸ್ಟಿಟ್ಯೂಟ್ ಮಾಡುವುದಕ್ಕೆ ಅಧಿಕಾರ ಕೊಡಬಾರದು ಎನ್ನತಕ್ಕಂಥ ಮಾತೇನಿದೆ, ಅದಕ್ಕೆ ಯಾರೂ ಒಪ್ಪಿಲ್ಲ, ಇವರೂ ಒಪ್ಪಿಲ್ಲ. ಆಮೇಲೆ ಮುಖ್ಯವಾಗಿ ಇವರು ಒಪ್ಪಿದ್ದು ಎಲ್ಲಿ ಎಂದರೆ 214 ಪ್ರೊಸೀಡಿಂಗ್ಸ್‌ನಲ್ಲಿ - "There should be a data bank and information system at the national level and adequate machinery should be set up for this purpose at the earliest. There should also be a provision in the Inter State Water Disputes Act that the States shall be required to give necessary data for which purpose the Tribunal may be vested with powers of a court."

ಅಂದರೆ ಟ್ರಿಬ್ಯೂನಲ್‌ಗೆ ಕೋರ್ಟಿನ ಅಧಿಕಾರಗಳನ್ನು ಕೊಡಬೇಕು. ಈಗಾಗಲೇ ನಮ್ಮದು ಡಿಸ್‌ಪ್ಯೂಟ್‌ನಲ್ಲೇ ಇದೆ. ನಾವು ಅದನ್ನು ಬೇಡ ಎಂದು ತಿಳಿದುಕೊಂಡೇ ಸಾಕಷ್ಟು ಎಲ್ಲಾ ಸರ್ಕಾರಗಳೂ ಪ್ರಯತ್ನ ಮಾಡಿವೆ. ನಿಮ್ಮ ನಿಲುವು ಆ ರೀತಿಯಾಗಿ ಈ ವಾಟರ್ ಡಿಸ್‌ಪ್ಯೂಟ್‌ನಲ್ಲಿ ಇದ್ದರೂ ಕೂಡ ಇಲ್ಲಿ ಅದು ಬರಲಿಲ್ಲ. ಇಲ್ಲಿ ಏನು ಬಂತು? "Recommendation of Sarkaria

Commission" ಇದಕ್ಕೆ "proposed consensus of the Standing Committee - Agreed. Recommendations of the Inter-State Council - Agreed."

ಅಂದರೆ Standing Committeeಯಲ್ಲಿ ಅಗ್ರಿಯಾಗಿದೆ, ತಾವೂ ಅಗ್ರಿ ಆಗಿದ್ದೀರಿ. ಆದರೆ ತಾವು ಇಲ್ಲಿ ಹೇಳುವ ಹಾಗಿಲ್ಲ. Your stand is not taken note of here. They have not considered it at all.

ಈಗ ಈ ಪ್ರೊಸೀಡಿಂಗ್ಸ್ ಕಾಪಿ ಅಂತೂ ತಮ್ಮದೇ ಇದೆ. ತಾವು ಅಟೆಂಡ್ ಮಾಡಿದ್ದೀರಿ. ಅದಕ್ಕಾಗಿ ಸ್ವಲ್ಪ ಕೇಳಿ. ಆಮೇಲೆ ಕಾಲಮ್ ನಂಬರ್ 2 ರಲ್ಲಿ "recommendations of Sarkaria Commission" ಇದೆ. ಇದಕ್ಕೆ ಯಾರು ಒಪ್ಪುತ್ತಾರೆ, ಇಲ್ಲವೇ ಎಂದು ಕೇಳತಕ್ಕಂಥಾದ್ದು ಅವರು ಇದನ್ನು ಇಟ್ಟಿದ್ದಾರೆ. ಕಾಲಮ್ ನಂಬರ್ 3ರಲ್ಲಿ ಏನಿದೆ ಎಂದರೆ - "proposed consensus of the Standing Committee.``

ಸ್ಟಾಂಡಿಂಗ್ ಕಮಿಟಿಯ ಪ್ರೊಪೋಸಲ್ ಏನು? ಅವರು ಯಾವ ರೀತಿಯಾಗಿ ರೆಕಮಂಡೇಷನ್ ಮಾಡಿದ್ದಾರೆ? ಆ ಮೇಲೆ Recommendations of the Inter-State Council. ಅಂದರೆ ಆ ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಮಂತ್ರಿಗಳು, ಪ್ರಧಾನಮಂತ್ರಿಗಳು, ಪ್ರಧಾನಮಂತ್ರಿಗಳು ಇಲ್ಲದೇ ಇದ್ದರೆ ಹೋಂ ಮಿನಿಸ್ಟರ್ ಸಂಬಂಧಪಟ್ಟಂಥ ಎಲ್ಲಾ ರಾಜ್ಯಗಳ ಮಂತ್ರಿಗಳು ಇರತಕ್ಕಂಥಾದ್ದು ಇಂಟರ್‌ಸ್ಟೇಟ್ ಕೌನ್ಸಿಲ್. ಅದರಲ್ಲಿನ ಪ್ರೊಸೀಡಿಂಗ್ಸ್‌ನ ಕಾಲಂ ನಂಬರ್-4ರಲ್ಲಿ ಏನು ಬಂದಿದೆ? ಅದರಲ್ಲಿ ಅಗ್ರೀಡ್ ಎಂದು ಬಂದಿದೆ. ಹಾಗಾದರೆ ಯಾವುದಕ್ಕೆ ಅಗ್ರೀಡ್ ಆಗಿದ್ದಾರೆ ಎಂದ ಹಾಗೆ ಆಯಿತು? "The Inter-State Water Disputes Act that the States shall be required to give necessary data for which purpose the Tribunal may be vested with powers of a Court.``

ಇದಕ್ಕೆ ನೀವು ಅಗ್ರೀ ಆಗಿದ್ದೀರಿ. ಇದು ಅಲ್ಲದೆ ಮುಂದೆಯೂ ಕೂಡ ಅದರ ಜೊತೆಯಲ್ಲಿ ವಿಶೇಷವಾದುದು ಏನೆಂದರೆ ಐಟಂ ನಂಬರ್- 215 " The Inter-State Water Disputes Act should be amended to ensure that the Award of a Tribunal becomes effective within 5 years from the date of constitution of the Tribunal." ಇದನ್ನು ಸರ್ಕಾರಿಯಾ ಕಮಿಷನ್‌ನವರು ಹೇಳಿದ್ದಾರೆ.

ಟ್ರಿಬ್ಯೂನಲ್ ಕಾನ್‌ಸ್ಟಿಟ್ಯೂಟ್ ಮಾಡಿ ಅವರು ಐದು ವರ್ಷಗಳೊಳಗೆ ಏನು ಕೊಡುತ್ತಾರೋ ಆ ಅವಾರ್ಡ್ ಇಫೆಕ್ಟ್‌ಗೆ ಬರುತ್ತದೆ ಎನ್ನತಕ್ಕಂಥ ಮಾತನ್ನು ಸರ್ಕಾರಿಯಾ ಕಮಿಷನ್‌ನವರು ಹೇಳಿದ್ದಾರೆ. "If however for some reasons, the Tribunal feels that the 5 years period has to be extended, the Union Government may, on a reference made by a Tribunal, extend its term.``

ಅಂದರೆ ಡಿಸ್ಶಿಷನ್ ಕೊಟ್ಟರೆ ಸ್ವಲ್ಪ ಎಕ್ಸ್‌ಟೆನ್‌ಷನ್ ಕೂಡ ಕೊಡಬಹುದು. ಹೀಗೆ ಇದು ಸರ್ಕಾರಿಯಾ ಕಮಿಷನ್‌ನವರ ರೆಕಮಂಡೇಷನ್ಸ್. ಸ್ಟಾಂಡಿಂಗ್ ಕಮಿಟಿಯವರ ರೆಕಮಂಡೇಷನ್ಸ್ ಏನು ಅಥವಾ ಅವರ ಒಪ್ಪಿಗೆ ಏನು ಅಂದರೆ, "The Tribunal should give its award within a period of three years from the date of its constitution. However, if for an unavoidable reason the award could not be given within a period of 3 years, the Union Government may extend the period suitably not exceeding three years. The award should be implemented within 2 years from the date of notification of the award. If for unavoidable reasons the award could not be implemented within a period of two years, the Union Government may extend the period." ಅಂದರೆ ಅವರು ಐದು ವರ್ಷಗಳು ಆದಮೇಲೆ, ಮತ್ತೆ ಎಕ್ಸ್‌ಟೆನ್‌ಷನ್‌ಗೆ ಅವಕಾಶವನ್ನು ಮಾಡಿಕೊಟ್ಟಿದ್ದರು. ಆದರೆ ನಮ್ಮ ಸ್ಟ್ಯಾಂಡಿಂಗ್ ಕಮಿಟಿಯವರು, ಮೂರು ವರ್ಷಗಳ ಅವಕಾಶವನ್ನು ಕೊಡಬೇಕು, ಒಂದು ವೇಳೆ ಆ ಅವಧಿಯಲ್ಲಿ ಮಾಡದೇ ಹೋದರೆ, ಇನ್ನೂ ಎರಡು ವರ್ಷಗಳ ಅವಕಾಶವನ್ನು ಅವರಿಗೆ ಮಾಡಿಕೊಟ್ಟು ಅವರಿಂದ ಮಾಡಿಕೊಳ್ಳಬೇಕೆಂಬ ಮಾತನ್ನು ಹೇಳಿದ್ದಾರೆ. ಇವೊತ್ತಿನ ದಿವಸ ಇದಕ್ಕೂ ಕೂಡ ನಮ್ಮ ಸರಕಾರದವರು ಕನ್‌ಸೆಂಟ್ ಕೊಟ್ಟಿದ್ದಾರೆ. ಆ ಮೇಲೆ 216 agreed. ನೀವು ಹೇಳುವುದನ್ನು ಹೇಳಿ .. ಇಲ್ಲಿ ನಿಮ್ಮ ಪ್ರೊಸೀಡಿಂಗ್ಸ್‌ನ ಪ್ರತಿಯು ಇದೆಯಲ್ಲ?

Sri K. N. Nagegowda : Sir, he is the Leader of Opposition. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇಂಥ ವಿಚಾರಗಳ ಬಗ್ಗೆ ಬಹಳ ಕುತೂಹಲ ಮತ್ತು ಕಾಳಜಿ ಇದೆ. ರಾಜ್ಯದ ಬಗ್ಗೆ ಅವರು ವಿಶೇಷ ಕಾಳಜಿಯನ್ನು ಹೊಂದಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಂತ್ರಿಗಳಾಗಿ ಬಹಳ ವರ್ಷಗಳ ಕಾಲ ಕೆಲಸ ಮಾಡಿರತಕ್ಕಂಥವರು. ಆದರೆ ಇಲ್ಲಿ ಅವರು ಹೀಗೆ ಮಾತನಾಡಿದ್ದು ರೆಕಾರ್ಡ್‌ಗೆ ಹೋದಾಗ it should not help the other State. Let it be straight. The procedure of the Inter-State Council ಹೇಗೆ ಎಂದು ತಿಳಿದುಕೊಂಡು ಮಾನ್ಯ ಖರ್ಗೆಯವರು ಆ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳಬೇಕು. ಅವರು ಹಿರಿಯ ನಾಯಕರು. I have got all the respects. ಆದರೆ ನಮ್ಮ ಈ ಡಿಬೇಟ್ ಬೇರೆಯವರಿಗೆ ಸಹಾಯ ಆಗಬಾರದು. If the State is agreed ಎಂದು ಬಿಟ್ಟರೆ the whole matter will be out. ಆದ್ದರಿಂದ let him understand the procedure of the Inter-State Council meetings.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಪ್ರೊಸೀಡಿಂಗ್ಸ್‌ನಲ್ಲಿ, whatever has appeared in the proceedings.....

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಅಲ್ಲಿ ಅಗ್ರೀಡ್ ಎಂದು ಬರೆದುಕೊಂಡು ತಕ್ಷಣ ಅದು ಸ್ಟೇಟ್ ಅಗ್ರೀಡ್ ಎಂದು ಅರ್ಥವಲ್ಲ. ನಾವು ನಮ್ಮ ನಿಲುವು ಏನು ಎನ್ನತಕ್ಕಂಥಾದ್ದನ್ನು ಸ್ಪಷ್ಟವಾಗಿ ನನ್ನ ಭಾಷಣದ ಮೂಲಕ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಅವರು

ಏನೇನು ಅಮೆಂಡ್‌ಮೆಂಟ್‌ಗಳನ್ನು ಮಾಡಬೇಕೆಂದು ಹೇಳಿದ್ದರು ಮತ್ತು ಸರ್ಕಾರಿಯಾ ಕಮಿಶನ್‌ರವರ ರೆಕಮೆಂಡೇಶನ್ಸ್ ಮುಂತಾಗಿ ಎಲ್ಲವಕ್ಕೂ ಕೂಡ ನಾವು ವಿರೋಧ ವ್ಯಕ್ತ ಮಾಡಿದ್ದೆವು. ಮಾರ್ಗ ಸೂಚಿಗಳು ಇಲ್ಲದೇನೇ ನಾವು ಯಾವುದೇ ತೀರ್ಮಾನಗಳಿಗೆ ಒಪ್ಪುವುದಿಲ್ಲ. ಮತ್ತೆ ಡಿಕ್ರಿಯ ಸುಪ್ರೀಂ ಕೋರ್ಟಿನ ತರಹದಲ್ಲಿ ಆಗಬೇಕು ಮತ್ತು ಅದು ಇಂಪ್ಲಿಮೆಂಟೇಷನ್ ಹೇಗೆ ಆಗಬೇಕೆಂದು ಹೇಳಿದ್ದರು. ಅದಕ್ಕೆ ಯಾವುದಕ್ಕೂ ನಾವು ಒಪ್ಪುವುದಿಲ್ಲ ಎಂದು ಹೇಳಿದ್ದೇನೆ. ಇದು ನೆಗೋಶಿಯೇಶನ್ ಮೂಲಕವೇ ಆಗಬೇಕು in the absence of specific guidelines ಇಲ್ಲದೇನೆ ಮಾಡುವುದಕ್ಕೆ ಆಗುವುದಿಲ್ಲ ಎಂಬ ವಿಚಾರವನ್ನು ನಾವು ಸ್ಪಷ್ಟವಾಗಿ ನನ್ನ ಭಾಷಣವನ್ನು ಓದಿ ಅವರಿಗೆ ಹೇಳಿದ್ದೇನೆ. ಆದ್ದರಿಂದ ಅವರು ಅಗ್ರೀಡ್ ಎಂದು ಬರೆದುಕೊಂಡ ತತ್‌ಕ್ಷಣ ಸ್ಟೇಟ್ ಅಗ್ರೀಡ್ ಎಂದು ಆಗುವುದಿಲ್ಲ. ನಾನು ಇದಕ್ಕೆ ಒಪ್ಪಿಯೇ ಇಲ್ಲ. ಇಂಥ ಯಾವುದಕ್ಕೂ ಕೂಡ ನಾವು ಒಪ್ಪಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಈಗ ಇಲ್ಲಿ ಇಷ್ಟು ದೊಡ್ಡ ಧ್ವನಿಯಲ್ಲಿ ನಾವು ಅಲ್ಲಿ ಅಗ್ರೀ ಆಗಿಲ್ಲ ಎನ್ನುವ ಮಾತು ಬೇರೆ. But what is in the proceedings? That is a document. ಅವರು ಅಲ್ಲಿ ಹೇಳಿದ್ದನ್ನು ನಿಮ್ಮ ಮುಂದೆ ನಾನೇ ಓದಿ ಹೇಳಿದ್ದೇನಲ್ಲಾ? ಇವರು ಈ ರೀತಿಯಾಗಿ ಇಲ್ಲಿ ಭಾಷಣವನ್ನು ಮಾಡಿದರೂ ಕೂಡ, ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಇದು ಒಪ್ಪಿಗೆ ಆಗಿದೆ. ಇಲ್ಲಿ ಮೂರು ಕಾಲಂಗಳು ಇವೆ. 1. Recommendations of the Sarkaria Commission. ಇಂಥಿಂಥ ಪ್ಯಾಂಟ್ಸ್ ಇವೆ, ಇದಕ್ಕೆ ಸ್ಟ್ಯಾಂಡಿಂಗ್ ಕಮಿಟಿಯವರ ಒಪೀನಿಯನ್ ಏನು? ಅವರು ಎಷ್ಟರಮಟ್ಟಿಗೆ ಒಪ್ಪುತ್ತಾರೆ? ಅದು ಆದಮೇಲೆ ಪುನಃ ಇಂಟರ್‌ಸ್ಟೇಟ್ ಕೌನ್ಸಿಲ್‌ನವರ ಮುಂದೆ ಬರುತ್ತದೆ. ಅವರು ಒಪೀನಿಯನ್ ಕೊಟ್ಟಿದ್ದಾರೆ ಎಂಬುದು ಕಾಲಂ-4ರಲ್ಲಿ ಇದೆ. ಆ 4ನೇ ಕಾಲಂನಲ್ಲಿ ಯಾವಾಗ ಅಗ್ರೀಡ್ ಎಂದು ಬಂದ ಮೇಲೆ ನಾವು ಏನು ತಿಳಿದುಕೊಳ್ಳಬೇಕು?

ಅದು ಇಲ್ಲ ಅಂದರೆ ಕಡೆಯ ಪಕ್ಷ, ಇಂಥಿಂಥ ರಾಜ್ಯಗಳು ಒಪ್ಪಿಲ್ಲ, they have given a dissent note, they have boycotted, they have walked out ಎಂದಿರಬೇಕಲ್ಲ.

ಶ್ರೀ ಸಿದ್ಧರಾಮಯ್ಯ : ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್‌ಗಳಲ್ಲಿ ನಮ್ಮ ಅಭಿಪ್ರಾಯಗಳನ್ನು ಕೇಳುತ್ತಾರೆ. ನಾವು ಮಾತನಾಡುವಾಗ ನಮ್ಮ ಅಭಿಪ್ರಾಯಗಳನ್ನು ನಮ್ಮ ಭಾಷಣದಲ್ಲಿ ಹೇಳುತ್ತೇವೆ. ನಮ್ಮ ಅಭಿಪ್ರಾಯಗಳನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇವೆ. ಅಲ್ಲಿ ಆ ಸಮಯದಲ್ಲಿ ಯಾವ ಯಾವ ರಾಜ್ಯಗಳವರು ಒಪ್ಪಿಕೊಂಡರು ಎಂಬಿತ್ಯಾದಿ ಪ್ರೊಸೀಡಿಂಗ್ಸ್ ಯಾವುದೂ ಅಲ್ಲಿ ಆಗುವುದಿಲ್ಲ. ಆಮೇಲೆ ಇವರು ಇದನ್ನು ಮಾಡಿಕೊಂಡಿರತಕ್ಕಂಥಾದ್ದು. ನಾವುಗಳು ಭಾಷಣ ಮಾಡಿ ಮೀಟಿಂಗ್ ಎಲ್ಲಾ ಮುಗಿದ ಮೇಲೆ.... ಆವೊತ್ತು ಹೋಂಮಿನಿಸ್ಟರ್‌ರವರು , ಪ್ರಧಾನಿಯವರು, ಎಲ್ಲರೂ ಇದ್ದರು. ಸರ್ಕಾರಿಯಾ ಕಮಿಶನ್ ಮತ್ತು ಸ್ಟ್ಯಾಂಡಿಂಗ್ ಕಮಿಶನ್‌ರವರ ರೆಕಮಂಡೇಶನ್ಸ್ ಮೇಲೆ ನಮ್ಮ ರಾಜ್ಯದ ನಿಲುವು ಈ ರೀತಿಯಾಗಿ ಸ್ಪಷ್ಟವಾಗಿ ಇದೆ. What is our stand to the proposals made in the agenda? ಇದಕ್ಕೆ ನಾವು ಬಹಳ ಸ್ಪಷ್ಟವಾಗಿ ಆಗುವುದಿಲ್ಲ ಎಂದು ಹೇಳಿದ್ದೇವೆ. ನಮ್ಮ ಭಾಷಣದಲ್ಲಿ ನಾವೇನು ಹೇಳಿದ್ದೇವೆ that is our stand. ನಾವು ಅದೆಲ್ಲವನ್ನೂ ಕೂಡ ಒಪ್ಪಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪಾಧ್ಯಕ್ಷರೇ, ಭಾಷಣದಲ್ಲಿರತಕ್ಕಂಥ ಸ್ಟಾಂಡ್ ಇದು ಎಂದು ಅವರು ಈಗ ಹೇಳಿಕೊಳ್ಳಬಹುದು. ಇವೊತ್ತು ಕೇಂದ್ರ ಸರಕಾರದಲ್ಲಿರತಕ್ಕಂಥ ಅಥೆಂಟಿಕ್ ಡಾಕ್ಯುಮೆಂಟ್ ಏನು? ಅದು ಆ ಮೀಟಿಂಗ್‌ನಲ್ಲಿ ನಡೆದಿರತಕ್ಕಂಥ ಪ್ರೊಸೀಡಿಂಗ್ಸ್. ಅದನ್ನು ಅವರು ನೋಡುತ್ತಾರೆ. ನಿಮ್ಮ ಭಾಷಣ ಒಂದು ಕಡೆಯಲ್ಲಿ ಪ್ರಿಂಟ್ ಮಾಡಿದ್ದು ಇರಬಹುದು. ಆದರೆ ಅಲ್ಲಿರತಕ್ಕಂಥ ಪ್ರೊಸೀಡಿಂಗ್ಸ್‌ನಲ್ಲಿ ಏನು ಇರುತ್ತದೆ ಅಂದರೆ, ಸಭೆಯಲ್ಲಿ ಯಾರು ಅಗ್ರೀ ಆದರು, ಯಾರು ಡಿಸ್‌ಅಗ್ರೀ ಆದರೂ ಯಾರು ಏನೇನು ಹೇಳಿದರು ಎಂಬುದು ಇರುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ, 212, Annexure - 3, column No. 4. Once an application under section 3 of the Inter-state River Water Disputes Act is received from a state, it should be mandatory on the Union Government to constitute a Tribunal within a period not exceeding one year from the date of the receipt the application of any disputant State. The Inter-State River Water Disputes Act may be suitably amended for this purpose."

ಎಂದು ಇದೆಯಲ್ಲಾ? ಇದು ಸರ್ಕಾರಿಯಾ ಕಮಿಶನ್‌ರವರದ್ದು. ಆ ಮೇಲೆ ಸ್ಟಾಂಡಿಂಗ್ ಕಮಿಟಿಯವರು ಅಗ್ರೀ ಆದರು. In the Inter-State Council

ಆ ಮೇಲೆ ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಏನಾಯಿತು? Agreed with the modification that the Disputes already settled may not be re-opened.

ಎಂಬ ವಿಚಾರ ಬಂತು. ಅಂದರೆ ಯಾವ ಡಿಸ್ಪ್ಯೂಟ್ ಸೆಟಲ್ ಆಗಿದೆ, ಅವುಗಳನ್ನು ರಿ-ಓಪನ್ ಮಾಡುವುದಕ್ಕೆ ಅವಕಾಶ ಇಲ್ಲ. With this modification the Interstate Council accepted, ಅದಕ್ಕಾಗಿ ಎಲ್ಲವನ್ನೂ ಕೂಡ ಅವರು ಸಾರಾಸಗಟಾಗಿ ಒಪ್ಪಿಕೊಂಡಿದ್ದಾರೆ ಎಂದು ಅಲ್ಲ. ಒಂದು ಕಡೆಯಲ್ಲಿ ಅಗ್ರೀ ಆಗಿದ್ದಾರೆ. ಒಂದು ಕಡೆ ಇಂಟರ್‌ಸ್ಟೇಟ್ ಕಾನ್ಸಿಲ್, ಒಂದು ಕಡೆ ಡಿಸ್ ಅಗ್ರೀ ಆಗಿದೆ. ಅಗ್ರೀ-ಡಿಸ್‌ಅಗ್ರೀ ಎಂಬ ಒಂದೇ ವಿಚಾರ ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಇರುವುದಿಲ್ಲ. ಅಲ್ಲಿ ವಾಟರ್ ಡಿಸ್ಪ್ಯೂಟ್ ವಿಚಾರ ಅಷ್ಟೇ ಅಲ್ಲ. ತಮಗೆ ಗೊತ್ತಿರುವ ಹಾಗೆ ತಮ್ಮ ಸೇಲ್ಸ್ ಟ್ಯಾಕ್ಸ್‌ನ ಅನೇಕ ವಿಚಾರಗಳು ಬರುತ್ತವೆ. ಅಕ್ಕಪಕ್ಕದ ರಾಜ್ಯಗಳಲ್ಲಿರತಕ್ಕಂಥ ಸೇಲ್ಸ್‌ಟ್ಯಾಕ್ಸ್ ಅಥವಾ ಬೇರೆ ಬೇರೆ ಕಾನೂನಿನಲ್ಲಿನ ಅನಾಮಲೀಸ್ ಏನಿವೆ, ಅದನ್ನು ಸರಿಪಡಿಸುವುದಕ್ಕೋಸ್ಕರ ಎಷ್ಟೋ ಸಾರಿ ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು, ಇಂಥ ವಿಚಾರದಲ್ಲಿ ತೊಂದರೆ ಇದೆ, ಅದಕ್ಕೆ ನೀವೇನು ಮಾಡಬಹುದು, ಅವರೇನು ಮಾಡಬಹುದು, ರಿಲ್ಯಾಕ್ಸ್ ಮಾಡಬಹುದೇನು ಎನ್ನತಕ್ಕಂಥ ಮಾತುಗಳು ಬರುತ್ತವೆ. ಎಷ್ಟೋ ಸಾರಿ....

ಶ್ರೀ ಸಿದ್ದರಾಮಯ್ಯ : ಮಾನ್ಯ ಖರ್ಗೆಯವರೇ, ತಮ್ಮ ಅನುಕೂಲಕ್ಕಾಗಿ ನಾನು ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. "Inter State Council Secretariat. Statement showing

proposed consensus. "Proposed Consensus" ಎಂದು ಇದೆಯೇ ಹೊರತು, ನಾವು ಎಲ್ಲಾ ರಾಜ್ಯಗಳವರು ಒಪ್ಪಿಕೊಂಡಿದ್ದೇವೆ ಎಂಬ ಅರ್ಥವಲ್ಲ. ಬಹಳ ಸ್ಪಷ್ಟವಾಗಿ ಇದರಲ್ಲಿ ಮೇಲ್ಗಡೆಯಲ್ಲಿ ಬರೆದಿದ್ದಾರೆ. ನಾವು ಅವು ಯಾವುದಕ್ಕೂ ಒಪ್ಪಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವುಗಳು ಮೇಲ್ಗಡೆ ಬರೆದುದನ್ನು ಓದಿದ್ದೀರಿ. ಕೆಳಗಡೆ ಬರೆದುದ್ದನ್ನು ಕೂಡ ಓದಿ. ನಾನು ಈಗ ಓದಿ ಹೇಳುತ್ತೇನೆ. ಕಾಲಂ ನಂಬರ್ 1ರಲ್ಲಿ ಆರ್‌ಇಸಿ ಐಟಂ. ಕಾಲಂ ನಂಬರ್-2ರಲ್ಲಿ ರೆಕಮಂಡೇಷನ್ಸ್ ಆಫ್ ದ ಕಮಿಶನ್. ಕಾಲಂ ನಂಬರ್ 3ರಲ್ಲಿ proposed consensus of the Standing Committee. Column No.4 - Recommendations of the Inter-State council".

3.20 ಪಿ.ಎಂ

ಇದು ಕೇವಲ ಶಿಫಾರಸ್ಸಾಗಿತ್ತು. ಕನ್ಸೆನ್‌ಸಸ್ ಸ್ಟ್ಯಾಂಡಿಂಗ್ ಕಮಿಟಿಯದ್ದು. ರೆಕಮೆಂಡೇಶನ್ ಯಾರು ಅಕ್ಸೆಪ್ಟ್ ಮಾಡುವುದು ಎಂದರೆ ಇಂಟರ್ ಸ್ಟೇಟ್ ಕೌನ್ಸಿಲ್. ಅದಕ್ಕಾಗಿ ಅಲ್ಲಿರುವುದು ಬರುವುದಿಲ್ಲ. ತಾವು ಇದರ ಬಗ್ಗೆ ಸ್ವಲ್ಪ ನೋಡಿ ಆಮೇಲೆ ಹೇಳಿ. ಇವೊತ್ತು ಏನಾಗಿದೆಯೆಂದರೆ ಸರ್ಕಾರ ಒಂದು ವೇಳೆ ಇದನ್ನು ತಪ್ಪಾಗಿ ಒಪ್ಪಿಕೊಂಡರೋ ಅಥವಾ ಇದಕ್ಕೆ ಏನಾದರೂ ಮಿಸ್‌ಗೈಡ್ ಆಯಿತೋ ಅಥವಾ ಇದರ ಕಡೆ ಲಕ್ಷ್ಯ ಕೊಡಲಿಲ್ಲವೋ ಅಥವಾ ಇದರ ಬಗ್ಗೆ ತಿಳಿದೂ ತಿಳಿಯದೇ ಇರತಕ್ಕಂಥ ದೃಷ್ಟಿಯಿಂದ ಇದನ್ನು ಮಾಡಿದರೋ ಎಂಬ ಬಗ್ಗೆ ಸ್ಪಷ್ಟವಾಗಿ ತಾವು ಹೇಳಬೇಕಾಗುತ್ತದೆ. ಏಕೆಂದರೆ ಇದರ ಬಗ್ಗೆ ಪುನಃ ಒಬ್ಬರು ವಾದ ಮಾಡುವುದು ಮತ್ತೊಬ್ಬರು ಪ್ರತಿವಾದ ಮಾಡುವುದು ಬೇಡ. ಏಕೆಂದರೆ ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲರೂ ಒಟ್ಟಿಗೆ ಒಂದೇ ನಿಲುವು ತೆಗೆದುಕೊಂಡು ಈ ಹೌಸ್‌ನಲ್ಲಿ ರೆಸಲ್ಯೂಷನ್ ಪಾಸ್ ಮಾಡಿದ್ದೇವೆ. ನಾವು ಇಲ್ಲಿಯವರೆಗೆ ಒಪ್ಪಿಕೊಂಡು ಬಂದ ವಾದವೆಂದರೆ ನ್ಯಾಶನಲ್ ವಾಟರ್ ಪಾಲಿಸಿ ಆಧಾರದ ಮೇಲೆ ಗೈಡ್‌ಲೈನ್ಸ್ ಆಗುವವರೆಗೆ ಮತ್ತೆ ಯಾವುದೇ ರೀತಿಯಾದ ಕಾರ್ಯಕ್ಕೆ ಹೋಗಬಾರದು ಎಂದು ಹೇಳಿದ್ದೇವೆ. ಅದಕ್ಕೋಸ್ಕರ ಹಿಂದೆ ಎಷ್ಟೋ ಪ್ರಯತ್ನಗಳು ನಡೆದುಕೊಂಡು ಬಂದಿದೆ. ಅವೆಲ್ಲದರ ಬಗ್ಗೆ ಈಗ ಇತಿಹಾಸ ಹೇಳುವುದಕ್ಕೆ ಆಗುವುದಿಲ್ಲ. ಪಿ.ವಿ. ನರಸಿಂಹರಾಯರ ಕಾಲದಲ್ಲಿ ಏನಾಯಿತು, ದೇವೇಗೌಡರು ಇದ್ದಾಗ ಏನಾಯಿತು, ಇವೊತ್ತು ಯುನೈಟೆಡ್ ಫ್ರಂಟ್ ಗೌವರ್ನಮೆಂಟ್‌ಗೆ ಕರುಣಾನಿಧಿಯವರೇ ಶಹಭಾಸ್‌ಗಿರಿ ಕೊಡುತ್ತಿದ್ದಾರೆ. ಅನಾಹುತವೆಲ್ಲವನ್ನೂ ನಿಮ್ಮ ಕಾಲದಲ್ಲಿಯೇ ಮಾಡಿ ಈಗ ಮತ್ತೆ ಒಂದು ಅನಾಹುತವನ್ನು ಮಾಡುವುದಕ್ಕೆ ಬರುತ್ತಿದ್ದೀರಿ. ಆ ರೀತಿ ಇವೊತ್ತು ಪ್ರೊಸೀಡಿಂಗ್ಸ್‌ನಲ್ಲಿ ಬಂದಿದೆ. ನೀವು 28ನೇ ನವೆಂಬರ್‌ನಲ್ಲಿ ಏನು ಮೀಟಿಂಗ್ ಆಗಿದೆ ಅದರಲ್ಲಿ ಇವೊತ್ತು ನೀವು ಒಪ್ಪಿಕೊಂಡು ಬಂದು ದೊಡ್ಡ ತಪ್ಪನ್ನು ಮಾಡಿದ್ದೀರಿ. ಇದರಿಂದ ರಾಜ್ಯಕ್ಕೆ ದೊಡ್ಡ ಅನ್ಯಾಯವಾಗಿದೆ. ಇದರಿಂದ ನೀವು ರಾಜ್ಯಕ್ಕೆ ದ್ರೋಹ ಬಗೆದಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಹೇಳಬೇಕಾಗುತ್ತದೆ. ಇದರಿಂದ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ. ನೀವು ಹೇಳಬಹುದು ನಿಮ್ಮ ಭಾಷಣದೊಳಗೆ ಒಪ್ಪಿಲ್ಲವೆಂದು. ನಿಮ್ಮ ಭಾಷಣದ ಬಗ್ಗೆಯೇ ಅವರು ಏನು ಹೇಳಿದ್ದಾರೆ ನಿಮಗೆ ಗೊತ್ತೇನು? It will be taken as read and recorded. ಅದನ್ನು ಅವರು

ಡಿಸೆಂಟ್ ನೋಟ್ ಎಂದು ತೆಗೆದುಕೊಂಡಿಲ್ಲ, ಅಥವಾ ನಿಮ್ಮ ಪ್ರೊಟೆಸ್ಟ್ ಇದೆ ಎಂದು ಅವರು ಬರೆದಿಲ್ಲ. ಎಷ್ಟೋ ಕಡೆ ರಾಜ್ಯದ ಹಿತದೃಷ್ಟಿಯಿಂದ ಯಾರಾದರೂ ಮಾತನಾಡಿದರೆ ಅದು ಬರುವುದಿಲ್ವೇನು? ನೀವು ಇನ್‌ಸಿಸ್ಟ್ ಮಾಡದೇ ಇದ್ದರೂ ಕೂಡ ಅವರು ಬರೆಯುತ್ತಾರೆ. ಅಥವಾ ನೀವು ಆ ಪ್ರೊಸೀಡಿಂಗ್ಸ್ ಆಗುವವರೆಗೆ ಅದರಲ್ಲಿ ಏನು ಬರೆದಿದ್ದಾರೆ ಅದನ್ನು ಓದಿ ಹೇಳಿ ಎಂದರೆ ಅವರು ಓದಿ ಹೇಳುತ್ತಾರೆ. ಆ ಪ್ರೊಸೀಡಿಂಗ್ಸನ್ನು ಕೇಳುವಷ್ಟು ಪುರುಸೊತ್ತು ನಿಮಗೆ ಇಲ್ಲ ಎಂದರೆ ಅದರ ಬಗ್ಗೆ ಯಾರು ನಿಮಗೆ ಹೇಳುವುದಕ್ಕೆ ಹೋಗುತ್ತಾರೆ. ಅಥವಾ ನೀವು ಪ್ರೊಸೀಡಿಂಗ್ಸ್ ಓದಿದ ಮೇಲೆ ನಾವು ಪ್ರೊಟೆಸ್ಟ್ ಮಾಡುವುದಕ್ಕೆ ಪತ್ರವನ್ನು ಬರೆದಿದ್ದೇವೆ ಎಂದು ನೀವು ಹೇಳುವುದಾದರೆ ಯಾವ ತಾರೀಖಿನಲ್ಲಿ ಅದನ್ನು ಬರೆದಿದ್ದೀರಿ ಹೇಳಿ. ಸರ್ಕಾರಿಯಾ ಕಮಿಶನ್ ರೆಕಮೆಂಡೇಷನ್ಸ್‌ಗೆ ನಾವು ಒಪ್ಪಿಲ್ಲ ಎನ್ನತಕ್ಕಂಥ ವಾದ ಎಂಬುದು ನಿಮ್ಮದೇನಿದೆ ಅದರ ಬಗ್ಗೆ ಪ್ರೊಟೆಸ್ಟ್ ಮಾಡುವುದಕ್ಕಾಗಿ ನೀವು ಪತ್ರವನ್ನು ಬರೆದಿದ್ದರೆ ಅದನ್ನು ಸದನದ ಮುಂದೆ ಇಡಿ. ನಾವು ಅಂದು ಭಾಷಣದಲ್ಲಿ ಇಂಥಿಂಥ ಮಾತುಗಳನ್ನು ಹೇಳಿದ್ದೆವು ಆದರೆ ಪ್ರೊಸೀಡಿಂಗ್ಸ್‌ನಲ್ಲಿ ಅವೆಲ್ಲವನ್ನು ಗಣನೆಗೆ ತೆಗೆದುಕೊಳ್ಳದೇ ತಪ್ಪಾಗಿ ಪ್ರಿಂಟ್ ಆಗಿದೆ ಎಂದು ತಿಳಿಸಿ ಪ್ರೊಟೆಸ್ಟ್ ನೋಟ್ ಅಥವಾ ಡಿಸೆಂಟ್ ನೋಟನ್ನು ನೀವೇನಾದರೂ ಕಳುಹಿಸಿದ್ದೀರಾ? ಕಳುಹಿಸಿದ್ದರೆ ಯಾವ ತಾರೀಖು ಕಳುಹಿಸಿದ್ದೀರಿ ಎಂಬುದನ್ನು ನಮಗೆ ಖಚಿತಪಡಿಸಲು ನಮಗೆ ಅದರ ಕಾಪಿಯನ್ನು ಒದಗಿಸಿಬಿಡಿ. ನಾವು ಅದನ್ನು ಓದಿಕೊಳ್ಳುತ್ತೇವೆ ಮತ್ತು ಸರ್ಕಾರ ಇದರ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದೆ ಎಂದು ತಿಳಿದುಕೊಳ್ಳುತ್ತೇವೆ. ಒಂದು ವೇಳೆ ನೀವು ಪತ್ರವನ್ನು ಕಳುಹಿಸಿಲ್ಲ ಎಂದರೆ ಖಂಡಿತವಾಗಿ ನೀವು ಇದನ್ನು ಮರೆಮಾಚಬೇಕು ಅಥವಾ ಆ ತಪ್ಪನ್ನು ಯಾವುದೇ ರೀತಿಯಾಗಿ ಡಿಫೆಂಡ್ ಮಾಡಿಕೊಂಡು ಇರಬೇಕು ಎನ್ನುವ ದೃಷ್ಟಿಯಿಂದ ಕುಳಿತಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಹೇಳಬೇಕಾಗುತ್ತದೆ. ಇದರಿಂದಾಗಿ ಏನಾದರೂ ಅನಾಹುತವಾದರೆ ಮುಂದೆ ಅದಕ್ಕೆ ಸಂಪೂರ್ಣವಾದ ಜವಾಬ್ದಾರಿಯನ್ನು ನೀವೇ ಹೊರಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಉಪಾಧ್ಯಕ್ಷರೇ, ನಿಮ್ಮ ಮುಖಾಂತರ ನಾನು ಅವರಿಗೆ ಹೇಳುತ್ತಿದ್ದೇನೆ.

+ ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಉಪಾಧ್ಯಕ್ಷರೇ, ಈ ಕಾವೇರಿ ಹೋರಾಟಕ್ಕೂ ಮತ್ತು ನನಗೂ 40 ವರ್ಷಗಳ ಸಂಪರ್ಕವಿದೆ. 1957ನೇ ಇಸವಿಯಿಂದ ಹೆಚ್. ಎಂ. ಚೆನ್ನಬಸಪ್ಪನವರ ಶಿಷ್ಯನಾದಾಗಿನಿಂದಲೂ ನನ್ನ ಹೋರಾಟ ಪ್ರಾರಂಭಗೊಂಡಿದೆ. ನಾನು ಮೊದಲಿನಿಂದಲೂ ಇದರ ಬಗ್ಗೆ ನೋಡಿಕೊಂಡು ಬಂದಿದ್ದೇನೆ. ಸ್ವಾತಂತ್ರ್ಯ ಪೂರ್ವದಲ್ಲೇನೋ ಚಾರಿತ್ರಿಕ ಕಾರಣಗಳಿಂದ ನಮಗೆ ಅನ್ಯಾಯವಾಯಿತು. ಸ್ವಾತಂತ್ರ್ಯ ಬಂದ ನಂತರ ಇಲ್ಲಿ ಆಡಳಿತ ನಡೆಸತಕ್ಕಂಥವರ ಇಚ್ಛಾಶಕ್ತಿಯ ಕೊರತೆಯಿಂದ ನಮಗೆ ಅನ್ಯಾಯವಾಗಿದೆ. ಇದು ಒಂದು ಕಡೆ. ಇನ್ನೊಂದು ಕಾರಣವೆಂದರೆ ಕೇಂದ್ರದಲ್ಲಿ ಆಡಳಿತ ನಡೆಸುವವರಿಗೆ ಏನು ಕಾರಣವೋ ಏನೋ ಗೊತ್ತಿಲ್ಲ ನಮ್ಮ ಕರ್ನಾಟಕ ಕಂಡರೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಾರೆ. ಅದನ್ನು ವಿರೋಧ ಮಾಡುವವರು ಹೆಚ್ಚು ಜನರು ಹುಟ್ಟಿಕೊಳ್ಳಲಿಲ್ಲ. ಕರ್ನಾಟಕದವರೇ ವಾಟರ್ ರಿಸೋರ್ಸಸ್ ಮಂತ್ರಿಗಳಾಗಿದ್ದಾಗ ಪಾಲಿಸಿ ಫ್ರೇಮ್ ಮಾಡಿ ನ್ಯಾಷನಲ್ ವಾಟರ್ ರಿಸೋರ್ಸಸ್ ಪಾಲಿಸಿ ಮಾಡಿ ಎಂದು ಶಂಕರಾನಂದರವರು ಇದ್ದಾಗ ಇಟ್ಟರು. ಅದರಲ್ಲಿ ಉಪ್ಪು, ಖಾರ, ಹುಳಿ ಏನೂ ಇರಲಿಲ್ಲ. ಆಗ

ಕರ್ನಾಟಕದವರೇ ಇದ್ದರು. ನಾವು ಅವರನ್ನು ಬೇಡಿಕೊಂಡೆವು, ಮೊದಲು ನೀವು ಗೈಡ್‌ಲೈನ್ಸ್ ಹಾಕಿ ಎಂದು ಕೇಳಿಕೊಂಡೆವು. ಆಗ ಕೇಂದ್ರದಲ್ಲಿ ರಾಜೀವ್ ಗಾಂಧಿಯವರು ಇದ್ದರು. ನಮ್ಮ ಕರ್ನಾಟಕದವರೇ ಬಹಳಷ್ಟು ಸದಸ್ಯರುಗಳಿದ್ದರು. ಆ ಸಂದರ್ಭದಲ್ಲಿ ಏನು ಮಾಡಿದರೂ ನಡೆದುಹೋಗುತ್ತಿತ್ತು. ಆಗ ಕೇಂದ್ರದಲ್ಲಿಯೂ ರಾಜಕೀಯ ಇಚ್ಛಾಶಕ್ತಿ ಇರಲಿಲ್ಲ. ಇದು ಒಂದು ಕಡೆಯಾಯಿತು. ತಮಿಳುನಾಡಿನಲ್ಲಿ ಅಸೆಂಬ್ಲಿ ನಡೆಯುವಾಗಲೇನಾದರೂ ಈ ವಿಚಾರ ಪ್ರಸ್ತಾಪವಾದರೆ ಅಲ್ಲಿಯ ಮುಖ್ಯಮಂತ್ರಿಗಳು ಖುದ್ದಾಗಿ ಹಾಜರಿದ್ದು ಸರ್ಕಾರದ ಸ್ಪಷ್ಟ ನಿಲುವನ್ನು ಸದನದಲ್ಲಿ ಹೇಳುತ್ತಾರೆ. ನಮ್ಮಲ್ಲಿ ಇದೊಂದು ಲೋಪವೆಂದೇ ನನಗೆ ಅನ್ನಿಸುತ್ತದೆ. ನಮ್ಮ ಮುಖ್ಯಮಂತ್ರಿಗಳು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಇದೊಂದು ಜ್ವಲಂತ ಸಮಸ್ಯೆಯೆಂದು ಪರಿಗಣಿಸಿ ಅವರಿಗೆ ಏನೇ ಕೆಲಸ ಕಾರ್ಯವಿದ್ದರೂ ಅವುಗಳನ್ನು ಬಿಟ್ಟು ಇದೊಂದು ನಮಗೆ ಅನಂತ ಕಾಲದವರೆಗೆ ಆಗುವ ಶಿಕ್ಷೆ ಎಂದು ತಿಳಿದು ಅದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವನ್ನು ಹೇಳಬೇಕಾದ ರಾಜಕೀಯ ಇಚ್ಛಾಶಕ್ತಿ ಮತ್ತು ಕಾತುರತೆ ನಮ್ಮ ಮುಖ್ಯಮಂತ್ರಿಗಳಿಗೆ ಇಲ್ಲ. ಇದು ದುರ್ದೈವ ಎಂದು ನನಗನ್ನಿಸುತ್ತಿದೆ. ಇಂಟರೀಮ್ ಆರ್ಡರ್ 25.6.89ಕ್ಕೆ ಬಂತು ಕ್ಲಾರಿಫಿಕೇಟರಿ ಆರ್ಡರ್ 3.4.92ಕ್ಕೆ ಬಂತು. ಅವೆರಡೂ ಆರ್ಡರ್‌ಗಳು ಇನ್-ಇಕ್ವಿಟಬಲ್ ಎಂದು ಹೇಳಿದೆವು, ಅದಕ್ಕೆ ಕಾರಣವನ್ನೂ ಕೊಟ್ಟೆವು, ಸೆಲ್ಫ್ ಕಾನ್‌ಟ್ರಡಿಕ್ಟರಿ ಎಂದು ಹೇಳಿದೆವು, ಅದಕ್ಕೆ ಕಾರಣವನ್ನು ಕೊಟ್ಟೆವು, ಇದು ಎಲ್ಲಿಯವರೆಗೂ ಬಂತು ಎಂದರೆ ಇದು ನಡೆದುಕೊಂಡೇ ಬಂತು, ಆ ಇಂಟರೀಮ್ ಆರ್ಡರನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಕೇಂದ್ರ ಸರ್ಕಾರ ಹಿಂದೇಟು ಹಾಕಿತು. ಏಕೆಂದರೆ ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಅರಿವಾಗಿ ಇದು ಇನ್-ಇಕ್ವಿಟಬಲ್ ಆರ್ಡರ್, ಸೆಲ್ಫ್ ಕಾನ್‌ಟ್ರಡಿಕ್ಟರಿ ಆರ್ಡರ್ ಆಗಿರುವುದರಿಂದ ಇದನ್ನು ಇಂಪ್ಲಿಮೆಂಟ್ ಮಾಡಿದರೆ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎಂದು ಅಂದು ಆಡಳಿತ ನಡೆಸುತ್ತಿದ್ದ ಕೇಂದ್ರ ಸರ್ಕಾರಕ್ಕೆ ಅರಿವಾಯಿತು. ಆದುದರಿಂದ 1991ರ ಜೂನ್ 25ರಲ್ಲಿ ಆರ್ಡರ್ ಬಂದರೂ ಕೂಡ ಅದನ್ನು ಅನುಷ್ಠಾನಗೊಳಿಸುವುದಕ್ಕೆ ಯಾರೂ ಕೂಡ ಮುಂದಾಗಲಿಲ್ಲ. ಪಿ.ವಿ. ನರಸಿಂಹರಾಯರಿಗೂ ಇದು ಸರಿಯಿಲ್ಲವೆಂದು ಗೊತ್ತಾಯಿತು. ಏಕೆಂದರೆ ಇದು ಕುರುಡರು ಆನೆಯನ್ನು ಗುರುತಿಸಿದ ಹಾಗೆ ಇತ್ತು. Sessions Court functioning without the aid of Criminal Procedure Code and Indian Penal Code. ಆ ರೀತಿ ಇವೊತ್ತು ತೀರ್ಮಾನ ಬರತಕ್ಕಂಥದ್ದು. ಈ ಟ್ರಿಬ್ಯೂನಲ್ ಆರ್ಡರ್ ಆ ರೀತಿ ಬರತಕ್ಕಂಥದ್ದು. ಇದನ್ನು ನರಸಿಂಹರಾಯರು ತಿಳಿದಿದ್ದರಿಂದಲೇ the only way out is to formulate National Water Policy ಎನ್ನುವ ತೀರ್ಮಾನಕ್ಕೆ ಅವರು ಬಂದಿದ್ದರು. ಆ ದಿವಸ ಒಂದು ಸಭೆಯನ್ನು ಕರೆದರು, ಅದರಲ್ಲಿ ಒಂದು ಡ್ರಾಫ್ಟ್ ಸ್ಕೀಮನ್ನು ಸರ್ಕ್ಯುಲೇಟ್ ಮಾಡಿದರು, ಸುಪ್ರೀಂ ಕೋರ್ಟ್ ಕೂಡ ಹೇಳಿತ್ತು. ಆ ಡ್ರಾಫ್ಟ್ ಸ್ಕೀಮ್ ನಮಗೂ ಬಂದಿತ್ತು. ನಾವೆಲ್ಲರೂ ಕೂಡ ಅದನ್ನು ನೋಡಿದೆವು. ಅದಕ್ಕೆ ನಾವು ಏನೇನು ಸಲಹೆಯನ್ನು ಕೊಡಬೇಕಾಗಿತ್ತೋ ಅದನ್ನು ನಾವು ಕೊಟ್ಟೆವು. ಗ್ರಹಚಾರಕ್ಕೆ ನರಸಿಂಹರಾಯರು ಹೋದಮೇಲೆ, an era of blackmail politics started in India. It was black-mail by Tamilnadu. ಬ್ಲಾಕ್‌ಮೇಲ್ ಮಾಡತಕ್ಕಂಥ ರಾಜಕೀಯ ಬಂತು. ಸಂಯುಕ್ತ ರಂಗ ಅಧಿಕಾರಕ್ಕೆ ಬಂತು. ಇದು ಬ್ಲಾಕ್‌ಮೇಲ್ ರಾಜಕೀಯಕ್ಕೆ ಒಳಗಾಯಿತು. ಒಬ್ಬರಲ್ಲ ಒಬ್ಬರು ಬ್ಲಾಕ್‌ಮೇಲ್ ಮಾಡುವುದಕ್ಕೆ ಅಲ್ಲಿ ಸೇರಿಕೊಂಡಿರುತ್ತಾರೆ. ಹೋದ ಬಾರಿ ತಮಿಳ್ ಮಾನಿಲಾ

ಕಾಂಗ್ರೆಸ್ ಮತ್ತು ಡಿ.ಎಂ.ಕೆ. ಪಕ್ಷಗಳು ಬ್ಲಾಕ್‌ಮೇಲ್ ಮಾಡುವುದಕ್ಕೆ ಇತ್ತು. ಈ ಬ್ಲಾಕ್‌ಮೇಲ್ ತಂತ್ರಕ್ಕೆ ಮಣಿದು ಕೊನೆಗೆ ಇದು ಎಲ್ಲಿಯವರೆಗೆ ಹೋಯಿತೆಂದರೆ ಅಟಾರ್ನಿ ಜನರಲ್ ಏಪ್ರಿಲ್ 97ರಲ್ಲಿ ಸುಪ್ರೀಂ ಕೋರ್ಟಿನಲ್ಲಿ ಒಂದು ಸ್ಟೇಟ್‌ಮೆಂಟ್ ಕೊಡುತ್ತಾರೆ. ಏನೆಂದರೆ ಸೆಕ್ಷನ್ 60ಎ ಪ್ರಕಾರ ಒಂದು ಡ್ರಾಫ್ಟ್ ಸ್ಕೀಮನ್ನು ಎಲ್ಲಾ ರಾಜ್ಯಗಳಿಗೆ ಕಾಮೆಂಟ್ಸ್‌ಗೆ ಕಳುಹಿಸುತ್ತೇವೆ ಎಂದು ಹೇಳಿದರು. ಅಲ್ಲಿ ಯುನೈಟೆಡ್ ಫ್ರಂಟ್‌ನಲ್ಲಿ ಒಳಗೆ ಯಾರು ಯಾರನ್ನೂ ಬ್ಲಾಕ್‌ಮೇಲ್ ಮಾಡಿದರು, ಇಂಥ ಪರಿಸ್ಥಿತಿ ಏಕೆ ಬಂತು, ಅವರು ಏಕೆ ಕಾಗದವನ್ನು ಕೊಟ್ಟರು, ಇದನ್ನೆಲ್ಲಾ ಹೇಳುವುದಕ್ಕೆ ನನ್ನ ಹತ್ತಿರ ಉತ್ತರವಿಲ್ಲ. ಆದರೆ ಇವೆಲ್ಲವೂ ಆದದ್ದಂತೂ ನಿಜ. ಇಷ್ಟಾಯಿತು. ಈಗೇನಾಗಿದೆಯೆಂದರೆ ಇದು ಇನ್-ಇಕ್ವಿಟಬಲ್ಲೋ, ಅನ್-ಜಸ್ಟೋ, ಸೆಲ್ಫ್ ಕಾನ್‌ಟ್ರಡಿಕ್ಟರಿನೋ, ಬೇಸಿಸ್ ಇಲ್ಲದೆಯೇ ಮಾಡಿದರೋ ಅದನ್ನು ಅನುಷ್ಠಾನಕ್ಕೆ ತರಿಸಬೇಕೆಂದು ಯುನೈಟೆಡ್ ಫ್ರಂಟ್ ಪಾರ್ಟನರ್ಸ್, ಕರುಣಾನಿಧಿಯವರು ಹೊರಟಿದ್ದಾರೆ, ಈ ಕಡೆ ಜಯಲಲಿತಾರವರು ಹೊರಟಿದ್ದಾರೆ, ಇದು ಇವೊತ್ತಿನ ಪರಿಸ್ಥಿತಿ ಇರತಕ್ಕಂಥದ್ದು. ಇವೊತ್ತು ಕೊಯಲಿಷನ್ ಗೌವರ್ನಮೆಂಟ್ ಎಂದರೆ ಒಂದು ರೀತಿಯ ಕಲಬೆರಕೆ ಇದ್ದ ಹಾಗೆ. ಸಂಯುಕ್ತ ರಂಗ ಸರ್ಕಾರವಿದ್ದಾಗ ಒಬ್ಬರು 100 ಜನರ ಮೂಗನ್ನು ಹಿಡಿಯುವುದು ಉಸಿರಾಡಬೇಡಿ ಎಂದು. ನಾನು ಪರ್ಮಿಶನ್ ಕೊಟ್ಟರೆ ಉಸಿರಾಡಬೇಕು ಇಲ್ಲದಿದ್ದರೆ ಉಸಿರಾಡಬರದು ಎನ್ನುವ ಹಾಗೆ ಮೂಗನ್ನು ಹಿಡಿಯುತ್ತಿದ್ದರು. ನಾನು ಇವೊತ್ತು ಇಷ್ಟನ್ನು ಮಾತ್ರ ಹೇಳಬಯಸುತ್ತೇನೆ. ಅಂದು ಪತ್ರಿಕಾಗೋಷ್ಠಿಯವರು ನನಗೊಂದು ಪ್ರಶ್ನೆ ಮಾಡಿದರು, ಈ ವ್ಯಾಲಿ ಅಥಾರಿಟಿಯನ್ನು ಕಾನ್ಸ್‌ಟ್ಯೂಟ್ ಮಾಡಿದರೆ ನಿಮ್ಮ ವೈಯಕ್ತಿಕ ನಿಲುವು ಅದರ ಬಗ್ಗೆ ಏನು ಎಂದು ಕೇಳಿದರು. ನಾನು ಅದಕ್ಕೆ ಉತ್ತರ ಹೇಳಲಿಲ್ಲ. ಕೆಲವರ ಹತ್ತಿರ ಮಾತನಾಡೋಣ ಎಂದು ಕೊಟ್ಟೆ. ಅದಾಗಲಿಲ್ಲ, ನನ್ನ ನಿಲುವನ್ನು ನಾನು ಹೇಳುತ್ತೇನೆ, ನಾಗೇಗೌಡರು ಮತ್ತು ಸಿದ್ದರಾಮಯ್ಯನವರು ಸ್ವಲ್ಪ ಕಿವಿಗೊಟ್ಟು ಕೇಳಿಕೊಳ್ಳಿ. ನೀವು ಏನು ಮಾಡಬೇಕು ಎಂಬ ಬಗ್ಗೆ ನಿಲುವನ್ನು ನಾನು ಹೇಳುತ್ತೇನೆ. ನನ್ನ ನಿಲುವು ಇಷ್ಟೆ. ಈ ಬ್ಲಾಕ್ ಮೇಲ್ ತಂತ್ರಕ್ಕೇನಾದರೂ ನಮ್ಮ ವಾಜಪೇಯಿ ಸರ್ಕಾರ ಮಣಿದು ನ್ಯಾಶನಲ್ ವಾಟರ್ ಪಾಲಿಸಿ ಆಗುವ ಮುಂಚೆ ಕಾವೇರಿ ವ್ಯಾಲಿ ಅಥಾರಿಟಿ ಕಾನ್ಸ್‌ಟ್ಯೂಟ್ ಮಾಡಿದರೆ ನಾನು ಅಸೆಂಬ್ಲಿಗೆ ಮತ್ತು ಪಕ್ಷಕ್ಕೂ ರಾಜೀನಾಮೆಯನ್ನು ಕೊಡುತ್ತೇನೆ. ಏಕೆಂದರೆ ಪ್ರೊಟೆಸ್ಟ್ ಮಾಡುವುದಕ್ಕಾಗಿ. ಏಕೆಂದರೆ ಕಾವೇರಿ ಸಮಸ್ಯೆ ನನ್ನ ಉಸಿರಾಗಿದೆ. ವಾಟಾಳ್‌ರವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಒಂದು ದಿನ ವಾಟಾಳ್‌ರವರು ನನ್ನ ಹತ್ತಿರ ಮಾತನಾಡುತ್ತಾ ನಿಮ್ಮ ಜೀವಮಾನವನ್ನೆಲ್ಲಾ ಇದರಲ್ಲಿಯೇ ಕಳೆದು ಬಿಟ್ಟಿರಿ ಎಂದರು. ಈ ಕಾವೇರಿ ವಿಚಾರ ಬಂದಾಗ ನನಗೆ ಅಷ್ಟೊಂದು ನೋವು ಆಗುತ್ತದೆ. ಆದುದರಿಂದ ನಾವೆಲ್ಲರೂ ಕೇಂದ್ರ ಸರ್ಕಾರದ ನಿಲುವಿಗೆ ಪ್ರತಿಭಟಿಸಲು ಬೀದಿಗೆ ಇಳಿಯ ಬೇಕಾಗುತ್ತದೆ.

+ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಂಜೇಗೌಡರು ಯಾವ ದೃಷ್ಟಿಕೋನದಿಂದ ಮಾತನಾಡುತ್ತಾರೋ ಗೊತ್ತಾಗುತ್ತಿಲ್ಲ. ಏಕೆಂದರೆ ನಾವೆಲ್ಲರೂ ಜವಾಬ್ದಾರಿ ಸ್ಥಾನದಲ್ಲಿರುವವರು ಬಹುಶಃ ಈ ದೇಶದ ಇತಿಹಾಸದಲ್ಲಿ ಮೊದಲಬಾರಿಗೆ ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರ ನ್ಯಾಷನಲ್ ಅಜೆಂಡಾದಲ್ಲಿ ಬಹಳ ಸ್ಪಷ್ಟವಾಗಿ ಕುರ್ಚಿಯ ಮೇಲೆ ಆಸೆಯನ್ನಿಟ್ಟುಕೊಳ್ಳದೆ ಅಧಿಕಾರಕ್ಕಾಗಿ ಈ ರೀತಿ ಯಾವುದೇ ಕಾಂಪ್ರೊಮೈಸ್‌ಗೆ ಒಳಗಾಗದೆ

ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸನ್ನು ಫ್ರೇಮ್ ಮಾಡುತ್ತೇವೆಂದು ಸ್ಪಷ್ಟಮಾಡಿದ್ದೇವೆ. ಅಧಿಕಾರದ ಆಸೆ ಇಟ್ಟುಕೊಂಡಿದ್ದರೆ ಈ ಮಾತು ಬರುತ್ತಿರಲಿಲ್ಲ. ಹಿಂದೆ ಅಲ್ಲಿ ಏನು ಹೊಲಸು ಮಾಡಿಬಿಟ್ಟಿದ್ದಾರೆ, ನಮ್ಮವರೇ ಹಿಂದೆ ಅಲ್ಲಿದ್ದರೂ ಒಂದು ಹೆಜ್ಜೆ ಮುಂದಿಡದೆ ಗೊಂದಲದ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ, ಏನೇನು ಡ್ಯಾಮೇಜ್ ಮಾಡಬೇಕೋ ಅದೆಲ್ಲವನ್ನೂ ಮಾಡಿಬಿಟ್ಟಿದ್ದಾರೆ. ಈ ಸನ್ನಿವೇಶದಲ್ಲಿ ತಮಿಳುನಾಡಿನ ಜೊತೆ ಮಾತುಕತೆಗೆ ಸಿದ್ಧರಾಗಿಲ್ಲವೆಂಬ ನಿಲುವು ಸರಿಯಲ್ಲ. ಕಳೆದ ಹತ್ತಾರು ವರ್ಷದಿಂದ ಟ್ರಿಬ್ಯೂನಲ್ ಇಲ್ಲದಿದ್ದಾಗಲೂ ನಾವು ತಮಿಳುನಾಡಿಗೆ ನೀರನ್ನು ಕೊಟ್ಟಿದ್ದೇವೆ. ನಾವು ಅಕ್ರಾಸ್ ದಿ ಟೇಬಲ್ ಕುಳಿತು ಚರ್ಚೆ ಮಾಡೋಣ. ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಫ್ರೇಮ್ ಆದರೆ ಯಾರಿಗೆ ಎಷ್ಟು ನೀರುಬೇಕೋ ಆ ನಿಯಮಾವಳಿಯ ಪ್ರಕಾರ ಹಂಚಿಕೊಳ್ಳೋಣವೆಂದು ನಾವುಗಳು ಹೇಳಬೇಕೇ ಹೊರತು ನಾವು, ನೀವು ರಾಜೀನಾಮೆ ಕೊಡುವ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಹಿಂದೆ ಮಂಡ್ಯದಲ್ಲಿ ಸಭೆಗಳಾಯಿತು, ರಾಜೀನಾಮೆ ಕೊಡುತ್ತೇವೆಂದು ಹೇಳಿದೆವು, ಎಂ.ಪಿ. ಯವರುಗಳು ರಾಜೀನಾಮೆ ಕೊಡುತ್ತೇವೆಂದು ಹೇಳಿದರು, ಪ್ರಚಾರವಾಯಿತು, ದೊಡ್ಡ ದೊಡ್ಡ ಮಾತುಗಳಾಗಿಹೋಯಿತು. ಆದರೂ ಏನೂ ಆಗಲಿಲ್ಲ. ನಾನು ಮಾನ್ಯ ಅಟಲ್ ಬಿಹಾರಿ ವಾಜಪೇಯಿರವರ ಹತ್ತಿರ ಹೋಗಿ ಮಾತನಾಡಿ ಬಂದಿದ್ದೇನೆ. ಸಂಬಂಧಪಟ್ಟ ಪ್ರಮುಖರ ಹತ್ತಿರ ಮಾತನಾಡಿ ಬಂದಿದ್ದೇನೆ. ಕುರ್ಚಿಗಾಗಿ, ಅಧಿಕಾರಕ್ಕಾಗಿ ಯಾವುದೇ ಕಾರಣಕ್ಕೂ ರಾಷ್ಟ್ರೀಯ ಜಲ ನೀತಿಯನ್ನು ಮಾಡದೆಯೇ ವ್ಯಾಲಿ ಅಥಾರಿಟಿ ಮಾಡಬಾರದು ಎಂದು ಹೇಳಿದ್ದೇನೆ. ಇಲ್ಲಿ ರಾಜೀನಾಮೆ ಪ್ರಶ್ನೆಯೇ ಬರುವುದಿಲ್ಲ. ಹಿಂದೆ ಇದ್ದಂಥ ಸಂದರ್ಭದಲ್ಲಿ ಈ ವೀರಾವೇಶದ ಮಾತನ್ನು ಯಾರೂ ಮಾತನಾಡಲಿಲ್ಲ. ಯಾರು ಇಲ್ಲಿದ್ದರು ಅವರೇ ಆ ಹುದ್ದೆಯಲ್ಲಿ ಕುಳಿತುಕೊಂಡಾಗ ನಮ್ಮ ರಾಜ್ಯದ ಹಿತದ ಬಗ್ಗೆ ಯಾವುದೇ ಚಿಂತನೆಯಾಗಲಿಲ್ಲ. ಮೊದಲಬಾರಿಗೆ, ಈ ದೇಶದಲ್ಲಿ ಯಾವುದೇ ರಾಜ್ಯಗಳಿರಬಹುದು, ಈ ರೀತಿ ಡಿಸ್‌ಪ್ಯೂಟ್ ಬಂದಾಗ ಅದಕ್ಕೆ ಒಂದು ಗೈಡ್‌ಲೈನ್ಸ್ ಬೇಕು. ಅದಿಲ್ಲದೆ ಯಾವುದೇ ಟ್ರಿಬ್ಯೂನಲ್, ಸುಪ್ರೀಂ ಕೋರ್ಟ್ ನ್ಯಾಯಸಮ್ಮತವಾದ ಸರಿಸಮಾನವಾದ ತೀರ್ಮಾನವನ್ನು ಕೊಡುವುದಕ್ಕಾಗುವುದಿಲ್ಲ ಎಂಬುದನ್ನು ಮನವರಿಗೆ ಮಾಡಿಕೊಂಡೇ ಆ ರೀತಿ ನಿರ್ಧಾರ ತೆಗೆದುಕೊಂಡಿದ್ದೇವೆ. ಕೇವಲ ಕರ್ನಾಟಕ, ತಮಿಳುನಾಡುಗಳಿಗೆ ಮಾತ್ರವಲ್ಲ, ಈ ಸಮಸ್ಯೆಗೆ ಒಂದು ಪರಿಹಾರ ಹುಡುಕಬೇಕೆಂದು ಈ ನಿರ್ಧಾರ ತೆಗೆದುಕೊಂಡಿದ್ದೇವೆ. ನಾವು ನೀವೆಲ್ಲರೂ ಹೋಗೋಣ. ಒತ್ತಡವನ್ನು ತರೋಣ. ಯಾವುದೇ ಒತ್ತಡಕ್ಕೂ ಮಣಿಯುವ ಸರ್ಕಾರ ಇದಲ್ಲ. ಇದನ್ನು ಕಾರ್ಯರೂಪಕ್ಕೆ ತರುತ್ತೇವೆನ್ನತಕ್ಕ ಮಾತನ್ನು ತಾವು ಹೇಳಿದರೆ ಅದಕ್ಕೆ ಮಹತ್ವ ಬರುತ್ತದೆ. ಆ ಧಾಟಿಯಲ್ಲಿ ತಾವು ಮಾತನಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಯಾರು ಯಾವ ಧಾಟಿಯಲ್ಲಿ ಮಾತನಾಡಬೇಕೆಂದು ಇಲ್ಲಿ ಪಾಠ ಹೇಳಿಕೊಡುತ್ತಿದ್ದಾರೆ. ಮಾನ್ಯ ನಂಜೇಗೌಡರಿಗೆ ಈ ದುರ್ಗತಿ ಬರಬಾರದಿತ್ತು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಪ್ರಾಮಾಣಿಕರಾಗಿದ್ದೇವೆ, ನೀವು ಏನು ಮಾಡಿದಿರಿ?

ಕನ್ನಡಿ ಹಿಡಿದುಕೊಂಡು ನೋಡಿ. ನಿಮ್ಮ ದೇವೇಗೌಡರನ್ನು ಪ್ರಧಾನಿಯಾಗಿ ಮಾಡಿ ಅವರಿದ್ದ ಕಾಲದಲ್ಲಿ ನಿಮ್ಮ ವೀರತ್ವ ಎಲ್ಲಿ ಹೋಗಿತ್ತು? ಮಾಡಿದ್ದೇನು? ನಾನು ನಂಜೇಗೌಡರ ಬಗ್ಗೆ ಮಾತನಾಡುತ್ತಿಲ್ಲ. ನಿಮ್ಮ ಸರ್ಕಾರದ ಬಗ್ಗೆ ಮಾತನಾಡುತ್ತಿದ್ದೇನೆ. ರಾಜ್ಯ ಮತ್ತು ಕೇಂದ್ರದಲ್ಲಿ ಒಂದೇ ಸರ್ಕಾರವಿದ್ದಾಗ ಈ ಗಂಡಸುತನ ಎಲ್ಲಿ ಹೋಗಿತ್ತು? ನಾನು ನಂಜೇಗೌಡರು ಸರಿಸಮಾನವಾಗಿ ನಿಂತುಕೊಂಡು ಹೋರಾಟ ಮಾಡಿದ್ದೇವೆ. ತಾವು ರಾಜಕಾರಣ ಮಾಡಲು ಹೋಗಬೇಡಿ. ನಂಜೇಗೌಡರು ಏನು ಎಂಬುದು ಎಲ್ಲಾರಿಗೂ ಗೊತ್ತಿದೆ. ದೆಹಲಿಗೆ ಹೋಗಿ ನಮ್ಮ ನಿಲುವೇನು ಎಂಬುದನ್ನು ನಾನು ಹೇಳಿದ್ದೇನೆ. ನಾನು ಆವೇಶಕ್ಕೆ ಗುರಿಯಾಗಿ ಮಾತನಾಡುತ್ತಿಲ್ಲ. ದೇಶದ ಹಿತದೃಷ್ಟಿಯಿಂದ ನಮ್ಮ ನಿಲುವು ಒಂದೇ, ನಾವು ಏನು ಬೇಕಾದರೂ ಮಾಡಲು ತಯಾರಾಗಿದ್ದೇವೆ. ತಾವು ಅಧಿಕಾರದಲ್ಲಿದ್ದಾಗ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೆ ಯಾವುದೋ ರಾಜ್ಯವನ್ನು ತೃಪ್ತಿಪಡಿಸಲು ಕನ್ನಡ ನಾಡಿನ ಜನರನ್ನು ಸಂಪೂರ್ಣವಾಗಿ ಬಲಿಕೊಟ್ಟಿರಿ. ಆ ಕೆಲಸವನ್ನು ಭಾರತೀಯ ಜನತಾಪಕ್ಷ ಮಾಡುವುದಿಲ್ಲ. ರಾಜ್ಯದ ಹಿತಾಸಕ್ತಿಗೆ ಧಕ್ಕೆ ಬಂದರೆ ಮಾನ್ಯ ನಂಜೇಗೌಡರಲ್ಲ ನಾವ್ಯಾರೂ ಕುರ್ಚಿಯಲ್ಲಿ ಕುಳಿತುಕೊಳ್ಳಲು ಇಷ್ಟಪಡುವುದಿಲ್ಲ. ತಾವು ಬೇಕಾದರೆ ಕುಳಿತುಕೊಳ್ಳಿ. ನಾವು ಹೊರಗಡೆ ಹೋಗುತ್ತೇವೆ. ಕೇಂದ್ರ ಸರ್ಕಾರವನ್ನು ಕನ್‌ವಿನ್ಸ್ ಮಾಡುತ್ತೇವೆ, ರಾಷ್ಟ್ರೀಯ ಜಲ ನೀತಿಯನ್ನು ಜಾರಿಗೆ ತರುತ್ತೇವೆ, ಆ ವಿಶ್ವಾಸ ನಮಗಿದೆ. ಇದಕ್ಕೆ ಮೊದಲು ನಡೆದ ಸಭೆಗಳಲ್ಲಿ ತಾವುಗಳೇನು ಒಪ್ಪಿಗೆ ಕೊಟ್ಟು ಬಂದಿದ್ದೀರಿ ಅದರ ಸತ್ಯ ಸಂಗತಿಯೇನು ಎಂಬುದನ್ನು ಮೊದಲು ಹೇಳಿ. ಆ ಸಭೆಯಲ್ಲಿ ಸಿದ್ದರಾಮಯ್ಯನವರು ಭಾಷಣ ಓದಿಬಿಟ್ಟರು ಎಂದು ಹೇಳಿದರು. ಆದರೆ ಅಂತಿಮವಾದ ತೀರ್ಮಾನವೇನಾಯಿತು? ಅದನ್ನು ತಾವು ಹೆಚ್ಚು ಕಮ್ಮಿ ಒಪ್ಪಿಕೊಂಡು ಬಂದಿದ್ದೀರಲ್ಲವೆ? ಆದರೆ ಈಗ ಅದಕ್ಕೆ ಪ್ರೊಟೆಸ್ಟನ್ನು ಕಳುಹಿಸಿಕೊಟ್ಟಿದ್ದಾರೆ. ಏನೇನು ಬೇಕೋ ಎಲ್ಲಾ ಕಾಂಪ್ಲಿಕೇಷನನ್ನು ಉಂಟುಮಾಡಿ ಈಗ ಗೊಂದಲವನ್ನು ಉಂಟುಮಾಡತಕ್ಕ ಪ್ರಯತ್ನವೇನಾಗುತ್ತಿದೆ ಅದರ ವಾಸ್ತವಿಕ ಸಂಗತಿಯ ಎಲ್ಲಾ ದಾಖಲೆಗಳನ್ನು ತಮಗೆ ಒದಗಿಸಿ ಕೊಡುತ್ತೇವೆ. ನಾನು ಕಳೆದ ಮೂರು ದಿವಸಗಳಿಂದ ದೆಹಲಿಗೆ ಹೋಗಿ ಬಂದಿದ್ದೇನೆ.

ಶ್ರೀ ಸಿದ್ದರಾಮಯ್ಯ : ನಾವು ಯಾವುದಕ್ಕೂ ಒಪ್ಪಿಗೆ ಕೊಟ್ಟಿಲ್ಲ. ಸುಮ್ಮಸುಮ್ಮನೆ ಒಪ್ಪಿಕೊಂಡು ಬಂದಿದ್ದಾರೆಂದರೆ ಹೇಗೆ? ನಾವು ಯಾವುದನ್ನೂ ಒಪ್ಪಿಕೊಂಡು ಬಂದಿಲ್ಲ. ಅವರು ಅಲ್ಲಿನ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅದು ಕನ್‌ಫರ್‌ಮೇಷನ್ ಆಗತಕ್ಕ ಕಾಲದಲ್ಲಿ ನಾವು ಪ್ರೊಟೆಸ್ಟ್ ಮಾಡುತ್ತೇವೆ. ಅವರು ಅಲ್ಲಿ ತಪ್ಪಾಗಿ ರೆಕಾರ್ಡ್ ಮಾಡಿದ್ದಾರೆ.

ಶ್ರೀ ಕೆ. ಶ್ರೀನಿವಾಸ ಗೌಡ (ಕೋಲಾರ) : ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ಮಾನ್ಯ ವಾಜಪೇಯಿರವರಿಗೆ ಅಧಿಕಾರದ ಮೇಲೆ ಆಸೆ ಇಲ್ಲ ಎಂಬುದಕ್ಕೆ ನಾವು ಮೊನ್ನೆ ಮೊನ್ನೆಯವರೆಗೆ ನಂಬಿಕೆ ಇತ್ತು. ಇವತ್ತು ನಿನ್ನೆಯ ಪತ್ರಿಕೆಗಳನ್ನು ನೋಡಿದರೆ ಅವರು ತಮಿಳುನಾಡಿಗೆ ನೀಡಿರುವ ಬೆಂಬಲವನ್ನು ನೋಡಿದರೆ ಅವರಿಗೂ ಅಧಿಕಾರದ ಮೇಲೆ ಬಹಳ ಆಸೆ ಇದೆ ಎಂಬುದನ್ನು ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತಿದ್ದೇನೆ. ಮೊನ್ನೆ ರಾಜ್ಯ ಸಭೆಯಲ್ಲಿ ತಮಿಳುನಾಡಿಗೆ ಅಲ್ಲಿನ ಸರ್ಕಾರಕ್ಕೆ ಏನೂ ಮಾಡುವುದಿಲ್ಲವೆಂದು ಹೇಳಿ ಇಂದು ಅಲ್ಲಿನ ಕಾನೂನು ಸ್ಥಿತಿ ನೋಡಲು ಸಮಿತಿ

ಕಳುಹಿಸುತ್ತಿದ್ದೇವೆಂದರೆ ವಾಜ್‌ಪೇಯಿವರಿಗೂ ಅಧಿಕಾರದ ಆಸೆ ಇದೆ ಎಂಬುದು ಗೊತ್ತಾಗುತ್ತದೆ. ಇದನ್ನು ಯಡಿಯೂರಪ್ಪನವರು ಗಮನಿಸಬೇಕು.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ವಾಜ್‌ಪೇಯಿರವರ ಯೋಗ್ಯತೆಯನ್ನು ನಾನು, ಶ್ರೀನಿವಾಸಗೌಡರು ಅಳೆಯಲು ಆಗುವುದಿಲ್ಲ. ಅವರ ಯೋಗ್ಯತೆಯನ್ನು ನಾವು ಅಳೆಯಲು ಆಗುತ್ತದೆಯೇ? ಆ ಪ್ರಶ್ನೆ ಬೇರೆ. ಕಾವೇರಿ ಚರಿತ್ರೆಯನ್ನು ಹೇಳಲು ನನಗೆ ಸಂಕಟವಾಗುತ್ತದೆ, ನನ್ನ ಚರಿತ್ರೆಯನ್ನು ನಾನು ಹೇಳಿಕೊಂಡಂತೆ ಆಗುತ್ತದೆ. ನಲವತ್ತು ವರ್ಷದ ನಂಜೇಗೌಡರ ಚರಿತ್ರೆ, ಚನ್ನಬಸಪ್ಪನವರ ಚರಿತ್ರೆ, ನೀರಾವರಿಯ ಚರಿತ್ರೆಯೇ ಆಗಿಬಿಡುತ್ತದೆ. ಒಂದು ಕಡೆ ಕರುಣಾನಿಧಿಯವರು ಯುನೈಟೆಡ್ ಫ್ರಂಟನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದರು, ಇವತ್ತು ಜಯಲಲಿತಾರವರು ಅವರ ಹೇಳಿಕೆಯಲ್ಲಿ ಕೇಂದ್ರದವರು ವ್ಯಾಲ್ಯೂ ಅಥಾರಿಟಿ ಕಾನ್ಸ್ಟಿಟ್ಯೂಟ್ ಮಾಡಲು ಒಪ್ಪಿಕೊಂಡಿದ್ದಾರೆಂದು ಬಂದಿದೆ. ಅವರು ನಿಜವನ್ನು ಹೇಳಿದ್ದಾರೋ ಅಸತ್ಯವನ್ನು ಹೇಳಿದ್ದಾರೋ ಗೊತ್ತಿಲ್ಲ. ಮಾನ್ಯ ವಾಜ್‌ಪೇಯಿರವರೇ ಒಮ್ಮೆ when none of the people are following the rules of the game why should I follow ಎಂದು ಹೇಳಿದರು. ತಮಿಳುನಾಡಿನವರು ಮೆರಿಟ್‌ಮೇಲೆ ಯಾವುದನ್ನೂ ಮಾಡುತ್ತಿಲ್ಲ. ಅವರು ಬ್ಲಾಕ್‌ಮೇಲ್ ಮಾಡಿ, ಯಾವ ಪ್ರೆಷರ್ ಟ್ಯಾಕ್‌ಟಿಕ್ಸ್ ಮಾಡಬೇಕೋ ಅದನ್ನು ಮಾಡಿ ತಮ್ಮ ಕೆಲಸವೇನು ಮಾಡಿಸಿ ಕೊಳ್ಳಬೇಕೋ ಅದನ್ನು ಮಾಡಿಸಿಕೊಳ್ಳುತ್ತಿದ್ದಾರೆ. ನಾವೂ ಅದನ್ನೇ ಮಾಡಬೇಕೇ? ನಾವೂ ರೂಲ್ಸ್ ಆಫ್ ದಿ ಗೇಮ್, ಮೆರಿಟ್ ಮೇಲೆ ಹೋಗಿ, ನಾವು ಭಾರತದ ಸತ್ಪ್ರಜೆಯಾಗಿ ನೀರು ರಾಷ್ಟ್ರೀಯ ಆಸ್ತಿಯೆಂದು ನಾವು ಹೇಳಿಕೊಂಡು ಹೋಗಿ ತಮಿಳುನಾಡಿನವರು ಅದು ನಮ್ಮ ಆಸ್ತಿಯೆಂದು ಹೇಳಿಕೊಂಡು ಹೋದರೆ ರೂಲ್ಸ್ ಆಫ್ ದಿ ಗೇಮ್ ಎಲ್ಲಾಗುತ್ತದೆ? ತಮಿಳುನಾಡಿನವರು ಯಾವ ರೀತಿ ಒತ್ತಡವನ್ನು ತರುತ್ತಾರೋ ಅದೇ ರೀತಿ ಒತ್ತಡವನ್ನು ನಾವೂ ತರಬೇಕಾಗುತ್ತದೆ. ಯಡಿಯೂರಪ್ಪನವರು ವಾಜ್‌ಪೇಯಿರವರ ಹತ್ತಿರ ಮಾತನಾಡಿಕೊಂಡು ಬಂದಿದ್ದೇನೆಂದು ಹೇಳುತ್ತಿದ್ದಾರೆ. ನ್ಯಾಷನಲ್ ವಾಟರ್ ಪಾಲಿಸಿ ಸ್ಟ್ಯಾಟ್ಯುಟರಿ ಗೈಡ್‌ಲೈನ್ಸ್ ಅರ್ಥಪೂರ್ಣವಾಗಬೇಕಾದರೆ ವ್ಯಾಲ್ಯೂ ಅಥಾರಿಟಿ ಕಾನ್ಸ್ಟಿಟ್ಯೂಟ್ ಮಾಡುವುದು first of its kind, ಎಂಬುದು ನಿಜವೋ? ಅಂಥದ್ದು ಇದುವರೆಗೆ ಯಾವುದೂ ಆಗಿಲ್ಲ. ಸ್ವತಂತ್ರ್ಯ ಭಾರತದ ಚರಿತ್ರೆಯಲ್ಲಿ ಆ ರೀತಿ ಯಾವುದೂ ಆಗಿಲ್ಲ. ಅದಕ್ಕೆ ರಾಜ್ಯಸರ್ಕಾರದವರು ಒಪ್ಪಿಕೊಂಡು ಬಂದಿದ್ದರೆ ಅದು ತಪ್ಪು. ಕರುಣಾನಿಧಿಯವರು ರಾಷ್ಟ್ರೀಯ ರಂಗ ಸರ್ಕಾರಕ್ಕೆ ಬ್ಲಾಕ್‌ಮೇಲ್ ಮಾಡಿದರೆಂದು ಮೊದಲೇ ಹೇಳಿದೆ. ಆ ರೀತಿ ಮಾಡದಿದ್ದರೆ ಅಟಾರ್ನಿ ಜನರಲ್‌ರವರು ಸುಪ್ರೀಮ್ ಕೋರ್ಟಿಗೆ ಹೋಗಿ ಆ ರೀತಿ ಸ್ಟೇಟ್‌ಮೆಂಟ್ ಕೊಡಬೇಕಾದ ಅವಶ್ಯಕತೆಯೇ ಇರುತ್ತಿರಲಿಲ್ಲ. ಸ್ಟ್ಯಾಟ್ಯುಟರಿ ಗೈಡ್‌ಲೈನ್ಸ್ ಆಗದೆಯೇ inequitable, self-contradictory, unjust interim order, ಅನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ವ್ಯಾಲಿ ಅಥಾರಿಟಿಯನ್ನು ರಾಷ್ಟ್ರೀಯ ಜಲ ನೀತಿಯನ್ನು ಮಾಡುವುದಕ್ಕೆ ಮೊದಲು ಕಾನ್ಸ್ಟಿಟ್ಯೂಟ್ ಮಾಡಿದರೆ ರಾಷ್ಟ್ರೀಯ ಜಲ ನೀತಿಗೆ ಅರ್ಥ ಇರುವುದಿಲ್ಲ. ಆದ್ದರಿಂದ ರಾಷ್ಟ್ರೀಯ ಜಲ ನೀತಿಯಾಗುವವರೆಗೆ ಯಾವುದೇ ವ್ಯಾಲಿ ಅಥಾರಿಟಿ ಮಾಡುವುದು ಸರಿಯಲ್ಲವೆಂದು ಒತ್ತಾಯ ಮಾಡುತ್ತೇನೆ. ರಾಷ್ಟ್ರೀಯ ಜಲ ನೀತಿಯ ಗೈಡ್‌ಲೈನ್ಸ್ ಆಗುವವರೆಗೆ ಸುಪ್ರೀಂ ಕೋರ್ಟಿನಲ್ಲಿರುವ ನಡಾವಳಿಗಳು, ಟ್ರಿಬ್ಯೂನಲ್ ಮುಂದೆ ಇರುವ

ನಡಾವಳಿಗಳು ಡೆಫರ್ ಆಗತಕ್ಕದ್ದು, ಕಾವೇರಿ ಮಧ್ಯಾಂತರ ವರದಿಯನ್ನು ಜಾರಿಗೊಳಿಸಲು ವ್ಯಾಲಿ ಅಥಾರಿಟಿಯನ್ನು ಮಾಡಿದರೆ ನಾವು ಎಕ್ಸಟ್ರೀಮ್ ಸ್ಟೆಪ್ಸನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ. ಇದನ್ನು ಮಾಡಿದನಂತರ ರಾಷ್ಟ್ರೀಯ ಜಲ ನೀತಿಯನ್ನು ಮಾಡಿದರೆ ಅನುಕೂಲವೇನಾಗುವುದಿಲ್ಲ. ಅಂಥ ಸ್ಥಿತಿಯಲ್ಲಿ ನಾವು ಪಕ್ಷಭೇದವನ್ನು ಮರೆತು ಹೋರಾಟಕ್ಕೆ ಸಿದ್ದರಾಗಬೇಕಾಗುತ್ತದೆ. ಹಾಗಿದ್ದರೆ ಸರ್ಕಾರವೇನು ಮಾಡಬೇಕು ಎಂದು ಕೇಳಬಹುದು, ಮಾನ್ಯ ದೇವೇಗೌಡರು ವಾಸುದೇವನ್ ಕಾರ್ಯದರ್ಶಿರವರಿಗೆ ಕೋರ್ಟ್ ಆದೇಶ ಪಾಲಿಸಲಿಲ್ಲವೆಂದು ಜೈಲಾಯಿತು, ಅಧಿಕಾರಿಗಳು ನಮ್ಮ ಮಾತು ಕೇಳುವುದಿಲ್ಲವೆಂದು ಹೇಳಿದ್ದರು. ಪ್ರಜಾಪ್ರಭುತ್ವದಲ್ಲಿ ಹುಡುಗಾಟವೇನು? ಕೇಂದ್ರದವರು ರಾಜ್ಯಸರ್ಕಾರವನ್ನು ಡಿಸ್‌ಮಿಸ್ ಮಾಡುತ್ತಾರೋ ಮಾಡಲಿ, ಎಷ್ಟು ಸಲ ಮಾಡುತ್ತಾರೆ? ನಾವೂ ನೋಡೋಣ. ಬರುವ ಸರ್ಕಾರಗಳೆಲ್ಲವನ್ನು ಡಿಸ್‌ಮಿಸ್ ಮಾಡಿ ಈ ವ್ಯಾಲಿ ಅಥಾರಿಟಿಯನ್ನು ಇಂಪ್ಲಿಮೆಂಟ್ ಮಾಡಿಕೊಂಡು ಹೋಗಲಿ. ನಾವೂ ನೋಡೇ ಬಿಡೋಣ. ಹೋರಾಟ ಎಂದರೆ ಹೋರಾಟವೇ. ಮೆತ್ತಗೆ ಇದ್ದವರನ್ನು ಮೊಳಕೈಯಲ್ಲಿ ಗುದ್ದು ಎಂಬುವ ವಿಚಾರ ರಾಷ್ಟ್ರದಲ್ಲಿ ಜಾಸ್ತಿಯಾಗಿದೆ. ಇದಕ್ಕೆ ಅವಕಾಶ ಕೊಡತಕ್ಕದಲ್ಲ. ಕರ್ನಾಟಕದವರು ಸಜ್ಜನರು, ಸುಸಂಸ್ಕೃತರು ಏನು ಮಾಡಿದರೂ ಸುಮ್ಮನಾಗುತ್ತಾರೆ, ಪ್ಯಾಸೀವ್ ಜನರು ಇವರು ಎನ್ನುವ ಅಭಿಪ್ರಾಯಕ್ಕೆ ಬಂದರೆ ಅದು ಸರಿಯಲ್ಲ. ನಾವು ಪ್ಯಾಸೀವ್ ಆಗಿರಬಾರದು. ನಮ್ಮ ಸಜ್ಜನಿಕೆಯನ್ನು ಬದಿಗಿಟ್ಟು ನಮ್ಮ ಹಕ್ಕಿಗಾಗಿ ಹೋರಾಟ ಮಾಡಬೇಕಾಗುತ್ತದೆ. ಬೇರೆಯವರು ಪ್ರೆಷರ್ ಟ್ಯಾಕ್‌ಟಿಕ್ಸ್ ಅನ್ನೂ ತರುವಂತೆ ನಾವೂ ತರಬೇಕಾಗುತ್ತದೆ, ನಮ್ಮ ಪಕ್ಷ, ಕಾಂಗ್ರೆಸ್ ಪಕ್ಷ, ರಾಷ್ಟ್ರೀಯ ರಂಗ ಎಲ್ಲರೂ ಪಕ್ಷಭೇದ ಮರೆತು ಅದನ್ನು ತರಬೇಕಾಗುತ್ತದೆ. ಅಲ್ಲಿಯವರೆಗೆ ನಾವು ನಿದ್ರೆ ಮಾಡುವಂತಿಲ್ಲ. ಮಾನ್ಯ ಯಡಿಯೂರಪ್ಪನವರು ಹೇಳಿರುವಂತೆ ಹಿಂದೆ ಮಾಡಿರುವ ಬಗ್ಗೆ ನನಗೆ ಕೆಲವು ವಿಚಾರ ಗೊತ್ತು, ಕೆಲವು ಗೊತ್ತಿಲ್ಲ. ದೇವೇಗೌಡರ ಸರ್ಕಾರವನ್ನೂ ತಮಿಳುನಾಡಿನವರು ಬ್ಲಾಕ್‌ಮೇಲ್ ಮಾಡಿದರು, ಬ್ಲಾಕ್‌ಮೇಲ್ ಮಾಡುವುದು ಅವರಿಗೆ ಸ್ವಾಭಾವತಃ ಇದೆ. ಅವರು ವಾಜ್‌ಪೇಯಿರವರ ಸರ್ಕಾರವನ್ನೂ ಬ್ಲಾಕ್‌ಮೇಲ್ ಮಾಡುವುದಿಲ್ಲವೆಂಬುದನ್ನು ನಾನು ನಂಬುವುದಿಲ್ಲ. ಆದ್ದರಿಂದ ರಾಷ್ಟ್ರೀಯ ಜಲ ನೀತಿಯನ್ನು ಮಾಡುವ ಮೊದಲೇ ವ್ಯಾಲಿ ಅಥಾರಿಟಿ ಮಾಡಬಾರದೆಂದು ಕೇಂದ್ರಕ್ಕೆ ಒತ್ತಾಯ ಮಾಡುತ್ತೇನೆ. ರಾಷ್ಟ್ರೀಯ ಜಲ ನೀತಿಯ ಗೈಡ್‌ಲೈನ್ಸ್ ಮೊದಲು ಆಗಬೇಕು, ಅದು ಆದ ಒಂದು ತಿಂಗಳಿನಲ್ಲೇ ಅವರು ಏನು ಬೇಕಾದರೂ ಮಾಡಲಿ, ಟ್ರಿಬ್ಯೂನಲನ್ನು ನೇಮಕ ಮಾಡಲಿ, ಕೋರ್ಟಿಗೆ ಹೋಗಲಿ, ಆದರೆ ಮೊದಲು ರಾಷ್ಟ್ರೀಯ ಜಲ ನೀತಿಯಾಗಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಈ ದಿವಸ ಒಂದು ಗಂಭೀರವಾದ ಪ್ರಶ್ನೆ ಇವತ್ತು ಕಾವೇರಿ ವಿವಾದದಲ್ಲಿ ಉದ್ಭವವಾಗಿದೆ. ಅದು ಮುಖ್ಯವಾಗಿ ಇಂಟರ್‌ಸ್ಟೇಟ್ ಕೌನ್ಸಿಲ್ ಸಭೆ ಏನು ಸಭೆ ನಡೆಯಿತು, ಅದರಲ್ಲಿ ಈ ಸರ್ಕಾರಿಯಾ ಕಮಿಷನ್ ಬಗ್ಗೆ ಕೆಲವು ನಿರ್ಣಯಗಳನ್ನು ಕೂಡ ತಗೆದುಕೊಂಡ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವವಾಗಿದೆ. ಈಗ ಮಾನ್ಯ ಉಪ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಇಂಥ ವಿಚಾರಗಳನ್ನು ವಿರೋಧ ಮಾಡಿದ್ದೇವೆಂದು ಹೇಳಿದ್ದಾರೆ, ಅದು ಬಹಳ ಸ್ಪಷ್ಟವಾಗಿ ಇದೆ. ಅದೇನೆಂದರೆ, suggestion that the Tribunal Award is to have the same

force and sanction as of an order or decree of Supreme Court is not acceptable to my State. We also don't accept the time limit of 2 years.....

ಇದನ್ನು ಹೇಳಲಿಲ್ಲವೆಂದು ನಾವ್ಯಾರೂ ಹೇಳುವುದಿಲ್ಲ. ಇದನ್ನು ತಾವು ತಮ್ಮ ಭಾಷಣದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ಆದರೆ ತಾವು ಪ್ರೊಸೀಡಿಂಗ್ಸ್ ಅನ್ನು ಕೂಡ ದಯಮಾಡಿ ಗಮನಿಸಬೇಕು. ಪ್ರೊಸೀಡಿಂಗ್ಸ್‌ನಲ್ಲೂ ಕೂಡ ಅವರು ಏನು ಬರೆದುಕೊಂಡಿದ್ದಾರೆಂದರೆ, ಏನು ಈ ಭಾಷಣವನ್ನೆಲ್ಲಾ ಮಾಡಿದ್ದೀರಿ ಅದನ್ನು ನಾವು it is taken as read and it should be followed up by the Secretariat....... ಈ ಸಭೆ ಅದನ್ನು ಪರಿಶೀಲನೆ ಮಾಡುತ್ತದೆಂದು ಆ ಪ್ರೊಸೀಡಿಂಗ್ಸ್‌ನಲ್ಲೂ ಕೂಡ ಇಲ್ಲ; ಅದನ್ನು ತಾವು ಸ್ವಲ್ಪ ಗಮನಿಸಬೇಕಾದಂಥ ವಿಚಾರ. ಏಕೆಂದರೆ ಸ್ಟ್ಯಾಂಡಿಂಗ್ ಕಮಿಟಿಯವರು ಒಂದು ನಿರ್ಣಯವನ್ನು ಶಿಫಾರಸ್ಸು ಮಾಡಿದ್ದಾರೆ, ಆ ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಕಾನ್ಸೆಸಸ್ ಆಗಿದೆ, ಇದನ್ನು ನಮ್ಮ ನಾಯಕರು ಹೇಳಿದರು. ಆದರೆ ಇಂಟರ್ ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಅದು ಕಾನ್ಸ್‌ಸಸ್ ಅಲ್ಲ ಅದು ನಿರ್ಣಯ. ದಯಮಾಡಿ ಪ್ರೊಸೀಡಿಂಗ್ಸ್ ನೋಡಬೇಕು ಅದು ಕಾನ್ಸೆಸಸ್ ಅಲ್ಲ; ಅದು ಇಂಟರ್ ಸ್ಟೇಟ್ ಕೌನ್ಸಿಲ್‌ನ ನಿರ್ಣಯ. ಈಗ ತಾವು ಹೇಳಬಹುದು, ಇಂಟರ್ ಸ್ಟೇಟ್ ಕೌನ್ಸಿಲ್ ಸಭೆ ಮುಂದೆ ನಡೆದಾಗ ಏನು ನಿರ್ಣಯವಾಗಿದೆ ಅದನ್ನು ಅಪ್ರೂವಲ್ ಮುಂದಿನ ಸಭೆಗೆ ಬರಬೇಕು, ಆವಾಗ ನಿಮಗೆ ಅಬ್ಜೆಕ್ಟ್ ಮಾಡುವುದಕ್ಕೆ ಅವಕಾಶವಿದೆ. ಇಲ್ಲವೆಂದು ಹೇಳುವುದಿಲ್ಲ. ಆದರೆ, ಇದು ಸಾಮಾನ್ಯವಾದ ಅಥವಾ ಒಂದು ಸೌಜನ್ಯವಾದ ಪ್ರೊಸೀಡಿಂಗ್ಸ್ ಅಲ್ಲ. ಒಂದು ರಾಜ್ಯದ ಪ್ರಾಮುಖ್ಯವಾದ ಹಕ್ಕಿಗೆ ಒಂದು ವಿಶೇಷವಾದಂಥ ಅಘಾತವನ್ನು ಮಾಡತಕ್ಕಂಥ ಒಂದು ಪ್ರಸಂಗ. ಏಕೆಂದರೆ, ಇದರಲ್ಲಿ ಇನ್ನೊಂದು ಪ್ರಶ್ನೆ ಇದೆ. Article 262 that deals with disputes relating to waters.....

ಅದು ಇಂಡಿಪೆಂಡೆಂಟ್ ಆರ್ಟಿಕಲ್, ಇಂಟರ್ ಸ್ಟೇಟ್ ಕೌನ್ಸಿಲ್ ಏನು ರಚನೆಯಾಗಿದೆ ಅದು ಆರ್ಟಿಕಲ್ 262ನಲ್ಲಿದೆ. Yet another independent Article...

ಈಗ ಸರ್ಕಾರಿಯ ಕಮಿಷನ್ ಶಿಫಾರಸ್ಸುಗಳು ನಾನಾ ಕ್ಷೇತ್ರದಲ್ಲಿ ನಾನಾ ಚಟುವಟಿಕೆಗಳ ಬಗ್ಗೆ ಹೇಳಬಹುದು. ಆದರೆ ಸರ್ಕಾರಿಯಾ ಕಮಿಷನ್ನಿನ ಶಿಫಾರಸ್ಸುಗಳನ್ನೂ ಕೂಡ ಸಂವಿಧಾನದ ಚೌಕಟ್ಟಿನಲ್ಲಿ ಬರಬೇಕು. ಅಂದರೆ ಸರ್ಕಾರಿಯಾ ಕಮಿಷನ್ನಿನ ಶಿಫಾರಸ್ಸುಗಳನ್ನೂ ಕೂಡ ಸಂವಿಧಾನದ ಚೌಕಟ್ಟಿನಲ್ಲಿ ಅನುಷ್ಠಾನ ಮಾಡಬೇಕೇ ಹೊರತು, ಅದನ್ನೆಲ್ಲಾ ತಾವು ತೆಗೆದುಕೊಂಡು ಬಂದು ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ಆ ವಿಚಾರಗಳನ್ನು, ಪ್ರಸ್ತಾವಗಳನ್ನು ತಂದು ಮಂಜೂರು ಮಾಡುವುದು ಸಂವಿಧಾನಿಕವಾದದ್ದಲ್ಲ. It is opposed to the letter and spirit of the Constitution of India. ಏನು ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ನಿರ್ಣಯ ಮಾಡಿದ್ದರು, ಆ ಹಕ್ಕು ಇಂಟರ್ ಸ್ಟೇಟ್ ಕೌನ್ಸಿಲ್‌ಗೆ ಇಲ್ಲ. ತಾವು ದಯಮಾಡಿ ಇಂಥ ಸಭೆಗಳಿಗೆ ಹೋಗುವಾಗ ಕಾನೂನಿನ ಕಾರ್ಯದರ್ಶಿಯವರನ್ನು ಕರೆದುಕೊಂಡು ಹೋಗಬೇಕು, ಸಾಧ್ಯವಾದರೆ ಅಡ್ವೋಕೇಟ್ ಜನರಲ್‌ರವರನ್ನು ಕರೆದುಕೊಂಡು ಹೋಗಬೇಕು. ಏಕೆಂದರೆ, ಅಜೆಂಡಾದಲ್ಲಿ ಈ ಸರ್ಕಾರಿಯಾ ಕಮಿಷನ್ ಬಗ್ಗೆ ಚರ್ಚೆ ಮಾಡುವುದರಿಂದ, he should have taken either the Advocate General or the Law Secretary. It is not

mere a casual affair to attend a meeting like this when the agenda is available. ಯಾವ ಸ್ಟಾಂಡಿಂಗ್ ಕಮಿಟಿಯ ಒಂದು ಅಜೆಂಡಾ, ಇವತ್ತು ನದಿ ನೀರಿಗೆ ಸಂಬಂಧಿಸಿದಂತೆ ಪ್ರಮುಖವಾದ ನಿರ್ಣಯಗಳನ್ನು ತೆಗೆದುಕೊಳ್ಳುವ ವಿಚಾರ ತಮಗೆ ಗೊತ್ತಿರುವಾಗ ತಾವು ಇವತ್ತು ಸಾಧಕ ಬಾಧಕಗಳನ್ನು ತಿಳಿದುಕೊಂಡೇ ಹೋಗಬೇಕು. ತಮ್ಮ ಭಾಷಣದಲ್ಲಿ ಆರ್ಟಿಕಲ್ 262 ಎಂದು ಹೇಳಿಲ್ಲ. ನೀರಿನ ವಿವಾದ ಏನಿದ್ದರೂ ಕೂಡ ಅದು ಆರ್ಟಿಕಲ್ 262ನಲ್ಲೇ ಬರತಕ್ಕದ್ದು. Adjudication of disputes relating to waters, Inter-state River or River valley....

SRI SIDDARAMAIAH : Question of law need not be mentioned in the statement. It is a established principle. It is assumed. How can I refer this? You are also a practising Advocate; I am also a practising Advocate.

ಶ್ರೀ ಎಂ. ವೀರಪ್ಪ ಮೊಯ್ಲಿ : ಉಲ್ಲೇಖಿಸದೆ ಸುಮ್ಮನೆ ಇದ್ದರೆ ಮೌನಂ ಸಮ್ಮತಿ ಲಕ್ಷಣಂ. ತಮ್ಮ ಮಾತು ನನಗೆ ಅರ್ಥವಾಗದಿರತಕ್ಕದ್ದು. That particular agenda is opposed to the Constitution. Should we not say it has no authority to do? Should we not say Inter-State council has no jurisdiction? If you allow passing of such resolution it should be stopped......

ಇದನ್ನು ಹೇಳಬೇಕಾಗುತ್ತದೆ. ಇವತ್ತು ಅದನ್ನು ಹೇಳದೆ ನಿರ್ಣಯ ಮಾಡಿಕೊಂಡು ಬಂದು ಕನ್ಸೆಸಸ್ ಆಯಿತು ಅದು ನಮಗೆ ಗೊತ್ತೇ ಇಲ್ಲವೆಂದು ಇವತ್ತು ಕೈಎತ್ತಿಬಿಟ್ಟರೆ, it is not a personal reflection.

SMT. PRAMILA NESARGI : It goes to the root of the matter. When question of jurisdiction comes, ಜ್ಯೂರಿಡಿಕ್ಷನ್ ಇಲ್ಲವೆಂದು ಹೇಳಬೇಕೊ ಬೇಡವೊ? ನಿಮಗೆ ಅಧಿಕಾರವೇ ಇಲ್ಲವೆಂದು ಹೇಳಬೇಕೊ ಬೇಡವೊ? You have no jurisdiction ಎಂದು ತಾವು ಹೇಳಬೇಕಾಗಿತ್ತು. Please don't say it is a matter of law. It cannot be said.... ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ಆರ್ಟಿಕಲ್ 262 ಪ್ರಕಾರ ಇದು ಇಂಟರ್ ಸ್ಟೇಟ್ ವಾಟರ್ ಕೌನ್ಸಿಲ್ ತೀರ್ಮಾನ ಮಾಡತಕ್ಕಂಥದ್ದು. It is not for the Inter-State Council. There is a National Council for water Resources... ಇಂಥ ಎರಡು ಇನ್‌ಸ್ಟಿಟ್ಯೂಷನ್ ಇದೆಯೋ ಇಲ್ಲವೋ ಎನ್ನುವ ಭಾವನೆ ಕೂಡ ಅಂಥ ಒಂದು ಉನ್ನತಮಟ್ಟದ ಸಭೆಯ ಗೋಚರಕ್ಕೆ ಅಥವಾ ಜ್ಞಾನಕ್ಕೆ ಬರದೇ ಇದ್ದರೆ, ನಾವು ಯಾವ ರೀತಿ ಒಂದು ದೇಶದ ವ್ಯವಹಾರವನ್ನು, ದೇಶದ ಒಂದು ನೀತಿಯನ್ನು ಯಾವ ರೀತಿಯಲ್ಲಿ ವ್ಯವಹರಿಸಬೇಕೆಂದು ಅತ್ಯುನ್ನತಮಟ್ಟದ ಸಭೆಗೆ ಇಲ್ಲವೆಂದು ಹೇಳಿದರೆ, sorry to say this on the floor of this House, this is how the country is governed, ಇವತ್ತು

ರಾಷ್ಟ್ರವನ್ನಾಗಲಿ ರಾಜ್ಯವನ್ನಾಗಲಿ ಈ ರೀತಿಯಗಿ ಗೌವರ್ನ್ ಮಾಡುವುದಕ್ಕಾಗುವುದಿಲ್ಲ. ಇವತ್ತು ಇಂಥ ಒಂದು ಪ್ರಾಮುಖ್ಯವಾದ ವಿಚಾರದಲ್ಲಿ, ನ್ಯಾಷನಲ್ ವಾಟರ್ ರಿಸೋರ್ಸ್ ಕೌನ್ಸಿಲ್ ಇದೆ, ಇದು ನ್ಯಾಷನಲ್ ವಾಟರ್ ಪಾಲಿಸಿಯನ್ನು ತೀರ್ಮಾನ ಮಾಡಬೇಕು, ಅದು ನ್ಯಾಷನಲ್ ವಾಟರ್ ಪಾಲಿಸಿಯ ಮೇಲೆ ಗೈಡ್‌ಲೈನ್ಸ್ ಡಿಸೈಡ್ ಮಾಡಬೇಕು. River Boards Act,....ಪ್ರಕಾರ ಬೋರ್ಡ್ ಮಾಡುವುದಿದ್ದರೆ, ನ್ಯಾಷನಲ್ ವಾಟರ್ ರಿಸೋರ್ಸ್ ಬೋರ್ಡ್ ಎಂದಿದೆ ಅದರ ಪ್ರಕಾರ ನಿರ್ಣಯವಾಗಬೇಕು. ಇವತ್ತು ಯಾವುದಕ್ಕೂ ಒಂದು ಕಾನೂನು ಇದೆ, ಸಂವಿಧಾನದ ಚೌಕಟ್ಟು ಇದೆ, ಇವತ್ತು ಕಾನೂನಿನ ಹಾಗೂ ಸಂವಿಧಾನದ ಚೌಕಟ್ಟನ್ನು ಮೀರಿ ಯಾವುದೇ ಒಂದು ಸಂಸ್ಥೆ ಅಥವಾ ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರ ಸರ್ಕಾರವಾಗಲಿ ಕೆಲಸ ಮಾಡುವುದಿದ್ದರೆ, ಇವತ್ತು ಕಾನೂನು ಏತಕ್ಕೆ ಇದೆ? ಸಂವಿಧಾನ ಏತಕ್ಕೆ ಇದೆ?

3.50 ಪಿ.ಎಂ.

ಆರ್ಟಿಕಲ್ ಏಕೆ, 262 ಮತ್ತು 263ನೇ ವಿಧಿಗಳನ್ನು ಕ್ಲಬ್ ಮಾಡಬಹುದಾಗಿತ್ತು. ಆರ್ಟಿಕಲ್ 262 ಇದ್ದು 263ರ ಅವಶ್ಯಕತೆ ಇರಲಿಲ್ಲ, 262 ತೆಗೆದು ಹಾಕಿ 263 ಮಾಡಬಹುದಾಗಿತ್ತು. They have different jurisdiction which is carved out by the constitution of India. ಇದನ್ನು ಇವತ್ತು ಯಾವ ವಿಚಾರವನ್ನು ತಮ್ಮ ಭಾಷಣದಲ್ಲಿ ಹೇಳಲಿಲ್ಲ. ಏಕೆಂದರೆ, ಅಜೆಂಡಾ ನಿಮಗೆ ಸರ್ಕ್ಯುಲೇಟ್ ಮಾಡಿರುತ್ತಾರೆ. Agenda is not placed before you on the spot. ಅರ್ಲಿಯರ್ ಆಗಿ ಅಜೆಂಡಾ ನಿಮಗೆ ಕೊಡುತ್ತಾರೆ. ಆ ಅಜೆಂಡಾದಲ್ಲಿ ಸರ್ಕಾರಿಯಾ ಕಮಿಷನ್ ಮೇಲೆ, ಸ್ಟ್ಯಾಂಡಿಂಗ್ ಕಮಿಟಿ ನಿರ್ಣಯ ಆಗಿದೆ. ಅದರಲ್ಲಿ ಅದು ಅರ್ವಾಡ್ ಸುಪ್ರೀಂ ಕೋರ್ಟ್ ನಿರ್ಣಯ ಆಗಿ ನೀವು ಕೇಳಬೇಕಾದ ಕಾನ್‌ಸೆನ್‌ಸಸ್ ಸ್ಟ್ಯಾಂಡಿಂಗ್ ಕಮಿಟಿ ಬಂದಿದೆ, ಅಲ್ಲಿ ಕೊಟ್ಟಂತಹ ನಿರ್ಣಯ ಅಲ್ಲ ಅದು. You should have gone fully armed with an objection to that standing Committee recommendation or the consensus. You should have fully armed your Advocate or Law Secretary to brief you on these matters. Perhaps, the Chief Minister himself should have been present.

ಇಡೀ ಕರ್ನಾಟಕದ ಜೀವನ್ಮರಣದ ಪ್ರಶ್ನೆ ಇವತ್ತು ಸ್ಟೇಟ್ ಕೌನ್ಸಿಲ್‌ನಲ್ಲಿ ಬರುತ್ತಿರುವಾಗ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳು ಬಾಕಿ ವಿಚಾರಗಳು ಮುಖ್ಯ ಅಲ್ಲ, ಇದೇ ಪ್ರಾಮುಖ್ಯವಾಗುತ್ತದೆ. ಒಂದು ಶತಮಾನದ ಹೋರಾಟದ ಹಿನ್ನೆಲೆ ಇದೆ. ಈ ವಿವಾದಕ್ಕೆ. ಅದೆಲ್ಲವನ್ನೂ ಬಿಟ್ಟು, ಇವತ್ತು ಹಿಂದಿನ ಎಲ್ಲಾ ವ್ಯವಹಾರಗಳನ್ನು ಬಹಳ ಸುಲಭವಾಗಿ ನಾವು ಮರೆತು ಆ ಸಭೆಯಲ್ಲಿ ಭಾಗವಹಿಸಿ ಇಂತಹ ಒಂದು ನಿರ್ಣಯವನ್ನು ನಿರ್ಣಯದ ಒಂದು ಬಂಡೆಗಲ್ಲನ್ನು ಕರ್ನಾಟಕ ರಾಜ್ಯದ ಜನರ ಮೇಲೆ ಹೊರಿಸತಕ್ಕಂತಹ ಕೆಲಸ ಆಗುವುದಿದ್ದರೆ. ನಾನು ಒಪ್ಪುತ್ತೇನೆ, ವಿವಾದಗಳು ಬಂದಾಗ ಅವರ ಜೊತೆಯಲ್ಲಿ ಇರಬೇಕಾಗುತ್ತದೆ, ಆ ಬೆಂಬಲ ಕೊಡುವುದಕ್ಕೆ ನಾವು ಇವತ್ತು ಹೇಳುತ್ತಿದ್ದೇವೆ. This entire House is one voice should protest against this illegal un-constitutional

resolution of this Inter-State Council. ಒಕ್ಕೊರಲಿನಿಂದ ನಾವು ಇವತ್ತು ವಿರೋಧ ಮಾಡಬೇಕಾದ ಅವಶ್ಯಕತೆ ಇದೆ. ಕ್ಯಾಷುಯಲ್ಲಾಗಿ ತೆಗೆದುಕೊಳ್ಳಬೇಕಾದ ವಿಚಾರ ಅಲ್ಲ, ದಯಮಾಡಿ ಇನ್ನು ಮುಂದೆ ಅಡ್ವೋಕೇಟ್ ಜನರಲ್ ಕರೆಯಿಸಿ ಸಭೆಗೆ ಅಲ್ಲ, ಲೀಗಲ್ ಲ್ಯೂಮಿನರಿಗಳನ್ನು ಕರೆಯಿಸಿ ಇವತ್ತು ಇದರ ಬಗ್ಗೆ ಚರ್ಚೆ ಮಾಡಬೇಕು. ಇನ್ನೊಂದು ಇಂಟರ್‌ಸ್ಟೇಟ್ ಕೌನ್ಸಿಲ್‌ಗೆ ನೀವು ಕಾಯುವುದು ಅಲ್ಲ. ತಕ್ಷಣ ಇಂಟರ್ ಸ್ಟೇಟ್ ಕೌನ್ಸಿಲ್ ಸಭೆ ಕರೆಯತಕ್ಕಂಥದ್ದಕ್ಕೆ you must give a call to the present Prime Minister and ask him to call a meeting immediately and annul this unconstitutional order.

ಅಸಂವಿಧಾನಿಕವಾದ ಯಾವ ನಿರ್ಣಯ ಇದೆ ಅದನ್ನು ಖಂಡಿತವಾಗಿ ಕೂಡ ರದ್ದು ಮಾಡತಕ್ಕಂತಹ ಒಂದು ಪ್ರಯತ್ನಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ. ನಾವು ಒಕ್ಕೊರಲಿನಿಂದ ಈ ಸದನದ ನಿರ್ಣಯ ಮಾಡೋಣ. ಪ್ರಧಾನಿಯವರಿಗೆ ತಿಳಿಸೋಣ ಇಂದಹ ಒಂದು ಆತಂಕಕಾರಿಯಾದ ಅಸಂವಿಧಾನಿಕವಾದ ಬೆಳವಣಿಗೆ ಇವತ್ತು ರಾಷ್ಟ್ರದ ಒಂದು ಜನ ನೀತಿಯ ಒಂದು ಕ್ಷೇತ್ರದಲ್ಲಿ ಆಗುವುದು, ನಾವು ಇವತ್ತು ಅದನ್ನು ಪ್ರತಿಭಟನೆ ಮಾಡಬೇಕಾಗುತ್ತದೆ. ಇದು ಬಹಳ ಸರಳವಾಗಿ ನೀವು ಒಪ್ಪಲಿಲ್ಲ ಸರಿ, ನೀವು ಒಪ್ಪಿದ್ದೀರಿ ಎಂದು ನಾನು ಹೇಳತಕ್ಕಂಥ, ನಿಮ್ಮ ಮೇಲೆ ಗೂಬೆ ಕೂರಿಸತಕ್ಕಂಥ ಪ್ರಶ್ನೆ ಅಲ್ಲ, ಆದರೆ ಈ ಪ್ರಶ್ನೆ ವ್ಯಾಪಕವಾಗಿ ಸಂವಿಧಾನದ ಕಾನೂನಿನ ಚೌಕಟ್ಟಿನಲ್ಲಿ ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ನಮ್ಮ ಸರ್ಕಾರ ಇಡಲಿಲ್ಲ, ಇದು ನಮ್ಮ ತೀವ್ರವಾದ ಆಕ್ಷೇಪ. ಒಪ್ಪಿದ ಪ್ರಶ್ನೆ ಅಲ್ಲ. ಆದ್ದರಿಂದ ನಮ್ಮ ನಂಜೇಗೌಡರು ಇವತ್ತು ಸ್ಪಷ್ಟವಾಗಿ ಹೇಳಿದರು, ಏಕೆಂದರೆ, ಸರ್ಕಾರ ಬ್ಲ್ಯಾಕ್‌ಮೇಲ್ ಪಾಲಿಟಿಕ್ಸ್ ಆಗಿದೆ, 1989ನೇ ಇಸವಿಯಲ್ಲಿ ಆಗಿನ ಪ್ರಧಾನಿಯವರು ನಮ್ಮ ಅಡಿಷನಲ್ ಅಟಾರ್ನಿ ಜನರಲ್‌ಗೆ ಹೇಳಿದರು, ಇದು ನಮ್ಮಿಂದ ಸಾಧ್ಯವಾಗುವುದಿಲ್ಲ, ಇದನ್ನು ಬಗೆಹರಿಸುವುದಕ್ಕೆ ನೀವೇ ಅಪ್ಪಣೆ ಕೊಡಿ ಎಂದು ಸುಪ್ರೀಂ ಕೋರ್ಟಿಗೆ ಇಲ್ಲದೇ ಇರತಕ್ಕಂತಹ ಒಂದು ಕಾನೂನಿನ ಜವಾಬ್ದಾರಿಯನ್ನು ಸುಪ್ರೀಂ ಕೋರ್ಟಿಗೆ ಜಾರಿಸಿ ಬಿಡತಕ್ಕಂತಹ ಕೆಲಸ 1989ನೇ ಇಸವಿಯಲ್ಲಿ ಆಗಿದೆ. Abdication of the national duty conferred on the Government of India. ಅದೂ ಕೂಡ ತಮಿಳುನಾಡಿನ ಪ್ರೇರಣೆಯಿಂದ ಆಗಿದೆ. ಪುನಃ ಈಗಿನ ಪ್ರಧಾನಿ ಮತ್ತು ನಮ್ಮ ಹಿಂದಿನ ಪ್ರಧಾನಿಯವರೂ ಕೂಡ, ಕೇಂದ್ರ ಸರ್ಕಾರ ಕೂಡ ಅಟಾರ್ನಿ ಜನರಲ್‌ಗೆ ಹೇಳಿ ಇದರ ಬಗ್ಗೆ ನಾವೇ ಒಂದು ಗೈಡ್‌ಲೈನ್ಸ್ ಮಾಡುತ್ತಿದ್ದೇವೆ, ನಾವೇ ಇವತ್ತು ಒಂದು ಡ್ರಾಫ್ಟ್ ಪ್ರೋಗ್ರಾಂ, ಇಂಟರೀಮ್ ಆರ್ಡರನ್ನು ಇಂಪ್ಲಿಮೆಂಟ್ ಮಾಡುತ್ತೇವೆ, ಮಾಡಲಿಕ್ಕೆ ಸರಿಯಾದ ಗೈಡ್‌ಲೈನ್ ಅಥವಾ ರೆಗ್ಯುಲೇಷನ್ ನಾವು ಮಾಡುತ್ತೇವೆ ಎನ್ನುವ ವಿಚಾರವನ್ನು ವಾಲೆಂಟರಿಯಾಗಿ, ಸ್ವಯಂ ಪ್ರೇರಿತವಾಗಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿಗೆ ಕೊಟ್ಟಿದೆ. ಕರ್ನಾಟಕ ಯಾವಾಗಲೂ ಮಾತುಕತೆಗೆ ಹಿಂಜರಿಯಲಿಲ್ಲ. ಒಂದಲ್ಲ, ಎರಡಲ್ಲ ಮೂರು ಸಾರಿ ಡೆಲ್ಲಿಯಲ್ಲಿ ಎರಡು ಸಾರಿ ತಮಿಳುನಾಡಿನಲ್ಲಿ ಒಂದು ಬಾರಿ ಮಾನ್ಯ ವೀರೇಂದ್ರ ಪಾಟೀಲರು ಇರುವಾಗ ನಾನೂ ಹೋಗಿದ್ದೆ, ಅಲ್ಲಿ ಸೆಕ್ರೆಟೇರಿಯಟ್‌ನಲ್ಲಿ ಕರುಣಾನಿಧಿಯವರು ಮುಖ್ಯಮಂತ್ರಿಯಾಗಿದ್ದರು, ನಾವು ಚರ್ಚೆ ಮಾಡುತ್ತಿರುವಾಗ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳು ನಮಗೆ ಹೇಳಿ ಕಳುಹಿಸಿದರು, ಪಾರ್ಲಿಮೆಂಟ್ ಇದೆ, ನಾವು ಬರುವುದಕ್ಕಾಗುವುದಿಲ್ಲ,

ಮೀಟಿಂಗ್ ಅಡ್ಜರ್ನ್ ಮಾಡಿ ಎಂದು ಹೇಳಿದಾಗ ಅದನ್ನು ನಂಬಿ ನಾವು ಬಂದಾಗ ಮರು ದಿನವೇ ಸುಪ್ರೀಂ ಕೋರ್ಟಿಗೆ ಹೋಗಿ ಇದು ಬಗೆಹರಿಯತಕ್ಕಂತಹ ವಿಚಾರ ಅಲ್ಲವೆಂದು ಕೇಂದ್ರ ಸರ್ಕಾರ ಒಂದು ರೀತಿಯಲ್ಲಿ betrayal of the trust conferred by the State Government on the Government of India. ಇದು ನಡೆದಿದೆ, ಬಹಳ ಸಂತೋಷ. ಯಡಿಯೂರಪ್ಪನವರು ಹೇಳಿದರು ಎಂತಹ ಬ್ಲಾಕ್ ಮೇಲ್ ಪಾಯಿಂಟ್ಸ್‌ಗೆ ಈಗಿನ ಸರ್ಕಾರ ಹೋಗುವುದಿಲ್ಲ ಎಂದು, ನಾವು ನಂಬೋಣ, ಆದರೆ ನಂಬಬೇಕಾದರೆ ಕೆಲವು ಕೆಲಸಗಳನ್ನು ಇವತ್ತು ಕೇಂದ್ರ ಸರ್ಕಾರ ಮಾಡಬೇಕಾದಂಥ ಅವಶ್ಯಕತೆ ಇದೆ. ಒಂದು ಕಾಲ್ ಕೊಡಲಿ ಮಾತುಕತೆಯಿಂದ ನಾವು ಬಗೆಹರಿಸುತ್ತೇವೆಂದು, ಅದಕ್ಕೆ ನಮ್ಮ ಸಹಕಾರ ಕೊಡೋಣ, ಆದರೆ ಇವತ್ತು, ಇಂಟರೀಮ್ ಆರ್ಡರ್ ಇಂಪ್ಲಿಮೆಂಟ್ ಮಾಡುತ್ತೇವೆಂದು ಏನು ಸ್ವಯಂಪ್ರೇರಣೆಯಿಂದ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿಗೆ ಹೇಳಿದೆ. ಅದಕ್ಕೆ ಪೂರಕವಾಗಿ ನಾನು ಕೇಂದ್ರ ಸರ್ಕಾರದ ಪ್ರಾಧಿಕಾರವನ್ನು ರಚನೆ ಮಾಡುವುದಕ್ಕೆ ಏನು ಡ್ರಾಫ್ಟನ್ನು ಬೇರೆ ಬೇರೆ ರಾಜ್ಯ ಸರ್ಕಾರಗಳಿಗೆ ಕಳುಹಿಸಿದೆ. ಅದರ ಬಗ್ಗೆ ಕೇಂದ್ರ ಸರ್ಕಾರ ನಿಷ್ಪಕ್ಷಪಾತವಾಗಿ ಮತ್ತು ಒಂದು ಸರಿಯಾದ ನ್ಯಾಯವನ್ನು ಕೊಡತಕ್ಕಂತಹ ಒಂದು ಮನಸ್ಸು ಇದ್ದುದ್ದೇ ಆದರೆ, ಇದೆ ಎಂದು ನಾವು ನಂಬಿದ್ದೇವೆ. ಇಲ್ಲವೆಂದು ಹೇಳುವುದಕ್ಕೆ ನಮ್ಮ ಹತ್ತಿರ ಪ್ರೂಫ್ ಇಲ್ಲ. ಇದೆ ಎಂದು ನಂಬಿದ್ದೇವೆ. ಅವರು ಸುಪ್ರೀಂ ಕೋರ್ಟಿಗೆ ಹೇಳಬಹುದು, ಪಿ.ವಿ. ನರಸಿಂಹರಾವ್‌ರವರ ಕಾಲದಲ್ಲಿ 11 ಟಿ.ಎಮ್.ಸಿ ನೀರನ್ನು ಕೇಂದ್ರ ಸರ್ಕಾರ ತಮಿಳುನಾಡಿಗೆ ಬಿಡಬೇಕೆಂಬ ಮಾತನ್ನು ಕೊಡುವಾಗ ಏನು ಅವರು ನಮ್ಮ ರಾಜ್ಯ ಸರ್ಕಾರಗಳಿಗೆ ಬರೆದಿದ್ದಾರೆ, ಅದು ಮುಖ್ಯವಾಗಿ ಅವರು ಸ್ಪಷ್ಟವಾಗಿ ಬರೆದಿದ್ದಾರೆ. ಏನೆಂದರೆ ನಾವು ನ್ಯಾಷನಲ್ ವಾಟರ್ ಪಾಲಿಸಿ ಪ್ರಕಾರ ಗೈಡ್‌ಲೈನ್ ಮಾಡುವುದಕ್ಕೆ ನಾವು ನ್ಯಾಷನಲ್ ವಾಟರ್ ರಿಸೋರ್ಸಸ್ ಕೌನ್ಸಿಲ್ ಮುಂದೆ ಈ ವಿಚಾರವನ್ನು ಫೆಬ್ರವರಿ 1996ನೇ ಇಸವಿಯಲ್ಲಿ ತಂದು ಈ ಬಗ್ಗೆ ಗೈಡ್‌ಲೈನ್ಸ್ ಮಾಡುತ್ತೇವೆ, ಗೈಡ್‌ಲೈನ್ಸ್ ಕೂಡ ಎಲ್ಲಾ ರಾಜ್ಯ ಸರ್ಕಾರಗಳಿಗೂ ಕೂಡ ಕಳುಹಿಸಿ ಆ ಡ್ರಾಫ್ಟ್ ಏನು ಪೆಂಡಿಂಗ್ ಇದೆ ಇದರ ಬಗ್ಗೆ ಈ ಡ್ರಾಫ್ಟ್ ಗೈಡ್‌ಲೈನ್ಸ್ ನಾವು ಮಾಡುತ್ತಿದ್ದೇವೆ. ಅಲ್ಲಿಯವರೆಗೆ ಸುಪ್ರೀಂ ಕೋರ್ಟ್ ಮತ್ತೆ ಮುಂದುವರೆಸತಕ್ಕಂತಹ ಅವಶ್ಯಕತೆ ಇಲ್ಲ. ಅಲ್ಲಿಯವರೆಗೆ ಇಂಟರೀಮ್ ಆರ್ಡರ್ ಏನು ಮಾಡಬೇಕು, ಪ್ರಾಧಿಕಾರ ರಚನೆ ಮಾಡಬೇಕು ಎನ್ನುವ ಮಾತನ್ನು ಯಾವ ಕೇಂದ್ರ ಸರ್ಕಾರ ಇವತ್ತು ಯಾವ ಒಂದು ಕಾರ್ಯಕ್ರಮವನ್ನು ಜರುಗಿಸುತ್ತಿದ್ದೀರಿ, ಅದನ್ನು ಬದಿಗಿಟ್ಟು ನ್ಯಾಷನಲ್ ವಾಟರ್ ಪಾಲಿಸಿ ಮೇಲೆ ಗೈಡ್‌ಲೈನ್ಸ್ ಮಾಡತಕ್ಕಂತಹ ಕಾರ್ಯಕ್ರಮಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತು ಪುನಃ ಸುಪ್ರೀಂ ಕೋರ್ಟ್‌ಗೆ ಹೇಳಿದಾಗ ಮಾತ್ರ ಈಗಿನ ಕೇಂದ್ರ ಸರ್ಕಾರ ಕೂಡ ಬ್ಲಾಕ್‌ಮೇಲ್ ಪಾಲಿಟಿಕ್ಸ್‌ಗೆ ಒಳಗಾಗುವುದಿಲ್ಲ ಎನ್ನುವ ಮಾತನ್ನು ನಾವು ನಂಬಬೇಕು. ಅಲ್ಲಿಯವರೆಗೆ ನಾವು ಕಾದು ನೋಡೋಣ. ಇದು ಕೇಂದ್ರ ಸರ್ಕಾರ ಈಗ ಮಾಡಬೇಕಾದ ವಿಚಾರ ಹೌದು. ನಮ್ಮ ನಂಜೇಗೌಡರು ಹೇಳಿದ ಮಾತು ವೀರಾವೇಶದ ಮಾತಲ್ಲ, ಶತಮಾನಗಳಿಂದ ಇವತ್ತು ಏನು ಬ್ರಿಟೀಷರ ಕಾಲದಲ್ಲಿ ಮತ್ತು ನಮ್ಮ ಪ್ರಜಾಪ್ರಭುತ್ವದ ಈ60 ವರ್ಷದ ಕಾಲದಲ್ಲಿ ಆಗಾಗ ಏನು ಅನ್ಯಾಯವಾಗುತ್ತಿದೆ ಇದನ್ನು 40 ವರ್ಷಗಳ ಕಾಲ ನೀರಾವರಿಗಾಗಿ ಹೋರಾಟ ಮಾಡಿದಂತಹ ನಂಜೇಗೌಡರು ಮಾತನಾಡುವಾಗ ಒಬ್ಬ ಕರ್ನಾಟಕ ರಾಜ್ಯದ ನಾಗರೀಕನಾಗಿ ಮಾತನಾಡಿದ್ದಾರೆ.

ಒಂದು ಪಕ್ಷದ ನಾಯಕರಾಗಿ, ಪಕ್ಷದ ಕಾರ್ಯಕರ್ತರಾಗಿ ಮಾತನಾಡಲಿಲ್ಲ. ನಾನೂ ಕೂಡ ಮುಖ್ಯಮಂತ್ರಿಯಾಗಿದ್ದಾಗ ಮಾನ್ಯ ಶುಕ್ಲಾರವರು ಇಲ್ಲಿ ನೀರಿನ ಬಿಡುಗಡೆ ಮಾಡಬೇಕೆಂದು ಹೇಳಿದಾಗ ನಮ್ಮಲ್ಲಿ ನೀರು ಇಲ್ಲದೇ ಇದ್ದಾಗ ನಾನು ಹೇಳಿದೆ, ಶುಕ್ಲಾರವರೇ, ನಾನು ಮುಖ್ಯಮಂತ್ರಿ ಪದವಿ ಬಿಟ್ಟರೂ ಕೂಡ ನೀರನ್ನು ಬಿಡುವುದಕ್ಕೆ ಕರ್ನಾಟಕ ರಾಜ್ಯದ ಹಿತವನ್ನು ಬಲಿಕೊಡುವುದಕ್ಕೆ ಸಾಧ್ಯವಿಲ್ಲ, ಎನ್ನುವ ಮಾತನ್ನು ಹೇಳಿದ್ದೇನೆ. ನಾವು ನೀರನ್ನು ಬಿಟ್ಟು ಕೊಟ್ಟಿಲ್ಲ. ನೀರು ಕೊಡುವುದಕ್ಕೆ ನಮ್ಮಲ್ಲಿ ಇರಲಿಲ್ಲ. ಗೈಡ್‌ಲೈನ್ಸ್ ಮಾನಿಟರಿಂಗ್ ರೆಗ್ಯುಲೇಟರಿ ಕಮಿಟಿ ಮಾಡಿದ್ದಾಗ ಕೂಡ ಕರ್ನಾಟಕ ರಾಜ್ಯ ಒಪ್ಪತಕ್ಕದ್ದಲ್ಲ. ಅವರು ನಮ್ಮ ಮುಖ್ಯ ಕಾರ್ಯದರ್ಶಿಯವರಿಗೆ ನೋಟೀಸ್ ಕೊಟ್ಟಾಗ ಕೂಡ ನಾನು ಮುಖ್ಯ ಕಾರ್ಯದರ್ಶಿಯವರಿಗೆ ನಮ್ಮ ಪಕ್ಷದ ಸರ್ಕಾರ ಕೇಂದ್ರದಲ್ಲಿದ್ದರೂ ಕೂಡ ಬಹಳ ಮುಖ್ಯವಾಗಿ ನಮ್ಮ ಮುಖ್ಯ ಕಾರ್ಯದರ್ಶಿಯವರು ಹೇಳಿದರು, ನೀವು ಆ ಸಭೆಯಲ್ಲಿ ಭಾಗವಹಿಸತಕ್ಕದ್ದಲ್ಲ ಎಂಬ ಒಂದು ಆದೇಶವನ್ನು ನಾವು ಆಗ ಕೊಟ್ಟಿದ್ದೇವೆ. ಆದ್ದರಿಂದ ಯಾವುದೇ ಒಂದು ಭಾಷಣದಲ್ಲೂ ರಾಜ್ಯ ಸರ್ಕಾರದ ಹಕ್ಕಿನ ಪ್ರಶ್ನೆ ಬಂದಾಗ ಪಕ್ಷಾತೀತವಾಗಿ ಚರ್ಚೆಯಾಗಬೇಕು. ನಮ್ಮ ಎಲ್ಲಾ ಸದಸ್ಯರೂ ಕೂಡ ಯಾವುದೇ ಪಕ್ಷದ ಕಟ್ಟು ಪಾಡಿಗೆ ಒಳಗಾಗದೆ ನಿರ್ಣಯಾತ್ಮಕವಾದ ಮಾತಿನಲ್ಲಿ ಹೇಳುವುದಾದರೆ ಯಾವ ತಪ್ಪೂ ಕೂಡ ಇಲ್ಲ ಎಂಬ ಮಾತನ್ನು ನಾನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾದ ಅವಶ್ಯಕತೆ ಇದೆ. 1987ರಲ್ಲಿ ನ್ಯಾಷನಲ್ ವಾಟರ್ ಪಾಲಿಸಿ ಮೇಲೆ ಒಂದು ನಿರ್ಣಯವಾಗಿದೆ.

ಈಗಿನ ಪ್ರಧಾನಿಯವರು ನ್ಯಾಷನಲ್ ವಾಟರ್ ಪಾಲಿಸಿಯನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ನ್ಯಾಷನಲ್ ವಾಟರ್ ಪಾಲಿಸಿಯನ್ನು 1987ರ ಸೆಪ್ಟೆಂಬರ್‌ನಲ್ಲಿಯೇ ಆಗಿನ ಪ್ರಧಾನಿಯಾಗಿದ್ದಂಥ ಶ್ರೀ ರಾಜೀವ್ ಗಾಂಧಿಯವರ ಕಾಲದಲ್ಲಿಯೇ ಮತ್ತು ಶ್ರೀ ಶಂಕರಾನಂದರವರು ಮಂತ್ರಿಯಾಗಿ ಇದ್ದಂಥ ಕಾಲದಲ್ಲಿಯೇ ಮೊಟ್ಟಮೊದಲ ಬಾರಿಗೆ ನ್ಯಾಷನಲ್ ವಾಟರ್ ಪಾಲಿಸಿಯನ್ನು ಮಾಡಲಾಗಿದೆ. ಅದರಲ್ಲಿ ಬೇಕಾದರೆ ತಿದ್ದುಪಡಿಯನ್ನು ಮಾಡಲಿ. ಆದುದರಿಂದ ನ್ಯಾಶನಲ್ ವಾಟರ್ ಪಾಲಿಸಿಯನ್ನು ಮಾಡಿ ನ್ಯಾಷನಲ್ ಅಜೆಂಡಾದಲ್ಲಿ ಸೇರಿಸಿದ್ದೇವೆ ಎಂದ ಮಾತ್ರಕ್ಕೆ ನಾವು ತೃಪ್ತಿ ಪಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಅದು ಈಗಾಗಲೇ ಮಾಡಿಯಾಗಿದೆ. ಈಗ ನಮಗೇನಾಗಬೇಕಿದೆಯೆಂದರೆ ಏನು ಕೇಂದ್ರ ಸರ್ಕಾರ ನ್ಯಾಷನಲ್ ವಾಟರ್ ಪಾಲಿಸಿ ಮೇಲೆ ಏನೊಂದು ಗೈಡ್‌ಲೈನ್ಸನ್ನು ಸರ್ಕ್ಯುಲೇಟ್ ಮಾಡಿದ್ದಾರೆ ಅದರ ಆಧಾರದ ಮೇಲೆ ಗೈಡ್‌ಲೈನ್ಸನ್ನು ನಾವು ಮಾಡುತ್ತೇವೆಂದು ಕೇಂದ್ರ ಸರ್ಕಾರ ನಮಗೆ ಆಶ್ವಾಸನೆಯನ್ನು ಕೊಟ್ಟರೆ ಅದರ ವಿಚಾರದಲ್ಲಿ ನಾವು ನಂಬಬಹುದು. ಇಲ್ಲಿಯವರೆಗೆ ಅಂಥ ಆಶ್ವಾಸನೆ ನಮಗೆ ಬಂದಿಲ್ಲ. ನ್ಯಾಷನಲ್ ವಾಟರ್ ಪಾಲಿಸಿ ಮೇಲೆ ಗೈಡ್‌ಲೈನ್ಸನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತು ನಮಗೆ ನ್ಯಾಶನಲ್ ಅಜೆಂಡಾದಲ್ಲಿ ಬಂದಿಲ್ಲ. ಆ ರೀತಿ ಬರದಿದ್ದರೆ ಯಾವುದೇ ಒಂದು ಹೊಸ ಹೆಜ್ಜೆಯನ್ನು ನೀವು ಇಟ್ಟ ಹಾಗೆ ಆಗುವುದಿಲ್ಲ. ಆದರೆ ಕುಮಾರಿ ಜಯಲಲಿತಾರವರು ದೆಹಲಿಗೆ ಹೋಗಿ ಸ್ಪಷ್ಟವಾಗಿ ಹೇಳಿದ್ದಾರೆ ಪ್ರಾಧಿಕಾರ ರಚನೆ ಆಗುತ್ತದೆ ಮತ್ತು ಇಂಟರೀಮ್ ಆರ್ಡರ್ ಇಂಪ್ಲಿಮೆಂಟ್ ಆಗುತ್ತದೆ ಎಂದಿದ್ದಾರೆ. ಆದರೆ ಕೇಂದ್ರ ಸರ್ಕಾರದ ವಕ್ತಾರರಿಂದ ಈ ಮಾತು ಸರಿಯಿಲ್ಲ ಎನ್ನತಕ್ಕಂಥ ಮಾತು ಇವೊತ್ತಿಗೂ ಕೂಡ ಬಂದಿಲ್ಲ. ಯಾರನ್ನು ನಂಬಬೇಕೋ ಮುಂದೆ ನೋಡೋಣ. ಆದರೆ ಕೇಂದ್ರ ಸರ್ಕಾರದ ವಕ್ತಾರರು ಈ ಬಗ್ಗೆ ಹೇಳಲೇಬೇಕು; ಇಂಥ ಆಶ್ವಾಸನೆಯನ್ನು ನಾವು

ಕೊಟ್ಟಿಲ್ಲವೆಂದು ಹೇಳಬೇಕು. ಏಕೆಂದರೆ ಈ ಮಾತನ್ನು ಆಡಿರುವುದು ಕೇಂದ್ರ ಸರ್ಕಾರದ ಒಂದು ಅಂಗಪಕ್ಷದ ಪ್ರಮುಖವಾದಂಥ ನಾಯಕಿ. ಪ್ರಾಧಿಕಾರ ರಚನೆಯಾಗುತ್ತದೆ. ಆದ್ದರಿಂದಲೇ ನ್ಯಾಷನಲ್ ವಾಟರ್ ಪಾಲಿಸಿಯನ್ನು ನ್ಯಾಷನಲ್ ಅಜೆಂಡಾದಲ್ಲಿ ಸೇರಿಸಿದ್ದು ಎನ್ನತಕ್ಕಂಥ ಮಾತನ್ನು ಜಯಲಲಿತಾರವರು ಹೇಳಿದ್ದರೂ ಕೂಡ ಅಂಥ ಆಶ್ವಾಸನೆ ಕೊಟ್ಟಿಲ್ಲವೆಂದು ಇವೊತ್ತಿಗೂ ಕೂಡ ಕೇಂದ್ರ ಸರ್ಕಾರದ ವಕ್ತಾರರಿಂದ ಬಂದಿಲ್ಲ. ಹೀಗೆ ಹೇಳಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಏನು ಮಾಡುತ್ತದೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ. ಇವೊತ್ತು ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಏನು ಒಂದು ನಿರ್ಣಯವನ್ನು ಮಾಡಿದ್ದಾರೆ ಅದನ್ನು ನಾವೆಲ್ಲರೂ ಬಹಳ ಗಂಭೀರವಾಗಿ ತೆಗೆದುಕೊಂಡು ಎಲ್ಲಿಯವರೆಗೆ ಗೈಡ್‌ಲೈನ್ಸನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ನಾವೂ ಕೂಡ ಮಾನ್ಯ ನಂಜೇಗೌಡರು ಹೇಳಿದ ಹಾಗೆ ಕಠೋರವಾದ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ನಾವು ಇಲ್ಲಿಯವರೆಗೆ ಬಹಳ ಸಮಾಧಾನದಿಂದ ಇದ್ದೆವು; ಆದರೆ ಕೇಂದ್ರ ಸರ್ಕಾರ ಮತ್ತೆ ತಮಿಳುನಾಡು ಸರ್ಕಾರ ಒಂದರ ಮೇಲೆ ಒಂದರಂತೆ ನಿರ್ಣಯಗಳನ್ನು ಮಾಡುತ್ತಾ ಹೋದರೆ ನಾವು ಸುಮ್ಮನಿರುವುದಕ್ಕಾಗುವುದಿಲ್ಲವಾದ ಕಾರಣ ಟ್ರಿಬ್ಯೂನಲನ್ನು ನಾವು ಬಹಿಷ್ಕಾರ ಮಾಡಬೇಕಾಗುತ್ತದೆ. ನಾನು ಇಲ್ಲಿಯವರೆಗೆ ಆ ಮಾತನ್ನು ಹೇಳುವುದಕ್ಕೆ ಹೋಗಿರಲಿಲ್ಲ. ಇನ್ನು ಮುಂದೆ ಯಾವುದೇ ಇಂಥ ಒಂದು ನಿರ್ಣಯ ಮಾಡಿದರೆ ಇನ್ನು ಟ್ರಿಬ್ಯೂನಲನ್ನು ಬಹಿಷ್ಕಾರ ಹಾಕಬೇಕಾಗುತ್ತದೆ ಎನ್ನಬೇಕಾಗುತ್ತದೆ. ಏಕೆಂದರೆ ಇವೊತ್ತು ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಇಂಥ ಒಂದು ಕಠಿಣವಾದ ನಿರ್ಣಯವನ್ನು ಮಾಡಿರುವಾಗ ಅದಕ್ಕೆ ನಾವು ಯಾವ ರೀತಿ ಉತ್ತರ ಕೂಡ ಬೇಕಾಗುತ್ತದೆ ಎಂಬುದು ಮುಖ್ಯ. ಇದು ನಮ್ಮ ದೇಶದ ಮತ್ತು ರಾಜ್ಯದ ಮುಂದೆ ಇದೆ. ಇದಕ್ಕಾಗಿ ನಮ್ಮ ಕರ್ನಾಟಕ ರಾಜ್ಯ ಕಠಿಣವಾದಂಥ ನಿಲುವನ್ನು ಈ ಬಗ್ಗೆ ತೆಗೆದುಕೊಳ್ಳಲೇಬೇಕಾಗಿದೆ. ಏಕೆಂದರೆ ಯಾವಾಗಲೂ ಬಹಳ ಸಜ್ಜನಿಕೆಯಿಂದ ನೀವು ಹೇಳಿದ ಪ್ರಕಾರ ಕಾನೂನಿನ ಪ್ರಕಾರವೇ ಹೋಗುವುದಾದರೆ ಕಾನೂನನ್ನೇ ಒಂದು ಆಯುಧವನ್ನಾಗಿ ಮಾಡಿಕೊಂಡು ಕರ್ನಾಟಕವನ್ನು ಇರಿಯತಕ್ಕಂಥ ಪ್ರಯತ್ನ ಸಂವಿಧಾನ ಪ್ರಕಾರವೂ ಇಲ್ಲ ಮತ್ತು ಕಾನೂನು ಪ್ರಕಾರವೂ ಇಲ್ಲ. ಇವೊತ್ತು ಬಡಿಗ ಹಿಡಿದದ್ದೇ ಬಡಿಗೆ ಎಂದು ಇವೊತ್ತು ಕೇಂದ್ರ ಸರ್ಕಾರ ಮತ್ತು ಇಂಟರ್‌ಸ್ಟೇಟ್ ಕೌನ್ಸಿಲ್‌ನಂಥ ಸಂಸ್ಥೆಗಳು ಏನು ತಮ್ಮ ಪಾವಿತ್ರ್ಯತೆಯನ್ನು ಕಾಯ್ದುಕೊಳ್ಳಬೇಕೋ ಅಂಥ ಸಂಸ್ಥೆಗಳೇ ಈ ರೀತಿಯ ನಿರ್ಣಯಗಳನ್ನು ಮಾಡುವುದೇ ಆದರೆ ಅದಕ್ಕೆ ವಿರುದ್ಧವಾಗಿ ನಾವೂ ಕೂಡ ಬಹುಶಃ ಕಠಿಣವಾದಂಥ ನಿರ್ಣಯವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ.

ಶ್ರೀ ಹೆಚ್. ಎನ್. ನಂಜೇಗೌಡ : ಈ ಇಂಟರ್‌ಸ್ಟೇಟ್ ಕೌನ್ಸಿಲ್ ಮಾಡಿರುವುದು ತೀರ್ಮಾನ ಏನಿದೆ ಅದು ಮ್ಯಾನ್‌ಡೇಟರಿಯೋ ಅಥವಾ ರೆಕಮೆಂಡೇಟರಿಯೋ? ನಾನು ತಿಳಿದಿರುವ ಪ್ರಕಾರ ರೆಕಮೆಂಡೇಟರಿ.

SRI M. VEERAPPA MOILY : It is recommendatory. The recommendations of the Inter-State Council are not mandatory. They are only recommendatory. The very nature of it is consensus.

SRI K.N. NAGEGOWDA : Kindly advise us on this point. Sarkaria Commission is constituted under the Constitution.

ಆರ್ಟಿಕಲ್ 262ರಲ್ಲಿ ಕ್ಲಿಯರ್ ಆಗಿ ಹೇಳಲಾಗಿದೆ. ಇಂಟರ್ ಸ್ಟೇಟ್ ಕೌನ್ಸಿಲ್ 263 ರಲ್ಲಿ ಕಾನ್ಸ್‌ಟ್ಯೂಟ್ ಆಗಿದ್ದು ಅದು ರೆಕಮೆಂಡರಿ ಬಾಡಿ. ನೀವು ಉಪಮುಖ್ಯಮಂತ್ರಿಗಳು ಈ ಬಗ್ಗೆ ರೈಸ್ ಮಾಡಿ ಅಲ್ಲಿ ಇಂಟರ್‌ಸ್ಟೇಟ್ ಕೌನ್ಸಿಲ್ ಬರಕೂಡದು ಎಂದು ರೆಕಮೆಂಡ್ ಮಾಡಬೇಕಾಗಿತ್ತು ಎಂದು ಹೇಳುತ್ತಾರೆ. ಇದರ ಬಗ್ಗೆ ಅಡ್ವೋಕೇಟ್ ಜನರಲ್‌ರವರನ್ನು ಕೇಳೋಣ. ಕೇಳಬಾರದು ಎಂದೇನೂ ಇಲ್ಲ. ಇದರಿಂದ ಖಂಡಿತ ಅನುಕೂಲವಾಗುವುದಾದರೆ ಮುಂದಿನ ಮೀಟಿಂಗ್‌ನಲ್ಲಿ ಕೇಳೋಣ. ಈಗ ಇಂಟರ್‌ಸ್ಟೇಟ್ ಕೌನ್ಸಿಲ್ 262ನಲ್ಲಿ ಕಾನ್‌ಸ್ಟಿಟ್ಯೂಟ್ ಆಗಿದೆ. ಆದರೆ 263 ನಲ್ಲಿ ಏನು ಹೇಳಲಾಗಿದೆಯೆಂದರೆ. ``Provisions with respect to an Inter-State Council:-

"If at any time it appears to the President that the public interest would be served by the establishment of a Council charged with the duty of- (a) inquiring into and advising upon disputes which may have arisen between states. That means co-ordination between the two states.

ಶ್ರೀ ಎಂ. ವೀರಪ್ಪ ಮೊಯ್ಲಿ : ಅದು ಬೇರೆ.

ಶ್ರೀ ಕೆ. ಎನ್. ನಾಗೇಗೌಡ : ಇಲ್ಲ, ಇಲ್ಲ. You have raised a very relevant legal point. Kindly clarify, Inter-State Council is constituted under Article 263; there is a mention of co-ordination between the two states. ಆ ಆರ್ಟಿಕಲ್ ಒಳಗೆ ಇದನ್ನು ಅವರು ಡಿಸ್‌ಕಸ್ ಮಾಡಿದ್ದಾರೆಂದು ನಾವು ಅಂದುಕೊಂಡಿದ್ದೇವೆ. If it is wrong again we will take a legal opinion. ಆದರೆ 263ಗೆ ಕ್ಲಾರಿಫಿಕೇಶನ್ ಅವರು ಕೊಟ್ಟುಬಿಟ್ಟರೆ ನಮಗೆ ಅನುಕೂಲವಾಗುತ್ತದೆ. ಇದರಲ್ಲಿ ಬೇರೇನೂ ಅಲ್ಲ. I don't want to dispute this point.

SRI M. VEERAPPA MOILY : The constitutional Law will have to be strictly read. What is provided need not be explained. What is provided under Article 262? ಬಹಳ ಸ್ಪಷ್ಟವಾಗಿ ಏನು ಅಧಿಕಾರವೆಂದು ಕೊಟ್ಟಮೇಲೆ under Article 263, Inter-State Water Dispute ಪ್ರಶ್ನೆ ಬರುವದೇ ಇಲ್ಲ. It is very clear, because it is not available for any interpretation when it is excluded. Article 262 excludes the jurisdiction of Article 263. It is very clear. ಇದಕ್ಕೆ ಬೇಕದರೆ ಅವರು ಕಾನೂನಿನ ಪ್ರಕಾರ ಜನರಲ್ ಕ್ಲಾಸಸ್ ಹಾಕಿ ನೋಡಲಿ, ಆದುದರಿಂದ ಈ ಪ್ರಶ್ನೆ ಬಹಳ ಕ್ಲಿಯರ್ ಇದೆ. Some of the recommendations of the Sarkaria Commission are totally out-dated. ತಮಗೆ ಗೊತ್ತಿದೆ ಉಪಾಧ್ಯಕ್ಷರೇ, ಇಂಟರೀಮ್ ರಿಪೋರ್ಟ್ ಎಂದು ಹೇಳಿ ಅವಾರ್ಡ್ ಎಂದು ಹೇಳಿ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ 1956 ಪ್ರಕಾರ ಇಲ್ಲವೇ ಇಲ್ಲ. It is first invented. ಇಂಟರೀಮ್ ಆರ್ಡರ್ ಕೊಡತಕ್ಕಂಥ ಕಾನ್‌ಸೆಪ್ಟ್ ಏನಿದೆ, it is invented by the present Cauvery Tribunal and it is endorsed subsequently by the Supreme Court. The

Supreme Court subsequently in their decision say that even this interim order constitutes an order under Section 5(3) of the Inter-State Dispute Act, because of the consent given by the Attorney General and it can be again taken upto the Supreme Court. It has to be taken up by the State Government before the Supreme Court that the interim order will not amount to an award even under section 5. You have to take it up. It is a Constitutional point which has to be taken up. ಅದು ಪ್ರತ್ಯೇಕ. ಆದರೆ ಸರ್ಕಾರಿಯೂ ಕಮೀಷನ್ ರಿಪೋರ್ಟ್ ಕೊಡುವಾಗ what was in the mind of Justice Sarkaria? It is only the final Award. ಏಕೆಂದರೆ ಬೇರೆ ಕ್ಲಾಸಸ್ ಮೇಲೆ ಅವರು ಅವಾರ್ಡಿನ ವಿಚಾರ ಮಾತನಾಡುತ್ತು ಅವರು ಏನು ಹೇಳಿದ್ದಾರೆ ಎಂಬುದಕ್ಕೆ ನಾನು ವಿಸ್ತರಿಸಿ ನಾನು ಇಂದು ಮಾತನಾಡುವುದಕ್ಕೆ ಹೋಗುವುದಿಲ್ಲ. Sarkaria commission means it is an award, it is final award. ನೋಡಿ ನೀವು ಬೇಕಾದರೆ ಕ್ಲಾಸ್ ಬೈ ಕ್ಲಾಸ್ ಓದುತ್ತಾ ಬಂದರೆ what he meant is a final award, not interim order. ಇವೊತ್ತು ಇಂಟಿರಮ್ ಆರ್ಡರ್ ಎಂದು ಕೊಟ್ಟು ಅದೇ ಅವಾರ್ಡನ್ನು ಫೈನಲ್ ಎಂದು ಹೇಳಿ ಆ ಪರ್‌ಪೆಕ್ಟ್ಯುಯಟಿ ಕಾನ್‌ಸಪ್ಟನ್ನು ಇಂಟ್ರಡ್ಯೂಸ್ ಮಾಡಿದಂಥ ಈ ಒಂದು ಹೊಸ ವ್ಯವಸ್ಥೆಯಲ್ಲಿ ಸರ್ಕಾರಿಯಾ ಕಮಿಷನ್ ಶಿಫಾರಸ್ಸು ಒಪ್ಪಿತವಾಗುವುದಿಲ್ಲ. ತಾವು ದಯಮಾಡಿ right now, you must send a reply. ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾಗುತ್ತದೆ You must ask them to convene an emergent meeting of the Inter-State Council and annul this kind of resolution which is based upon an out-dated recommendation of Sarkaria Commission. Sarkaria Commission never intended the interim order. He intended only the final order. ಇದು ಬೇರೆ ಬೇರೆ ದಿಕ್ಕಿನಲ್ಲಿ ಹೋಗುತ್ತದೆ. ಬೇರೆ ಬೇರೆ ಆಯಾಮದಲ್ಲಿ ಇದನ್ನು ಕಾರ್ಯಾಚರಣೆ ಮಾಡತಕ್ಕಂಥ ಒಂದು ಸಂದರ್ಭದಲ್ಲಿ ಸಾಕಷ್ಟು ಗೊಂದಲಗಳು ಇವತ್ತು ಉಲ್ಬಣವಾಗತಕ್ಕಂಥ ಪರಿಸ್ಥಿತಿ ಇರುವಾಗ ಈ ವಿಚಾರ ಕೂಡ ಬಹಳ ಪ್ರಾಮುಖ್ಯವಾಗುತ್ತದೆ ಎನ್ನುವ ವಿಚಾರವನ್ನು ಹೇಳುತ್ತಾ, ನಾನು ಇಷ್ಟಕ್ಕೆ ಮಾತ್ರ ಸೀಮಿತಗೊಳಿಸಿ, ಈ ಬಗ್ಗೆ ತುರ್ತು, ಎಮರ್ಜೆಂಟ್ ಮೀಟಿಂಗ್ ಕರೆಯುವುದಕ್ಕೆ ಹೇಳಬೇಕು. ಮತ್ತು ತೀವ್ರವಾದಂತಹ ಆಕ್ಷೇಪಣೆಯನ್ನು ಕೊಡಬೇಕು. ಮತ್ತು ಈ ಸದನದಲ್ಲಿ ಒಂದು ಒಕ್ಕೊರಲಿನ ನಿರ್ಣಯವನ್ನು ಕೂಡ ನಾವು ಮಾಡಬೇಕಾಗುತ್ತದೆ. ಆದುದರಿಂದ ಇವತ್ತು ಮಾಡದೇ ಇದ್ದರೆ ಮುಂದೆ ಬರತಕ್ಕಂಥ ಅನೇಕ ವಿಚಾರಗಳಲ್ಲಿ ಈ ದೇಶದಲ್ಲಿ ನಮ್ಮ ರಾಜ್ಯದಲ್ಲಿ ಅನೇಕ ಗೊಂದಲಗಳು ಉಂಟಾಗತಕ್ಕಂಥ ಸಂದರ್ಭಗಳು ಬರುತ್ತವೆ ಎಂದು ಹೇಳುತ್ತೇನೆ. ಇಷ್ಟು ಹೇಳಿ ನನಗೆ ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ನಂಜೇಗೌಡರು ಮಾತನಾಡತಕ್ಕಂಥಾದ್ದು, ಮಾನ್ಯ ಮೊಯಿಲಿಯವರು ಮಾತನಾಡತಕ್ಕಂಥಾದ್ದಕ್ಕೆ ಈ ಸದನದಲ್ಲಿ ಪೂರ್ಣ ಬೆಂಬಲ ಎಲ್ಲರ ಕಡೆಯಿಂದಲೂ ಇದೆ. ಅದರಲ್ಲಿ ಎರಡು ಮಾತಿಲ್ಲ. ರಾಜ್ಯದ ಹಿತದ ಪ್ರಶ್ನೆ ಬಂದಾಗ ಎಲ್ಲದಕ್ಕಿಂತ ಮೇಲಾಗಿ ಬಿಡಬೇಕಾಗುತ್ತದೆ. ನಮ್ಮ ಕುರ್ಚಿ ಮುಖ್ಯವಲ್ಲ. ನಮ್ಮ

ಮಾಲೀಕರು ಈ ನಾಡಿನ ಜನರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದಕ್ಕೆ ಬಂದಿರುವಂತಹ ಪ್ರತಿನಿಧಿಗಳು. ಇದರಲ್ಲಿ ಎರಡು ಮಾತಿಲ್ಲ. ಒಂದು ಸಂಗತಿಯನ್ನು ಈ ಸದನದ ಮೂಲಕ ಈ ರಾಜ್ಯದ ಜನತೆಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ಈ ನಿಮಿಷದವರೆಗೂ ಅಟಲ್ ಬಿಹಾರಿ ವಾಜಪೇಯಿ ಅವರು ಈ ದೇಶದ ಪ್ರಧಾನಿಯಾದಮೇಲೆ ಈ ವಿಷಯದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿಲ್ಲ. ಒಂದು ಹೆಜ್ಜೆ ಮುಂದೆ ಹೋಗಿಲ್ಲ. ಅದರ ಬದಲಿಗೆ ಈ ಸದನದಲ್ಲಿ ಒಕ್ಕೊರಲಿನಿಂದ ಅವತ್ತಿನಿಂದ ಇವತ್ತಿನವರೆಗೂ ಯಾವ ರಾಷ್ಟ್ರೀಯ ಜಲನೀತಿ ಮಾರ್ಗಸೂಚಿಯನ್ನು ಜಾರಿಗೆ ತರಬೇಕೆಂದು ಕೂಗುತ್ತಿದ್ದಾಗ, ಹಿಂದಿನ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ ಇರಬಹುದು, ಮಾನ್ಯ ದೇವೇಗೌಡರು ಪ್ರಧಾನಿಯಾಗಿದ್ದಂತಹ ಕಾಲದಲ್ಲಿ ಇರಬಹುದು, ಮಾನ್ಯ ಗುಜ್ರಾಲ್‌ರವರು ಪ್ರಧಾನಿಯಾಗಿದ್ದಂತಹ ಕಾಲದಲ್ಲಿ ಇರಬಹದು ಯಾವುದನ್ನು ಮಾಡುವುದಕ್ಕೆ ಪೊಲಿಟಿಕಲ್ ವಿಲ್ ಇರಲಿಲ್ಲ ಕಮಿಟ್‌ಮೆಂಟ್ ಇರಲಿಲ್ಲ, ಆ ಕೆಲಸವನ್ನು ಮಾಡುತ್ತೇವೆಂದು ಹೇಳಿ ಅಧಿಕಾರಕ್ಕೆ ಬರುತ್ತಿದ್ದ ಹಾಗೆ ಮೀನಾಮೇಷ ಎಣಿಸದೆ ನಮ್ಮ ನ್ಯಾಷನಲ್ ಅಜೆಂಡಾದಲ್ಲಿ ಬಹಳ ಸ್ಪಷ್ಟವಾಗಿ ರಾಷ್ಟ್ರೀಯ ಜಲನೀತಿ ಮಾರ್ಗ ಸೂಚಿಯನ್ನು ಜಾರಿಗೆ ತರುವುದಕ್ಕೆ ನಾವು ಬದ್ಧರಾಗಿದ್ದೇವೆ ಎಂದು ಹೇಳಿ ನಮ್ಮ ಸಹಕಾರ ಕೊಟ್ಟಿರುವಂತಹ ಮಿತ್ರಪಕ್ಷಗಳು ಎಲ್ಲರೂ ಒಂದಾಗಿ ಘೋಷಣೆ ಮಾಡಿರುವಂಥಾದ್ದು ಇವತ್ತು ದೇಶದ ಜನರ ಮುಂದೆ ಇದೆ. ಇನ್ನು ಎರಡನೆಯದಾಗಿ ಗಮನಿಸಬೇಕಾದದ್ದು ಈ ರಾಜ್ಯದ ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ರಾಜ್ಯದ ಹಿತಕ್ಕೆ ದಕ್ಕೆ ತರುವ ಹಾಗೆ ನೀವು ಭಾಷಣವನ್ನು ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಮಾಡಿದ್ದೀರಿ ಎಂದು ನಾವು ಹೇಳುವುದಿಲ್ಲ. ಆದರೆ ನೀವು ಏನು ಏನು ಭಾಷಣ ಮಾಡಿದಿರಿ ಅದೇನು ಮುಖ್ಯವಲ್ಲ. ಆದರೆ ಪ್ರೊಸೀಡಿಂಗ್‌ನಲ್ಲಿ ಏನು ರೆಕಾರ್ಡ್ ಆಗಿದೆ ಅದು ದಾಖಲೆ. ಏನಾಗಿದೆ ದಾಖಲೆ?

The Standing Committee had considered the recommendations and had reached consensus. Detailed discussions were held in respect of each recommendation. The consensus proposed by the Standing Committee in respect of each recommendation was endorsed by the Members of the Inter State Council except in respect of recommendation 212.

ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ನೀವು ಸದಸ್ಯರಿದ್ದೀರಿ. ನಿಮ್ಮ ಎದುರುಗಡೆ ಆದಂತಹ ಪ್ರೊಸಿಡಿಂಗ್ ಇದೆ. ರೆಕಮೆಂಡೇಷನ್ 212 ಬಿಟ್ಟು ಬೇರೆ ಎಲ್ಲದಕ್ಕೂ ಒಪ್ಪಿಕೊಂಡಿದ್ದೀರಿ. ಏನು ಒಪ್ಪಿಕೊಂಡಿದ್ದೀರಿ?

The gist of the recommendation/consensus proposed by the Standing Committee and the final recommendations of the Inter State Council is given in the Statement at Annexure. In brief, the consensus proposed by the Standing Committee in respect of all the recommendations were endorsed by the Inter State Council in respect of recommendation No. 212 relating to setting up of

the Tribunal on application made by a State, it was decided that the disputes already settled should not be reopended.

ರೆಕಮೆಂಡೇಷನ್ 212 ಬಿಟ್ಟು ಇಲ್ಲಿ ಇದ್ದಂತಹ ಎಲ್ಲಾ ಸದಸ್ಯರು ಉಳಿದ ಎಲ್ಲಾದಕ್ಕೂ ಚರ್ಚೆ ಮಾಡಿ ಒಪ್ಪಿಕೊಂಡಿದ್ದೀರಿ. ಏನು ಒಪ್ಪಿಕೊಂಡಿದ್ದೀರಿ? ರೆಕಾರ್ಡ್‌ನಲ್ಲಿ ಏನಿದೆ? 215 ಪೇಜ್ ನಂಬರ್ 2ರಲ್ಲಿ ರೆಕಮೆಂಡೇಷನ್ ಆಫ್ ಸರ್ಕಾರಿಯ ಕಮಿಷನ್, ಏನು ಮಾಡಿದ್ದೀರಿ?

Proposed consensus of the Standing Committee.

Recommendations of the Inter State Council.

The Inter State Water Disputes Act should be amended to ensure that the Award of the Tribunal becomes effective within five years from the date of the Constitution of the Tribunal. If, however, for some reasons, the Tribunal feels that the 5-years period has to be extended, the Union Government may, on a reference made by the Tribunal, ಇದು ರೆಕಮೆಂಡೇಷನ್, ರೆಕಮೆಂಡೇಷನಲ್ಲಿ ಒಪ್ಪಿಗೆ ಏನಿದೆ? Extend its term.

What is the proposed consensus of the Standing Committee? The Tribunal should give its Award within a period of three years from the date of the constitution. However, if for unavoidable reasons, the Award could not be given within a period of three years, the Union Government may extend the period not exceeding two years, the Award should be implemented within two years from the date of Notification of the Award. If for unavoidble resions, the Award could not be implemented with in two years, the Union Government may extend the period suitably.

ಇದು ಒಪ್ಪಿಕೊಂಡಿದ್ದೀರಿ. ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ರೆಕಮೆಂಡೇಷನ್ 4ನೇ ಕಾಲಂನಲ್ಲಿ ಅಗ್ರೀಡ್ ಎಂದು ಇದೆ. ಇನ್ನೊಂದು ಮುಖ್ಯವಾದ ಪ್ರಪೋಸಲ್ ಏನು?

The Inter State River Water Disputes Act, 1956 should be amended so that the Tribunal Award has the same force and sanction behind it as an order to the decree of the Supreme Court to make the Tribunal's Award really binding.

ಇದು ಯಾವತ್ತು ಆಗಿರುವುದು? ಅಟಲ್‌ಬಿಹಾರಿ ವಾಜಪೇಯಿಯವರು ಪ್ರಧಾನಿ ಆದಮೇಲೆ ಅಲ್ಲ. ದಿನಾಂಕ 28.11.97 ರಂದು ಅಗ್ರೀಡ್, ಅಗ್ರೀಡ್, ಅಗ್ರೀಡ್. ನಾನು ಹೇಳುತ್ತಿದ್ದೇನೆ, ಈ ಒಂದು ಸಂಸ್ಥೆಗೆ ಅಧಿಕಾರ ಇದೆಯೋ ಇಲ್ಲವೋ ಅದು ಬೇರೆ ವಿಷಯ. ನಾವೇನು ಅಂದು ಕೂಗಿದೆವು, ಬಡಿದುಕೊಂಡೆವು. ಯಾವ ಕಾರಣಕ್ಕೂ ಟ್ರಿಬ್ಯೂನಲ್ ಮುಂದೆ ಹೋಗಬೇಡಿ. ರಾಷ್ಟ್ರೀಯ ಜಲನೀತಿ ಮಾರ್ಗಸೂಚಿ ಇಲ್ಲದೆ, ಫುಟ್‌ಬಾಲ್ ಆಡಬೇಕು. ಗೋಲೇ ಇಲ್ಲ. ಆ ಕಡೆ ಈ ಕಡೆ, ಯಾರು ಯಾವ

ಕಡೆ ಒಡೆಯುವುದು? ಯಾರು ಜಡ್ಜ್ ಮಾಡುವವರು? ಸುಪ್ರೀಂ ಕೋರ್ಟ್ ಜಡ್ಜ್ ಇರಬಹುದು. ಟ್ರಿಬ್ಯೂನಲ್ ಇರಬಹುದು. ಅವತ್ತಿನಿಂದ ಬಡಿದುಕೊಂಡೆವು ನಿಮ್ಮ ಸರ್ಕಾರಕ್ಕೆ ಹಾಗೂ ಅಧಿಕಾರಿಗಳಿಗೆ. ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಫ್ರೇಮ್ ಆಗಲಿ. ಅಲ್ಲಿಯವರೆಗೆ ಟ್ರಿಬ್ಯೂನಲ್ ಬಾಯ್‌ಕಾಟ್ ಮಾಡೋಣ. ನೀವು ಹೋಗಿ ಅದರ ಕೈಗೆ ಸಿಕ್ಕಿಹಾಕಿಕೊಳ್ಳಬೇಡಿ. ಎಂದು. ಆದರೆ ನೀವು ಅಲ್ಲಿ ಹೋಗಿ ಸರಿಯಾಗಿ ಆರ್ಗ್ಯೂ ಮಾಡಿದಿರಾ? ಟ್ರಿಬ್ಯೂನಲ್ ಮುಂದೆ ನಮ್ಮ ವಿಚಾರಗಳನ್ನು ಸರಿಯಾಗಿ ಮನದಟ್ಟು ಮಾಡಿ ಇಟ್ಟಿರಾ? ಕೋಟ್ಯಾಂತರ ರೂಪಾಯಿ ನಿಮ್ಮ ಅಡ್ವೋಕೇಟ್ ಖರ್ಚು ಮಾಡಿದಮೇಲೂ ಸಹ ಯಾವುದೇ ಸಮಯದಲ್ಲಿ ಅಲ್ಲಿ ಹೋಗಿ ನೋಡಿ ನಮ್ಮ ರಾಜ್ಯದ ನಿಲುವು ಈ ರೀತಿ ಇರಬೇಕು ಎಂದು ಹೇಳಲಿಲ್ಲ. ಈ ಹೌಸ್‌ನಲ್ಲಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿರಿ, ಆದರೆ ಬೇರೆ ಸಮಯದಲ್ಲಿ ಚರ್ಚೆ ಮಾಡಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂತಹ ಕೆಲಸವನ್ನು ನೀವು ಎಂದೂ ಮಾಡಲಿಲ್ಲ. ಇದು ಮೊದಲನೇ ತಪ್ಪು. ಮಾನ್ಯ ವೀರಪ್ಪ ಮೊಯಿಲಿಯವರೇ, ನಾನು ಕೇಳುತ್ತೇನೆ, ಈ ಇಂಟರೀಮ್ ಆರ್ಡರ್ ಕೊಟ್ಟಿರಲ್ಲಾ, ಆ ಕಾನೂನು ಬಾಹಿರವಾಗಿ ಆಗಿರುವಂತಹ ಇಂಟರೀಮ್ ಆರ್ಡರನ್ನು ಅವತ್ತು ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಷನ್ ಮಾಡಿತಲ್ಲಾ, ಅದನ್ನು ಮಾಡಬಾರದು ಎಂದು ಕೇಳಿಕೊಂಡೆವು ತಾನೇ ಇಲ್ಲಿ. ಆಗ ಈ ಕಳಕಳಿ ಎಲ್ಲಿ ಹೋಗಿತ್ತು? ಇಲ್ಲಿ ಏನಾಗಿದೆ ಎಂದರೆ ವೀರಾವೇಶದ ಮಾತನಾಡಿ ರಾಜ್ಯದ ರೈತರಿಗೆ ನಿಮ್ಮ ಪರವಾಗಿ ಇದ್ದೇವೆ ಎಂದು ಕೂಗಿ ಅವನನ್ನು ನೇಣುಗುಂಬಕ್ಕೆ ಹಾಕುವಂತಹ ಕೆಲಸ ನಿರಂತರವಾಗಿ ನಡೆದುಕೊಂಡು ಬಂದಿದೆ. ನೀವೂ ಸಹ ಪ್ರಾಮಾಣಿಕವಾಗಿ ಪೊಲಿಟಿಕಲ್ ವಿಲ್ ಇಟ್ಟುಕೊಂಡು ಕುರ್ಚಿ ಇರಲಿ, ಹೋಗಲಿ, ಯಾರೇ ಗೆದ್ದು ಅಧಿಕಾರದಲ್ಲಿ ಇರಲಿ, ನನ್ನ ರಾಜ್ಯದ ಹಿತಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳುತ್ತೇನೆ ಎನ್ನುವಂತಹ ಕಳಕಳಿ ಯಾವ ಕಾಲದಲ್ಲಿ ಕೂಡ ಬರಲಿಲ್ಲ. ವ್ಯವಹಾರಿಕವಾಗಿ ನೋಡಿದಿರಿ. ಮೊದಲನೇ ತಪ್ಪು ಗೆಜೆಟ್ ನೋಟಿಫಿಕೇಷನ್‌ಗೆ ಅವಕಾಶ ಮಾಡಿಕೊಟ್ಟಿರಿ. ಎರಡನೆಯದು 205 ಟಿ.ಎಂ.ಸಿ ನೀರನ್ನು ಬಿಡಬೇಕೆಂದು ಆದೇಶ ಜಾರಿಗೆ ತರಲು ಪ್ರಾಧಿಕಾರ ರಚನೆ ಪ್ರಸ್ತಾಪ ಬಂದಿತ್ತಲ್ಲಾ ನಿಮ್ಮ ಅಟಾರ್ನಿ ಜನರಲ್ ಮೂಲಕ, ಈಗಾಗಲೇ ಅದರ ಬಗ್ಗೆ ಮೊಯಿಲಿಯವರು ಪ್ರಸ್ತಾಪ ಮಾಡಿದ್ದಾರೆ. ನೀವು ಸುಪ್ರೀಂ ಕೋರ್ಟ್‌ನಲ್ಲಿ ವಿರೋಧ ಮಾಡಿದಿರಿ ಏನು? ನಾವು ಹೋಗಿದ್ದೆವು. ಯಾರು ಅಡ್ವೋಕೇಟ್ ಇದ್ದರು ಅವರನ್ನು ಮೀಟ್ ಮಾಡುವುದಕ್ಕೆ ಡೆಲ್ಲಿಗೆ ಹೋಗಿದ್ದೆವು. ಅವರು ಏನು ನಮ್ಮೆಲ್ಲರ ಎದುರುಗಡೆ ಹೇಳಿದರು, ಮುಖ್ಯಮಂತ್ರಿಗಳು ಇದ್ದರು, ನಾವು ಕೋರ್ಟ್ ಮುಂದೆ ಇದನ್ನು ವಿರೋಧ ಮಾಡಿದ್ದರೆ ಕಷ್ಟವಾಗುತ್ತಿತ್ತು. ಈಗಾಗಲೇ ನಾವು ಟ್ರಿಬ್ಯೂನಲ್ ಮುಂದೆ ಒಂದು ಹೆಜ್ಜೆ ಹೋಗಿ ಸಿಕ್ಕಿಹಾಕಿಕೊಂಡಿದ್ದೇವೆ. ಇಂಪ್ಲಿಮೆಂಟ್ ಮಾಡುವ ಸ್ಟೇಜ್‌ಗೆ ಬಂದಿದ್ದೇವೆ. ಸುಪ್ರೀಂ ಕೋರ್ಟ್ ಡೈರೆಕ್ಷನ್ ಇಂಪ್ಲಿಮೆಂಟ್ ಮಾಡಬೇಕೆಂದು ಇದೆ. ಸಮಯಕ್ಕೆ ಸರಿಯಾಗಿ ಸುಪ್ರೀಂ ಕೋರ್ಟ್‌ಗೆ ನಿಮ್ಮ ಅಫಿಡವಿಟ್ ಫೈಲ್ ಮಾಡದೆ ಸಿಕ್ಕಿಹಾಕಿಕೊಂಡು ನಮಗೆ ಛೀಮಾರಿ ಹಾಕಿರುವುದು ರೆಕಾರ್ಡ್‌ನಲ್ಲಿ ಇದೆ. ಇದೆಲ್ಲಾ ಇದ್ದಾಗ ನಿಮಗೆ ಕಾವೇರಿ ಟ್ರಿಬ್ಯೂನಲ್ ಮಧ್ಯಂತರ ಆದೇಶ 205 ಟಿ.ಎಂ.ಸಿ. ನೀರು ಬಿಡಬೇಕೆಂದು ಪ್ರಾಧಿಕಾರ ರಚನೆ ಮಾಡಿದಮೇಲೆ ಆದೇಶ ಬಂತಲ್ಲಾ ಸ್ವಾಮಿ, ಮಧ್ಯಂತರ ಆದೇಶ ಜಾರಿಗೆ ತರಬೇಕು. ಜಲಾಶಯದಲ್ಲಿ ನೀರು ಇರಲಿ, ಇಲ್ಲದೆ ಇರಲಿ ಅವರಿಗೆ ಕೊಡಬೇಕು. ಇಲ್ಲದೇ ಇದ್ದರೆ ಸುಪ್ರೀಂಕೋರ್ಟ್

ಮಧ್ಯಪ್ರವೇಶ ಮಾಡಿ 10 ಟಿ.ಎಂ.ಸಿ. ನೀರು ಬಿಡಲು ಆದೇಶ ನೀಡಿತು. ಇದೆಲ್ಲಾ ನಡೆಯಿತಲ್ಲಾ ಆ ಸಮಯದಲ್ಲಿ ಎಲ್ಲಿ ಹೋಗಿತ್ತು? ಈಗ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ನೀವು ಉಪದೇಶದ ಮಾತನ್ನು ಎಷ್ಟೇ ಹೇಳಿದರೂ ಸಹ ಒಂದಲ್ಲ ಒಂದು ಹೆಜ್ಜೆ ಮುಂದೆ ಇಡುತ್ತಾ, ನಮ್ಮ ರಾಜ್ಯದ ಹಿತವನ್ನು ಬದಿಗೊತ್ತಿ ಬಲಿ ಕೊಟ್ಟು ಈ ರಾಜ್ಯದ ಜನರನ್ನು ಬಲಿಪಶು ಮಾಡುವಂತಹ ಕೆಲಸವನ್ನು ಮಾಡಿದ್ದೀರಿ. ನಮ್ಮ ಕೈಯನ್ನು ಕಟ್ಟಿಸಿದ್ದೀರಿ. ನಾನು ಹೇಳುವುದು ಈ ಕಳಕಳಿ, ಯಾರು ಇದ್ದರೂ ಪರವಾಗಿಲ್ಲ, ಯಾರ ಬಗ್ಗೆ ಕಳಕಳಿ ಇತ್ತೋ, ಯಾರು ಈ ಟ್ರಿಬ್ಯೂನಲ್ ರಚನೆ ಮಾಡಿದ್ದನ್ನು ವಿರೋಧ ಮಾಡಿದರೋ, ಯಾರು ತಮಿಳುನಾಡಿನಲ್ಲಿ ಆ ಟ್ರಿಬ್ಯೂನಲ್ ಅನ್ನು ತೃಪ್ತಿಪಡಿಸಿ ಅವರ ಪರವಾಗಿ ತೀರ್ಮಾನ ಕೊಡುತ್ತಿದ್ದಾರೆ ಎಂದು ಹೇಳಿದರೋ ಅವರೇ ನಮ್ಮವರೇ ಪ್ರಧಾನಿಯಾಗಿದ್ದಂತಹ ಕಾಲದಲ್ಲಿ ಕೈಕಟ್ಟಿ ಕುಳಿತುಕೊಂಡಿರಿ. ಅವರ ಕಾಲದಲ್ಲಿ ಈ ಒಂದು ಪ್ರಾಧಿಕಾರ ರಚನೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರಿ. ಪ್ರಾಧಿಕಾರ ರಚನೆ ಬೇಡ, ಅದು ಬೇರೆ ರೂಪದಲ್ಲಿ ಇರಬೇಕೆಂದು ಹೇಳಿದಾಗ ಅದಕ್ಕೂ ಒಪ್ಪಿಕೊಳ್ಳುವುದು ಬೇಡ ಎಂದು ಹೇಳಿದರೂ ಕೂಡ ಅದು ಅನಿವಾರ್ಯವಾಗುತ್ತದೆ ಎಂದು ಹೇಳಿ ಎಲ್ಲಾ ಪಕ್ಷದ ಪ್ರಮುಖರ ಮೀಟಿಂಗ್ ಕರೆದು ಅದನ್ನು ಮಾಡಿ ಕಳುಹಿಸಿದಿರಿ. ಇವತ್ತು ಬಂದಿರತಕ್ಕ ಸರ್ಕಾರ ಬಹಳ ಸ್ಪಷ್ಟವಾಗಿ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಫ್ರೇಮ್ ಮಾಡುತ್ತೇವೆ, ಅದರ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಹೇಳಿದರೂ ಸಹ ಒಂದು ತಪ್ಪೂ ಮಾಡದೆ, ಅದರ ಬಗ್ಗೆ ಒಂದು ಹೆಜ್ಜೆ ಮುಂದೆ ಇದ್ದದೇ ಆದರೂ ಸಹ ಮಾನ್ಯ ವೀರಪ್ಪ ಮೊಯಿಲಿಯವರು ಹೇಳುತ್ತಿದ್ದಾರೆ. ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಫ್ರೇಮ್ ಮಾಡಬೇಕು.

4.20 ಪಿ.ಎಂ

ಆದರೆ ಇವರ ಬಗ್ಗೆ ಏನೂ ಮಾತನಾಡುತ್ತಾ ಇಲ್ಲ ಎಂದು. ಅವರ ಪರವಾಗಿ ಮಾತನಾಡಿದ್ದಾರೇನು ಅಥವಾ ಇನ್ನಾರ ಪರವಾಗಿಯೋ ಮಾತನಾಡುತ್ತಾರೇನು? ಇಲ್ಲಿ 95 ಕೋಟಿ ಜನರ ಮುಂದೆ ನಾವು ಏನು ಮಾಡುತ್ತೇವೆನ್ನುವ ಬಗ್ಗೆ ಬಹಳ ಸ್ಪಷ್ಟವಾಗಿ ಎಲ್ಲರ ಜೊತೆಯಲ್ಲಿ ಕುಳಿತು, ಯಾವ ಮೂಲಾಜಿಗೂ ಒಳಗಾಗದೇ ನಾವು ದೇಶದ ಜನರ ಮುಂದೆ ಮಾಡಿದ್ದೇವೆ. ಈಗ ಪ್ರಧಾನಮಂತ್ರಿಗಳಾದ ಶ್ರೀ ವಾಜಪೇಯಿಯವರ ಕೈ ಕಟ್ಟಿಸಿದ್ದೀರಿ. ತಾವು ಒಂದೊಂದೇ ಹೆಜ್ಜೆ ಮುಂದೆ ಹೋಗಿ ನಮ್ಮ ರಾಜ್ಯದ ಹಿತವನ್ನು ಬಲಿ ಕೊಟ್ಟು ಈಗಾಗಲೇ ಎಲ್ಲಕ್ಕೂ ಒಪ್ಪಿಕೊಂಡು ಬಂದಿದ್ದೀರಿ. ಈಗ ಯಾವುದೇ ಕಾರಣಕ್ಕೂ ಇದನ್ನು ಮಾಡಕೂಡದು ಎಂದು ಹೇಳುತ್ತಿದ್ದೀರಿ. ನಾವೆಲ್ಲರೂ ಒಟ್ಟಿಗೆ ಪ್ರಯತ್ನ ಮಾಡೋಣ. ಆದರೆ ಸುಪ್ರೀಂ ಕೋರ್ಟ್‌ನ ಮುಂದೆ , ಈ ಟ್ರಿಬ್ಯೂನಲ್ ಮುಂದೆ, ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಬಗ್ಗೆ ಚರ್ಚೆ ಮಾಡಲು ಹೋದಂತಹ ಸಂದರ್ಭದಲ್ಲಿ ಸನ್ಮಾನ್ಯ ವಾಟಾಳ್ ನಾಗರಾಜ್‌ರವರೇ ನಮ್ಮನ್ನು, ನಿಮ್ಮನ್ನು ಈ ಸರ್ಕಾರದವರು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೇನು? ನಮಗೆ ವಿಷಯವೇನಾದರೂ ಗೊತ್ತಾಗಿ ನೀವು ಅಲ್ಲಿ ಹೋಗಿ ಎಲ್ಲವನ್ನೂ ಒಪ್ಪಿಕೊಂಡು ಬಂದಿದ್ದೀರಿ. ನೀವು ಹಣಕಾಸಿನ ಸಚಿವರಾಗಿ, ಉಪ ಮುಖ್ಯಮಂತ್ರಿಗಳಾಗಿ ಇದರಲ್ಲಿ ತಪ್ಪು ಆಗಿದೆಯಲ್ಲಾ ಎಂದು ಹೇಳಿದಾಗ.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಸದನದಲ್ಲಿ ಮಾನ್ಯ ನೀರಾವರಿ ಸಚಿವರು ಏನು ಹೇಳಿದರೆಂದರೆ ವಿರೋಧಪಕ್ಷದವರನ್ನು ಇದುವರೆಗೂ ಕರೆಯುವಂತಹ ಅವಶ್ಯಕತೆ ಬಂದಿಲ್ಲವೆಂದರು. ನಿಮ್ಮನ್ನು ಕರೆಯುವಂತಹ ಕಾಲ ಬಂದಾಗ ಕರೆಯುತ್ತೇವೆಂದು ನನ್ನ ಆತ್ಮೀಯ ಸ್ನೇಹಿತರು ಆಗಿರುವಂತಹ ಮಾನ್ಯ ನೀರಾವರಿ ಸಚಿವರು ಹೇಳಿದರು. ಇದನ್ನು ಯಾವ ಸರ್ಕಾರದವರೂ, ಯಾವ ಮಂತ್ರಿಗಳೂ ಹೇಳಿರಲಿಲ್ಲ, ಇದನ್ನು ಅವರು ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾವು ಈಗ ಕಾವೇರಿ ಬೇಸಿನ್ ರೈತರ ಹತ್ತಿರ ಹೋಗಬೇಕಾಗಿದೆ. ಇಲ್ಲಿಯವರೇ ಪ್ರಧಾನಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಈ ರೀತಿಯ ಗೊಂದಲವನ್ನು ಉಂಟು ಮಾಡಿ ನಮ್ಮ ಕೈ ಕಟ್ಟುವಂತಹ ಕೆಲಸವನ್ನು ಮಾಡಿದ್ದಾರೆ. ಈಗಲೂ ಸಹ ಒಂದು ರೀತಿಯಲ್ಲಿ ಬೇರೆ ರಾಜ್ಯದವರನ್ನು ತೃಪ್ತಿ ಪಡಿಸುವುದಕ್ಕೆ, ಕುರ್ಚಿಯಲ್ಲಿ ನೀವೇ ಖಾಯಂ ಆಗಿ ಇರುತ್ತೇವೆಂದು ಅದನ್ನು ಉಳಿಸಿಕೊಳ್ಳುವಂಥಾದ್ದಕ್ಕೆ ಯಾವ ರೀತಿಯಾಗಿ ಮಹಾಪರಾಧವನ್ನು ಮಾಡಿದ್ದಾರೆಂಬುದನ್ನು ರಾಜ್ಯದ ಜನರ ಮುಂದೆ ಹೇಳಬೇಕಾಗಿದೆ. ಇವತ್ತು ಶ್ರೀ ಅಟಲ್ ಬಿಹಾರಿ ವಾಜಪೇಯಿಯವರಂತಹ ವ್ಯಕ್ತಿ ಇವತ್ತು ಪ್ರಧಾನಮಂತ್ರಿಗಳಾಗಿರುವಂತಹ ಕಾಲದಲ್ಲಿ ಯಾವುದೇ ಮುಲಾಜಿಗೆ ಒಳಗಾಗದೇ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಫ್ರೇಮ್ ಮಾಡುತ್ತೇವೆ. ಅದಕ್ಕೂ ಮುಂಚೆ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಮನವರಿಕೆ ಮಾಡಿದಾಗ ಅವರು ಸ್ಪಷ್ಟವಾಗಿ ಲಿಖಿತ ಮೂಲಕ ದೇಶದ ಜನತೆಯ ಮುಂದೆ ಇಟ್ಟಿದ್ದಾರೆ. ಇವರ ಕಾಲದಲ್ಲಿ ಅನ್ಯಾಯವಾಗುವುದಕ್ಕೆ ಸಾಧ್ಯವಿಲ್ಲ. ಆದರೆ ಏನು ತಪ್ಪುಗಳನ್ನು ಮಾಡಿದ್ದೇವೆ, ಯಾರು ಈ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೆ ಏನು ಮಾಡಿಕೊಂಡು ಬಂದಿದ್ದಾರೆ. ಇದರಿಂದ ಮಹಾಪರಾಧವಾಗಿದೆ ಎಂದು ಜನರ ಹತ್ತಿರ ಕ್ಷಮಾಪಣೆಯನ್ನು ಕೇಳಿ ಆ ತಪ್ಪು ಮಾಡಿದ್ದೇವೆ. ಅದನ್ನು ಸರಿ ಮಾಡಬೇಕೆಂದು ರಾಜ್ಯದ ಜನರ ಹಿತವನ್ನು ಉಳಿಸಬೇಕಾಗಿದೆ ಎಂದು ಪ್ರಧಾನಮಂತ್ರಿಯವರ ಹತ್ತಿರ ಮನವಿ ಮಾಡಿ, ಆಗಿರುವಂತಹ ತಪ್ಪನ್ನು ಸರಿಪಡಿಸಬೇಕು. ಈ ರಾಜ್ಯದ ಹಿತವನ್ನು ಕಾಪಾಡುವುದರ ಬಗ್ಗೆ ಮಾತನಾಡದೇ ಎಲ್ಲಾ ಅಪರಾಧಗಳನ್ನು ಮಾಡಿ, ಗೊಂದಲವನ್ನು ಮಾಡಿ ನೀವೇ ಉಪದೇಶ ಭಾಷಣ ಮಾಡುವಂಥಾದ್ದು ಆಶ್ಚರ್ಯವಾಗುತ್ತದೆ. ಮಾನ್ಯ ನಾಗೇಗೌಡರು ನೀರಾವರಿ ಸಚಿವರಾಗಿ ಅವರಿಗೆ ನೀರಾವರಿ ವಿಚಾರ ಸಾಕಷ್ಟು ಗೊತ್ತಿದೆ. ಮಾನ್ಯ ಹೆಚ್.ಎನ್. ನಂಜೇಗೌಡರು ಸಾಕಷ್ಟು ತಿಳಿದಿರುವಂಥವರು ಆತ್ಮೀಯ ಸ್ನೇಹಿತರು ಆಗಿದ್ದಾರೆ. ನೀವು ಅಲ್ಲಿಗೆ ಹೋಗುವುದಕ್ಕೆ ಮುಂಚೆ ಅವರನ್ನು ಕೇಳಬಹುದಾಗಿತ್ತು. ನೀವು ಇದನ್ನೆಲ್ಲಾ ಕೇಳಿಕೊಂಡೆ ಮಾಡುತ್ತೀರೇನು? ನೀವು ಮಿಟಿಂಗಿಗೆ ಹೋದಾಗ ಭಾಷಣ ಮಾಡುವುದು ಬೇರೆ, ರೆಕಾರ್ಡ್ ಆಗುವುದು ಬೇರೆ ಎಂದು ಗೊತ್ತಾಗಿರಬೇಕಾಗಿತ್ತು. ಅಲ್ಲಿ ನೀವು ಎಲ್ಲಾ ಒಪ್ಪಿಕೊಂಡು ಬಂದು ಈಗ ಕೈ ಕಟ್ಟಿಕೊಂಡು ಈಗ ಏನು ಹೇಳುತ್ತೀರಾ? ಇದು ಅಧಿಕಾರ ಇದೆಯೋ ಇಲ್ಲವೊ, ಮ್ಯಾನ್‌ಡೇಟರಿ ಹೌದೋ, ಅಲ್ಲವೋ ಇದೆಲ್ಲಾ ಚರ್ಚೆ ಮಾಡುವುದಕ್ಕೆ ಒಳ್ಳೆಯ ವಿಷಯವಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಭಾಷಣ ಮಾಡುವಾಗ ನಾನು ಹೇಳಿದೆ. ನಮ್ಮ ಯಾವುದೇ ಚರ್ಚೆ ಬೇರೆ ರಾಜ್ಯಗಳಿಗೆ

ಅನುಕೂಲಕಾರಿಯಾಗುವ ರೀತಿಯಲ್ಲಿ ಚರ್ಚೆಯಾಗಬೇಕೆಂದರೆ ಇದರ ಅರ್ಥವೆನೆಂದರೆ ಇದು ಒಂದು ರೆಕಮೆಂಡರಿ ಬಾಡಿ ಇದಕ್ಕೆ ಲೀಗಲ್ ಫೋರ್ಸ್ ಇಲ್ಲವೆನ್ನತಕ್ಕಂಥಾದ್ದು ಅವರಿಗೆ ಗೊತ್ತಿದೆ. ಮುಂದಿನ ಮೀಟಿಂಗ್‌ನಲ್ಲಿ ಆಕ್ಷನ್ ಟೇಕನ್ ಆನ್ ದಿ ರೆಕಮೆಂಡೇಷನ್ ಬಗ್ಗೆ ಬರುತ್ತದೆ. ಅದು ಆದನಂತರ ಪಾರ್ಲಿಮೆಂಟಿಗೆ ಹೋಗುತ್ತದೆ.

This Act has to be amended in the parliament and passed in the parliament.

ಬೇಕಾದಷ್ಟು ಲೀಗಲ್ ಫೋರ್ಸ್‌ಗಳು ಇದರ ಹಿಂದೆ ಇದೆ. ಈಗ ಅವರು ಏನು ಮಾಡಿದ್ದಾರೆ. ಅದನ್ನು ನಾವು ಒಪ್ಪಿಲ್ಲವೆನ್ನುವಂಥಾದ್ದನ್ನು ಹೇಳಿದ್ದೇವೆ. ನನಗೆ ಇಂಟರ್ ಸ್ಟೇಟ್ ಕೌನ್ಸಿಲ್ ಮೀಟಿಂಗ್ ಯಾವ ರೀತಿ ನಡೆಯುವುದೆಂದು ಗೊತ್ತಿಲ್ಲ, ಅದಕ್ಕೆ ನಾನು ಹೋಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು ಹೋಗಿ ಬಂದಿದ್ದಾರೆ, ಮಾನ್ಯ ಯಡಿಯೂರಪ್ಪನವರು ಹೋಗಿಲ್ಲ. ಅವರು ತಿಳಿದುಕೊಂಡ ಪ್ರಕಾರ "ಅಗ್ರೀಡ್ ಎನ್ನುವಂತಹ ಪದಕ್ಕೆ we have not given consent as it will go against the State's interest government's interest. ನೀವು ವಿರೋಧ ಪಕ್ಷದ ನಾಯಕರು ಈ ರಾಜ್ಯದ ಹಿತವನ್ನು ಕಾಪಾಡಬೇಕೆನ್ನುವವರು ನೀವು "ಅಗ್ರೀಡ್" ಎನ್ನುವ ಪದಕ್ಕೆ ಒಪ್ಪಿದ್ದೀರಿ ಎಂದು ಹೇಳುತ್ತಿದ್ದೀರಿ. ನಾವು ನಮ್ಮ ರಾಜ್ಯದ ಹಿತಾಸಕ್ತಿಗೆ ಧಕ್ಕೆ ಬರುತ್ತದೆಂದು ಇಲ್ಲವೆಂದು ಹೇಳುತ್ತಿದ್ದೇವೆ, ನಾವು ಇದಕ್ಕೆ ಒಪ್ಪಿಲ್ಲ. ನೀವು ಈ ರೀತಿಯಾಗಿ ಪ್ರೊಸೀಡಿಂಗ್‌ನಲ್ಲಿ ಇದೆಯೆಂದು ಆ ರೀತಿಯಾಗಿ ಹೇಳಿಬಿಟ್ಟರೆ ಹೇಗೆ? It is a recorded proceeding.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ನಾನು ಒಂದೇ ಸಲ ಇಂಟರ್ ಸ್ಟೇಟ್ ಕೌನ್ಸಿಲ್ ಮೀಟಿಂಗ್‌ಗೆ ಅಟೆಂಡ್ ಮಾಡಿದ್ದುದು. ಅವರು ನಮ್ಮ ಎದುರಿನಲ್ಲೇ ಪ್ರೊಸೀಡಿಂಗ್ ರೆಕಾರ್ಡ್ ಮಾಡುವುದು. ಅಲ್ಲಿ ಗೃಹ ಸಚಿವರು ಮತ್ತು ಪ್ರಧಾನಮಂತ್ರಿಯವರು ಇರುತ್ತಾರೆ. ಎಲ್ಲಾ ಸ್ಟೇಟ್‌ನವರು ಅವರವರ ಭಾಷಣವನ್ನು ಮಾಡುತ್ತಾರೆ, ಅದಾದಮೇಲೆ ರೆಕಾರ್ಡ್ ಮಾಡುತ್ತಾರೆ. ಅದನ್ನು ರೆಕಾರ್ಡ್ ಮಾಡಿ ಎಲ್ಲಾ ಸ್ಟೇಟ್‌ಗೆ ಕಳುಹಿಸಿಕೊಡುತ್ತಾರೆ. ಈ ಪ್ರೊಸೀಡಿಂಗ್ಸ್ ನಮಗೆ ಬಂದ ತಕ್ಷಣ ಅದರ ಪ್ರೊಟೆಸ್ಟ್ ಲೆಟರ್ ಕಾಪಿಯನ್ನು ಈಗಾಗಲೇ ಅವರಿಗೆ ಕಳುಹಿಸಿ ಕೊಟ್ಟಿದ್ದೇವೆ. ಅವರಿಗೆ ನಾವು ನೀವು "ಅಗ್ರೀಡ್" ಎಂದು ಬರೆದುಕೊಂಡಿದ್ದೀರಿ, ನಾವು ಎಲ್ಲೂ ಕೂಡ ಇದಕ್ಕೆ ಒಪ್ಪಿಕೊಂಡಿಲ್ಲವೆನ್ನುವಂಥಾದ್ದನ್ನು ನಾವು ಕಳುಹಿಸಿಕೊಟ್ಟಿದ್ದೇವೆ. ನಾವು ಮಾಡಿದ ಭಾಷಣ ಏನು ಇದೆ, ಅದನ್ನು ಬಿಟ್ಟು ನಿಮ್ಮ ವಿಚಾರಗಳು ಯಾವುದಿದೆ ಅದನ್ನು ನಾವು ಒಪ್ಪಿಗೆ ಕೊಟ್ಟಿಲ್ಲವೆಂದು ಹೇಳುತ್ತಿದ್ದೇವೆ. ನೀವು ಪದೇ ಪದೇ ಒಪ್ಪಿಕೊಂಡಿದ್ದೀರಿ, ಒಪ್ಪಿಕೊಂಡಿದ್ದೀರಿ, ಎಂದು ಹೇಳುತ್ತಿದ್ದೀರಿ. ನಾವು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇವೆ, ಇದಕ್ಕೆ ನಾವು ಒಪ್ಪಿಕೊಂಡಿಲ್ಲ. ಈಗಾಗಲೇ ನಾವು ಹೋಮ್ ಮಿನಿಸ್ಟರ್‌ರವರಿಗೆ ಕಾಗದ ಬರೆದಿದ್ದೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ಮತ್ತೆ ಅವರು ಹೇಗೆ ಬರೆದುಕೊಂಡು ಬಿಟ್ಟರು? ಇದರಲ್ಲಿ ಏನು ಹೇಳುತ್ತಾರೆ. The consensus proposed by the standing Committee in respect of each recommendation was endorsed by the Members of the interstate council except in respect of recommendation. No. 212.

SRI SIDDARAMAIAH : That is why we are questioning it.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಎರಡು ನಿಮಿಷ ಅವಕಾಶ ಕೊಡಿ, ತಾವು ನನಗೆ ಇಷ್ಟು ಮಾತ್ರ ಹೇಳಿ. ದಿನಾಂಕ : 28-11-1997 ರಂದು ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ಆಗಿರುವಂತಹ ತೀರ್ಮಾನವಾಗಿದೆ. ಈ ಕಾಪಿ ನಿಮಗೆ ಯಾವ ದಿನಾಂಕದಂದು ಕೈಸೇರಿದೆ?

ಶ್ರೀ ಸಿದ್ದರಾಮಯ್ಯ : ದಿನಾಂಕ 7-4-1998ರಂದು ನಮ್ಮ ಕೈಗೆ ಈ ಪ್ರತಿ ಬಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಇದಕ್ಕಾಗಿಯೇ ದೆಹಲಿಯಲ್ಲಿ ಕಮೀಷನರ್, ಅಡ್ವೊಕೇಟ್‌ಗಳನ್ನು ಇಟ್ಟಿದ್ದೀರಲ್ಲಾ, ಅವರು ದಿ:28-11-98ರಂದು ಆದಂತಹ ರೆಕಾರ್ಡ್ ಏನಾಗಿದೆ, ಎನ್ನುವಂಥಾದ್ದನ್ನು ಅವರಿಗೆ ನೋಡುವುದಕ್ಕಾಗಲಿಲ್ಲವೇ? ಲಕ್ಷಾಂತರ ರೂಪಾಯಿಗಳನ್ನು ಕೊಡುವಂತಹ ಕೌನ್ಸಿಲ್‌ನಲ್ಲಿ ಇದನ್ನು ನೋಡುವುದಕ್ಕೆ ಆಗಲಿಲ್ಲವೇ? ಇದು ನಿಮ್ಮ ನೆಗ್ಲಿಜೆನ್ಸಿಯಿಂದಾಗಿದೆ. ಇದಕ್ಕೆ ನೀವು ಗಮನ ಕೊಡದೆ ಇರುವಂಥಾದ್ದು ಎಷ್ಟರಮಟ್ಟಿಗೆ ನ್ಯಾಯವಿದೆ? ರಾಜಕೀಯ ಗೊಂದಲದಲ್ಲಿ ಸಿಕ್ಕಿಕೊಂಡು ರಾಜ್ಯದ ಹಿತವನ್ನು ಮರೆತಿದ್ದೀರಿ.

ಶ್ರೀ ಕೆ.ಎನ್. ನಾಗೇಗೌಡ : ನೀವು ಚೆನ್ನಾಗಿ ಮಾತನಾಡುತ್ತಾ ಇರುತ್ತೀರಿ. ಒಂದೊಂದು ಸಲ ಶ್ರೀ ವಾಜಪೇಯಿಯವರು ನಿಮಗೆ ಜ್ಞಾಪಕಕ್ಕೆ ಬರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಿಮ್ಮ ಜೊತೆಗೆ ನಾನು ಇದ್ದೇನೆ. ಆದರೆ ನನಗೆ ಏನು ಡೌಟ್ ಎಂದರೆ ಮಾನ್ಯ ನಾಗೇಗೌಡರು ಮೀಟಿಂಗ್‌ಗೆ ಹೋಗಲಿಲ್ಲವೆಂದು ಹೇಳಿದ್ದಾರೆ. ಇವರಿಗೆ ಇದಕ್ಕಿಂತ ಘನಂದಾರಿ ಕೆಲಸ ಏನು ಇತ್ತು? ನೀವು ಒಬ್ಬ ನೀರಾವರಿ ಸಚಿವರಾಗಿ ಜವಾಬ್ದಾರಿ ವ್ಯಕ್ತಿಯಾಗಿ ಮೀಟಿಂಗ್‌ಗೆ ಹೋಗಿಲ್ಲ. ನಾನು ಉಪ ಮುಖ್ಯಮಂತ್ರಿಯವರನ್ನು ಕಳುಹಿಸಿದ್ದೇನೆ, ಇನ್ನೊಬ್ಬರನ್ನು ಕಳುಹಿಸಿದ್ದೇನೆಂದರೆ ನಿಮಗೆ ಇದಕ್ಕಿಂತ ಬೆಟರ್ ಬಿಸಿನೆಸ್ ಏನು ಇತ್ತು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಂಟರ್ ಸ್ಟೇಟ್ ಕೌನ್ಸಿಲ್ ಮೀಟಿಂಗ್‌ಗೆ ಯಾರು ಎಂದರೆ ಅವರು ಹೋಗಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನಿಮಗೆ ಎಷ್ಟು ಕಳಕಳಿ ಇದೆಯೋ, ಅದಕ್ಕಿಂತ ಹತ್ತರಷ್ಟು ಕಳಕಳಿ ನಮಗೆ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ತುಂಬಾ ಸಂತೋಷ, ಅದಕ್ಕೆ ಈ ಸ್ಥಿತಿ ಬಂದಿರುವುದು.

ಶ್ರೀ ಸಿದ್ದರಾಮಯ್ಯ : ಏನು ಸ್ಥಿತಿ ಬಂದಿದೆ? ನಾನೂ ಕೂಡ ಜವಾಬ್ದಾರಿಯಿಂದಲೇ ಹೋಗಿರುವುದು. ಈ ರಾಜ್ಯದ ಮಂತ್ರಿಯಾಗಿ ನಾನೂ ಕೂಡ ಸಮರ್ಥವಾಗಿ ಸ್ಪಂದಿಸಿದ್ದೇನೆ. ನಾನು ಮಾಡಿರುವಂತಹ ಭಾಷಣವನ್ನು ನಾವು ಏನು ಬರೆದಿದ್ದೇವೆಂಬುದನ್ನ ತಾವು ಓದಬೇಕು. ನಾವು ಏನು ಭಾಷಣ ಮಾಡಿದ್ದೇವೆ, ಅದೇ ನಮ್ಮ ಸ್ಟ್ಯಾಂಡ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವುದೇನೆಂದರೆ ಆ ಕೌನ್ಸಿಲಿಗೆ ಹೋಗುವಂತಹ ಅಧಿಕಾರ ಇದೆಯೋ ಇಲ್ಲವೋ ಅದು ಬೇರೆ. ನಾನು ಕೇಳುವಂಥಾದ್ದು,

ತಾವು ಈ ಮೀಟಿಂಗ್‌ಗೆ ಹೋಗುವುದಕ್ಕೆ ಮುಂಚೆ ಒಬ್ಬ ನೀರಾವರಿ ಸಚಿವರಾಗಿ ದೆಹಲಿಯಲ್ಲಿ ಕುಳಿತು ನಿಮ್ಮ ಅಡ್ವೋಕೇಟ್‌ಗಳನ್ನು ಕನ್ಸಲ್ಟ್ ಮಾಡಿ ಆ ಪ್ರೊಸೀಡಿಂಗ್ಸ್ ಸಿಸ್ಟಂ ಏನು, ನಾವು ಎಲ್ಲಿ ಸಿಕ್ಕಿಕೊಳ್ಳಬಹುದು. ಇದನ್ನು ತಾವು ಕೇಳಿಕೊಳ್ಳಬೇಕಾಗಿತ್ತು, ಏಕೆಂದರೆ ಮೊದಲಿನಿಂದಲೂ ಎಡವಿಕೊಂಡು ಬಂದಿದ್ದೀರಲ್ಲಾ, ಏನು ಮಾಡಬೇಕೆಂಬ ಚಿಂತನೆ ನಿಮಗೆ ಇತ್ತಾ? ನೀವು ದಿನಾಂಕ : 7-4-98ರಂದು ಇಷ್ಯೂ ಮಾಡಿದ್ದೀರಿ, ತಾವು ಏನು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೀರಾ ಮತ್ತು ಸಂಬಂಧಪಟ್ಟ ಸಮಿತಿಯವರಿಗೆ ಏನು ಪತ್ರ ಬರೆದಿದ್ದೀರಾ, ಯಾವ ದಿನಾಂಕದಲ್ಲಿ ಪತ್ರವನ್ನು ಕಳುಹಿಸಿದ್ದೀರಿ ಎಂಬುದನ್ನು ಕೊಡಿ. ಯಾವ ದಿನಾಂಕದಲ್ಲಿ ಕಳುಹಿಸಿಕೊಟ್ಟಿರಿ, ಏಕೆಂದರೆ ಅದನ್ನು ಈಗೇನಾದರೂ ಬರೆದಿಟ್ಟುಕೊಂಡಿದ್ದೀರೋ, ಮುಂಚೆಯೇ ಕಳುಹಿಸಿದ್ದೀರೋ, ಅದು ಅವರಿಗೆ ತಲುಪಿದೆಯೊ, ನಿಮ್ಮ ಅಧಿಕಾರಿಗಳು, ಅಡ್ವೋಕೇಟ್ ಏನಾದರೂ ಫಾಲೊ ಅಪ್ ಮಾಡಿದ್ದಾರೆಯೇ? ಆ ಪ್ರತಿಗಳನ್ನು ತಾವು ಕೊಡಬೇಕಲ್ಲಾ? ಒಂದು ಏನಾಗಿದೆ ಎಂದರೆ, ಸನ್ಮಾನ್ಯ ಉಪಮುಖ್ಯಮಂತ್ರಿಗಳು, ನೀರಾವರಿ ಮಂತ್ರಿಗಳು ಹೇಳುತ್ತಾರೆ ಎಂದರೆ, ನಾಗರಾಜ್‌ರವರೇ, ಅಂಥ ಪ್ರಾಣ ಹೋಗುವ ಸ್ಥಿತಿಯೇನೂ ಬಂದಿಲ್ಲ, ನಿಮ್ಮನ್ನು ಕರೆದು ಸಂಪರ್ಕಿಸುವ ಅಗತ್ಯವೂ ಇಲ್ಲ ನಾವು ಸರಿ ಇದ್ದೇವೆಂದು ನೀವು ಹೇಳುತ್ತೀರಿ. ಹಾಗಿದ್ದರೆ, ಯಡಿಯೂರಪ್ಪನವರೇ ನಮ್ಮ ಜವಾಬ್ದಾರಿ, ಏನೂ ಅನಾಹುತವಾಗದಂತೆ ನೋಡಿಕೊಳ್ಳುತ್ತೇವೆ ನೀವು ಪ್ರತಿಪಕ್ಷದಲ್ಲಿ ಆನಂದವಾಗಿರಿ ಎಂದರೆ ನಾವು ಮಾತನಾಡುವುದಿಲ್ಲ, ಆಮೇಲೆ ಏನು ಬೇಕಾದರೂ ಮಾಡೋಣ.

ಶ್ರೀ ಸಿದ್ದರಾಮಯ್ಯ : ಕಾವೇರಿ ಬಗ್ಗೆ ಸುಮ್ಮನೆ ಈ ರೀತಿ ಚರ್ಚೆ ಮಾಡಿ ರಾಜಕೀಯ ಮಾಡುವುದು ಬೇಡ....

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡಿದ್ದರಲ್ಲಿ, ಇವತ್ತು ಇದ್ದಂಥ ಕಳಕಳಿ, ಈ ಮಾತು ಅವತ್ತು ಎಲ್ಲಿ ಹೋಗಿತ್ತು?

ಶ್ರೀ ಸಿದ್ದರಾಮಯ್ಯ : ಯಾರು ಸಂಶಯಪಡಬೇಕಾದ ಅಗತ್ಯವಿಲ್ಲ, ನಾವು ನಮ್ಮ ನಿಲುವೇನು ಎನ್ನುವುದನ್ನು ನಮ್ಮ ರಾಜ್ಯದ ಪರವಾಗಿ ಸ್ಪಷ್ಟಪಡಿಸಿದ್ದೇವೆಂದು ಪದೇ ಪದೇ ವಿವರಣೆಯನ್ನು ಕೊಟ್ಟಿದ್ದೇವೆ. ಅವರು ಪ್ರೊಸೀಡಿಂಗ್ಸ್ ಡ್ರಾಫ್ಟ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ನಮ್ಮ ನಿಲುವಿಗೆ ವಿರುದ್ಧವಾಗಿರುವ ವಿಚಾರಗಳನ್ನು ನಮ್ಮ ನಿಲುವು ಬೇರೆ, ಬೇರೆ, ರೀತಿಯಾಗಿ ರೆಕಾರ್ಡ್ ಆಗಿದೆ ಎಂದು ಇದು ನಮ್ಮ ನಿಲುವುಗಳಲ್ಲ ನಾವು ಈಗಾಗಲೇ ಅವರಿಗೆ ಹೇಳಿ ಸ್ಪಷ್ಟಪಡಿಸಿದ್ದೇವೆ. ಅದಕ್ಕೋಸ್ಕರ ಕನ್‌ಫರ್ಮೇಷನ್ ಆಗುವಾಗ, ಮತ್ತೆ ಸಭೆ ಕರೆದಾಗ ನಾವು ನಮ್ಮ ಸ್ಟ್ರಾಂಗ್ ಪ್ರೊಟೆಸ್ಟ್ ಏನಿದೆ, ಮತ್ತೆ ನಮ್ಮ ನಿಲುವುಗಳೇನಿದ್ದಾವೆ ಇದನ್ನು ಪುನಃ ಬಹಳ ಸ್ಪಷ್ಟವಾಗಿ ಹೇಳುತ್ತೇವೆ ಹಾಗೂ ಇದು ತಿದ್ದುಪಡಿಯಾಗಬೇಕೆನ್ನುವ ಒತ್ತಾಯವನ್ನು ಅಲ್ಲಿ ಸ್ಪಷ್ಟವಾಗಿ ಮಾಡುತ್ತೇವೆ. ಇದನ್ನು ನಾವು ಹೇಳಿದರೂ ಕೂಡ, ನೀವು ಒಪ್ಪಿಕೊಂಡಿದ್ದೀರಿ, ಎಂದು ಹೇಳುವುದರಿಂದ ಏನಾಗುತ್ತದೆಂದರೆ, ನಮ್ಮ ಮೇಲೆ ಇವರು ರಾಜಕೀಯವಾಗಿ ಮಾತನಾಡುವುದಕ್ಕೆ ಹೋಗಿ ಅದರಿಂದ ನಮಗೆ, ಈ ರಾಜ್ಯಕ್ಕೆ, ಈ ರಾಜ್ಯದ ಜನತೆಗೆ ತೊಂದರೆಯಾಗಬಾರದು....

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದನ್ನು ನಾನು ಸ್ಪಷ್ಟ ಮಾಡುತ್ತೇನೆ. ಇವತ್ತು ಸಾಯಂಕಾಲ ಅಥವಾ ನಾಳೆ ನಿಮ್ಮ ಅಡ್ವೋಕೇಟ್, ಎಕ್ಸ್‌ಪರ್ಟ್ಸ್‌ಗಳನ್ನು ಕರೆಯಿಸಿ, ಇಲ್ಲಿ ಒಪ್ಪಿಗೆ ಕೊಟ್ಟಿರುವ ಪತ್ರದಲ್ಲಿರುವ ಬರಹಕ್ಕೆ ಏನು ಅರ್ಥ ಬರುತ್ತದೆ, ನೀವೇನಾದರೂ ಇವತ್ತು ಅಲ್ಲಿ ಅಷ್ಟು ಜನರಿರುವಂಥ ಒಂದು ಸಮಿತಿಯಲ್ಲಿ ಒಪ್ಪಿಕೊಂಡು ಬಂದು ಇವತ್ತು ಅದು ನಮಗೆ ಒಪ್ಪಿಗೆ ಇಲ್ಲವೆಂದು ಬರೆದು ಕಳುಹಿಸಿದರೆ ಎಷ್ಟು ಪರಿಣಾಮವಾಗಬಹುದು, ಇದನ್ನೆಲ್ಲಾ ಚರ್ಚೆ ಮಾಡಿ. ನಾನು ನಿಮ್ಮ ಮೇಲೆ ಗೂಬೆ ಕೂರಿಸುತ್ತಿಲ್ಲ, ದಾಖಲೆಗಳೇನಿದ್ದಾವೆ ಅದರ ಆಧಾರದ ಮೇಲೆ ಹೇಳುತ್ತಿದ್ದೇವೆ. ನಾಗೇಗೌಡರೇ ಅದಕ್ಕೋಸ್ಕರ ರಾಜ್ಯದ ಜನ ನಿಮಗೆ ಶಾಪ ಹಾಕಬಾರದೆನ್ನುವುದಿದ್ದರೆ....

ಶ್ರೀ ಕೆ.ಎನ್. ನಾಗೇಗೌಡ : ಎಲ್ಲೂ ಇಲ್ಲದೆ ನೀವು ಮಂಡ್ಯವನ್ನು ಆಯ್ಕೆ ಮಾಡಿಕೊಂಡು ಹೋಗಿ ಕಾವೇರಿಯ ಬಗ್ಗೆ ಭಾಷಣ ಮಾಡಿದ್ದೀರಿ?

ಶ್ರೀ ಬಿ.ಎಸ್ ಯಡಿಯೂರಪ್ಪ : ಉಳಿದ ಕಡೆಯೆಲ್ಲಾ ನೆಗೆದು ಬಿದ್ದು ಹೋದಿರಿ, ಮಂಡ್ಯ ಉದಾಹರಣೆಯನ್ನು ಹೇಳುತ್ತೀರಿ, ಅಲ್ಲಿ ಓಟು ಕೊಟ್ಟಿದ್ದು ನಿಮಗಲ್ಲ, ಚಲನಚಿತ್ರ ನಟನಿಗೆ ಕೊಟ್ಟಿದ್ದು, ನೀವು ಅನ್ಯಾಯ ಮಾಡಿದ್ದಕ್ಕೆ ಓಟು ಕೊಟ್ಟರಾ?

ಶ್ರೀ ಕೆ.ಎನ್. ನಾಗೇಗೌಡ : ಚಕ್ರಕ್ಕೆ ಓಟು ಕೊಟ್ಟರು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇಷ್ಟೇ ಹೇಳುತ್ತೇನೆ, ದಯಮಾಡಿ ಆಗಿರುವ ತಪ್ಪನ್ನು ಒಪ್ಪಿಕೊಳ್ಳಿ, ನೀವೇ ಅಧಿಕಾರದಲ್ಲಿ ಮುಂದುವರೆಯುತ್ತೇವೆನ್ನುವ ಭ್ರಮೆಯಲ್ಲಿ ದಿನಾಂಕ 28-11-1997, ಅವರ ಆಶೀರ್ವಾದಬೇಕೆಂದು ಹೇಳಿ ರಾಜ್ಯದ ಹಿತವನ್ನು ಸಂಪೂರ್ಣವಾಗಿ ಬಲಿ ಕೊಟ್ಟಿದ್ದೀರಿ ಎನ್ನುವುದನ್ನು ಸಂಪೂರ್ಣವಾಗಿ ಒಪ್ಪಿಕೊಂಡು ದಯಮಾಡಿ ನಾಳೆಯೋ ನಾಡಿದ್ದೋ ಸರ್ವಪಕ್ಷಗಳ ಸಭೆಯನ್ನು ಕರೆದು ಇದೇನು ಅರ್ಥ ಕೊಡುತ್ತದೆ, ನಮ್ಮ ಜನರ ಹಿತವನ್ನು ಕಾಪಾಡುವುದಕ್ಕೋಸ್ಕರ ಆಗಿರುವ ತಪ್ಪನ್ನು ಸರಿಪಡಿಸುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಪತ್ರ ಬರೆದು ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳದೆ ಜವಾಬ್ದಾರಿಯಲ್ಲಿರುವ ನೀರಾವರಿ ಸಚಿವರ್‍ಯಾರದರೂ ದೆಹಲಿಗೆ ಹೋಗಿ ಯಾರನ್ನು ಕಂಡು ಇದನ್ನು ಸರಿಪಡಿಸುವುದಕ್ಕೆ ಏನು ಮಾಡಬಹುದು ಎನ್ನುವುದನ್ನು ಮಾಡಿ. ಈ ತಜ್ಞರು ಏನು ಅಭಿಪ್ರಾಯ ಕೊಡುತ್ತಾರೆನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಸಭೆಯನ್ನು ಕರೆಯಿರಿ. ಇವತ್ತು ನಿಮಗಂತೂ ರಾಜ್ಯದ ಹಿತವನ್ನು ಕಾಪಾಡುವುದಕ್ಕಾಗಲಿಲ್ಲ ನಾವು ನಿಮಗೆ ಸಹಕಾರ ಕೊಡುವುದಕ್ಕೆ ಸಿದ್ದರಿದ್ದೇವೆ, ಈ ರಾಜಕಾರಣ ಮಾಡುವುದಕ್ಕೆ ಸಿದ್ದರಿಲ್ಲ, ರಾಜ್ಯದ ರೈತರ ಹಿತದೃಷ್ಟಿಯಿಂದ ಎಲ್ಲಾ ರೀತಿಯ ಸಹಕಾರ ಕೊಡುವುದಕ್ಕೆ ನಾವು ಸಿದ್ದರಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್(ಗ್ರಾಮೀಣಾಭಿವೃದ್ಧಿ ಸಚಿವರು) : ಯಡಿಯೂರಪ್ಪನವರೆ, ನಮಗೆ ಹಿಂದೆ ಯಾವ ಸಂದಿಗ್ಧಗಳಿದ್ದವೋ ಅದೇ ರೀತಿಯ ಸಂದಿಗ್ಧತೆಗಳು ಬರುತ್ತವೆ, ದಯಮಾಡಿ ಅಷ್ಟು ಸರಳವಾಗಿ ಮಾತನಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿರಿಯ ಸಚಿವರಾದ ಸನ್ಮಾನ್ಯ ಶ್ರೀ ಎಂ. ಪಿ. ಪ್ರಕಾಶ್‌ರವರಿಗೆ ಹೇಳುತ್ತೇನೆ, ನಾವು ನಿಶ್ಚಿತವಾಗಿ ನಾವು ಸಂದಿಗ್ಧದಲ್ಲಿದ್ದೇವೆ, ಇದರಲ್ಲಿ ಏನು ಅನುಮಾನವೇ ಇಲ್ಲ. ಬಹುಮತವಿಲ್ಲದೆ ಬೇರೆ ಎಲ್ಲರ ಸಹಕಾರದೊಡನೆ ಒಂದು ಸರ್ಕಾರವನ್ನು ನಡೆಸಿದಾಗ ನೀವೇನು ಇಕ್ಕಟ್ಟಿಗೆ ಸಿಕ್ಕಿಕೊಂಡಿದ್ದಿರಿ ಅದಕ್ಕಿಂತ ಹೆಚ್ಚಿನ ಇಕ್ಕಟ್ಟುಗಳಿದ್ದಾವೆ. ಅದರ ಬಗ್ಗೆ ಎರಡನೆ ಮಾತಿಲ್ಲ. ನಿಮಗೂ ನಮಗೂ ಇರುವ ವ್ಯತ್ಯಾಸವೇನೆಂದರೆ, ನೀವು ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ಎಲ್ಲಾ ರೀತಿಯ ಕಾಂಪ್ರಮೈಸ್ ಮಾಡಿಕೊಂಡಿರಿ, ಒಂದು ಕ್ಷಣ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ರಾಜ್ಯದ ಹಿತಕ್ಕೆ ಧಕ್ಕೆ ಬರುವಂಥ ಕೆಲಸವನ್ನು ನಾವು ಮಾಡುವುದಿಲ್ಲ. ನಿಮ್ಮ ಸರ್ಕಾರಕ್ಕೂ, ನಮ್ಮ ಸರ್ಕಾರಕ್ಕೂ ಇರುವ ವ್ಯತ್ಯಾಸವಿಷ್ಟೆ.

ಶ್ರೀ ಸಿದ್ಧರಾಮಯ್ಯ : ಇಡೀ ದೇಶದ ಜನತೆಗೆ, ನೀವು ಕುರ್ಚಿ ಉಳಿಸಿಕೊಳ್ಳುವುದಕ್ಕೆ ಉತ್ತರ ಪ್ರದೇಶದಲ್ಲಿ ಏನೇನು ಮಾಡಿದ್ದೀರೆನ್ನುವುದು ಗೊತ್ತಿಲ್ಲವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ : ದೇಶದಲ್ಲಿ ಸಂಪೂರ್ಣವಾಗಿ ನೆಲಸಮವಾಗಿರುವ ನಿಮಗೆ ಏತಕ್ಕೆ ನಾನು ಉತ್ತರ ಕೊಡಲಿ?

ಶ್ರೀ ಸಿದ್ದರಾಮಯ್ಯ : ಭಾರತೀಯ ಜನತಾಪಕ್ಷದವರು ಗಾಳಿಗೆತೂರಿಬಿಟ್ಟು ಬಹಳ ದಿವಸವಾಯಿತು, ಈಗ ಯಾವ ನೀತಿ, ತತ್ವ ಹೇಳುವುದಕ್ಕೆ ಹೋಗುತ್ತೀರಿ? ಜನರೆಲ್ಲಾ ನೋಡುತ್ತಿದ್ದಾರೆ, ಯಾವಾಗ ಎಲ್ಲವನ್ನು ತೆಗೆದಿಟ್ಟು ಬಿಟ್ಟು ನೀವು ಎಲ್ಲರ ಜೊತೆ ಸೇರಿಕೊಂಡು ಮಾಡುವುದಕ್ಕೆ ಹೋಗಿರುವುದು ಎಲ್ಲಾ ಈಗ ಗೊತ್ತಾಗಿದೆ. 13 ದಿವಸ ಅಧಿಕಾರದಲ್ಲಿರುವುದಕೋಸ್ಕರ ಕುರ್ಚಿಯಲ್ಲಿ ಕುಳಿತುಕೊಂಡಿರಿ ನೀವು ನೀತಿ ಹೇಳುವುದಕ್ಕೆ ಹೋಗುತ್ತೀರಿ.

ಮಾನ್ಯ ಸದಸ್ಯರು : ಗುಜರಾತಿನಲ್ಲಿ ಏನು ಮಾಡಿಸಿದಿರೆನ್ನುವುದು ಎಲ್ಲರಿಗೂ ಗೊತ್ತಿರುವುದೇ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಎಲ್ಲಾ ತೆಗೆದು ಇಟ್ಟುಬಿಟ್ಟರೆಂದು ಹೇಳಿದಿರಿ, ಏನೇನು ತೆಗೆದು ಇಟ್ಟುಬಿಟ್ಟರು?

ಶ್ರೀ ಸಿದ್ದರಾಮಯ್ಯ : ಸರ್ಕಾರಕ್ಕೋಸ್ಕರ ರಾಮಮಂದಿರ ಕಟ್ಟುವುದಿಲ್ಲ, ಅವರು ಭರವಸೆಯನ್ನು ಕೊಟ್ಟರು, ಅದನ್ನು ತೆಗೆದಿಟ್ಟರು.

ಶ್ರೀ ವಾಟಾಳ್ ನಾಗರಾಜ್ : ಅಂದರೆ, ಸಿದ್ದರಾಮಯ್ಯನವರೇ, ಕಾವಿ ಕಮಂಡಲವನ್ನೆಲ್ಲಾ ತೆಗೆದಿಟ್ಟರು ಎಂದು ನಿಮ್ಮ ಅರ್ಥ?

ಶ್ರೀ ಸಿದ್ದರಾಮಯ್ಯ : ತೆಗೆದು ಇಟ್ಟಿಲ್ಲ, ಸ್ವಲ್ಪ ಸರಿಸಿದ್ದಾರೆ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಸಿದ್ದರಾಮಯ್ಯನವರು ಹಿರಿಯರಿದ್ದಾರೆ, ಬಹಳ ದೊಡ್ಡ ಸ್ಥಾನದಲ್ಲಿ ಉಪ ಮುಖ್ಯಮಂತ್ರಿಗಳಾಗಿದ್ದಾರೆ, ಈ ರಾಜ್ಯದ ಜನರು ನೋಡುತ್ತಿದ್ದಾರೆ. ಭಗವಂತನ ದಯೆಯಿಂದ, ಯಾವುದೋ ಪೂರ್ವಜನ್ಮದ ಪುಣ್ಯದಫಲದಿಂದ ನೀವು ಇಲ್ಲಿ ಅಧಿಕಾರದಲ್ಲಿದ್ದು

ಕೇಂದ್ರದಲ್ಲಿ ನಮ್ಮ ದೇವೇಗೌಡರೇ ಪ್ರಧಾನಿಯಾಗಿದ್ದಂಥ ಕಾಲದಲ್ಲಿ ಈ ರೀತಿಯ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಹುಡುಕುವುದಕ್ಕೆ ಬದಲಾಗಿ ಸಮಸ್ಯೆಗಳನ್ನು ಉಲ್ಬಣಗೊಳಿಸಿ ನಮ್ಮನ್ನು ಈ ದುಸ್ಥಿತಿಗೆ ತಂದಿರುವುದು ಗೊತ್ತಿದೆ, ಅದಕ್ಕೆ ಜನರು ಯಾವ ತೀರ್ಮಾನ ಕೊಡಬೇಕೋ ಅದನ್ನು ಕೊಟ್ಟಿದ್ದಾರೆ, ನಾವು ಅದೇ ತಪ್ಪನ್ನು ಮಾಡಿದರೆ ಜನರು ಅದೇ ತೀರ್ಮಾನವನ್ನು ಕೊಡುತ್ತಾರೆ, ನಾವು ಆ ಎಚ್ಚರಿಕೆಯನ್ನು ವಹಿಸುತ್ತೇವೆನ್ನುವ ಮಾತನ್ನು ಹೇಳುತ್ತೇನೆ. ಇವತ್ತು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕಿಂತ ಮುಂಚೆ ಯಾವುದೇ ಕಾರಣಕ್ಕೂ ಈ ವ್ಯಾಲಿ ಅಥಾರಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಬಾರದು, ಸುಪ್ರೀಂ ಕೋರ್ಟ್‌ನಲ್ಲಿ ಪ್ರೊಸೀಡಿಂಗ್ಸ್ ನಿಲ್ಲಬೇಕು ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುವಂಥದ್ದು, ಸುಪ್ರೀಂ ಕೋರ್ಟ್ ಮುಂದೆ ಮತ್ತೊಂದು ಅಫಡವಿಟ್ ಹಾಕಿ. ಈಗ ನಿಮಗೆ ಸುಪ್ರೀಂ ಕೋರ್ಟ್ ಮುಂದೆ, ಹೋಗುವುದಕ್ಕೆ ಒಂದು ಅವಕಾಶವಿದೆ. ಅದೇನೆಂದರೆ, ಸ್ವತಃ ಈಗಿರುವ ಕೇಂದ್ರ ಸರ್ಕಾರ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಅನ್ನು ಫ್ರೇಂ ಮಾಡುತ್ತೇವೆಂದು ತಾತ್ವಿಕವಾಗಿ ಒಪ್ಪಿಕೊಂಡಿರುವುದರಿಂದ ಆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಈ ರೀತಿ ಪ್ರೊಸೀಡಿಂಗ್ಸ್ ಮುಂದುವರೆಯುವ ಅಗತ್ಯವಿಲ್ಲ ಮತ್ತೆ ವ್ಯಾಲಿ ಅಥಾರಿಟಿ ಕಾನ್‌ಸ್ಟಿಟ್ಯೂಟ್ ಆಗಬಾರದೆಂದು ಒತ್ತಾಯ ಮಾಡುವುದಕ್ಕೆ ನಿಮಗೆ ಅವಕಾಶವಿದೆ. ಅದಕ್ಕೆ ಬೇಕಾಗಿರುವ ಪ್ರಾಮಾಣಿಕ ಪ್ರಯತ್ನವನ್ನು ಈಗಲಾದರೂ ಮಾಡಿ ಹಿಂದೆ ಮಾಡಿರುವ ತಪ್ಪನ್ನು, ಅಪರಾಧವನ್ನು ತಿದ್ದುಕೊಳ್ಳುವ ಕೆಲಸ ಮಾಡುವ ಸಬ್ಬುದ್ಧಿ ಈಗಲಾದರೂ ನಿಮಗೆ ಬರಲಿ, ಆ ದಿಕ್ಕಿನಲ್ಲಿ ಹೆಜ್ಜೆ ಇಡಿ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಈ ಪ್ರೊಸೀಡಿಂಗ್ಸ್‌ನಲ್ಲೆ ಬಂದಿಲ್ಲವೆನ್ನತಕ್ಕಂಥ ಮಾತನ್ನು ಹೇಳಿದರು. ದಯವಿಟ್ಟು ಅದನ್ನು ಪದೇ ಪದೇ ಹೇಳುವುದಕ್ಕೆ ಹೋಗಬೇಡಿ. ಅದಕ್ಕೆ ತಿದ್ದುಪಡಿಯನ್ನು ಹೇಗೆ ತರಬೇಕು, ಅಥವಾ ಸುಧಾರಣೆ ಹೇಗೆ ಮಾಡುತ್ತೀರಿ ಎನ್ನುವುದರ ಬಗ್ಗೆ ಹೇಳಿ. ಈಗ ಇದು ನಿಮ್ಮ ಗಮನಕ್ಕೆ ಬಂದಿದೆಯಲ್ಲಾ, ಅದು ನಿಮ್ಮಲ್ಲಿದೆಯಲ್ಲಾ ಕೊನೆಯ ವಾಕ್ಯವನ್ನು ಓದಿ:

"The meeting was held under the chairmanship of Mr. I.K. Gujral, Prime Minister and Chief Ministers of states. The Secretary, Interstate Council, Sri Vinaya Shankar welcomed the participants to the 4th meeting of Inter-State Council. Sri Indrajit Gupta, Home Minister and the Prime Minister addressed the meeting. It was agreed that the prepared speech brought by distinguished members would be distributed and taken as read. The contents would be taken note by the secretariat. Therefore, the items on the agenda were taken up.

ಅಂದರೆ, ಪ್ರೊಸೀಡಿಂಗ್ಸ್‌ನಲ್ಲಿ ಇದು ಬಂದಿಲ್ಲವೆಂದು ಹೇಳುವುದಕ್ಕೆ ಹೋಗಬೇಡಿ, ಇದು ಪ್ರೊಸೀಡಿಂಗ್ಸ್‌ನಲ್ಲಿ ಬಂದಿದೆ, ಇದರಲ್ಲಿ ಏನಿದೆ,

"Item No.3 Chapter 17 of Sarkaria Commission Report on the Inter-State Council River Water Disputes:

It was noted that this chapter of Sarkaria Commission Report on Inter-State River Water Disputes contained five recommendations. The standing committee has considered the recommendations and had reached a consensus. Detailed discussions were held in respect of each recommendation. The consensus proposed by the standing Committee in respect of each recommendation was endorsed by the members of the Inter-state Council except recommendation No.212".

This is the proceedings.

SRI SIDDARAMAIAH : I am the man who attended the meetings

SRI M. MALLIKARJUNA KHARGE (Leader of the Opposition) : Then you reject. You cannot totally reject the proceedings. I further quote: "Consensus proposed by the Standing Committee in respect of each recommendation was endorsed by the Members of the Inter-State Council except in respect of the recommendation No. 212. The gist of the recommendations, the consensus proposed by the standing Committee and the final recommendations of the Inter-State Council is given in the statement at Annexure -(3). In brief, the consensus proposed by the Standing Committee in respect of all the recommendations was endorsed by the Inter-State Council. In respect of recommendation No. 212 relating to setting up of a Tribunal, on an application made by the State it was decided that the Dispute already settled should not be re-opended."

ಇದರ ಅರ್ಥ ಏನೆಂದರೆ ಕಂಪ್ಲೀಟ್ ಪ್ರೊಸೀಡಿಂಗ್ಸ್‌ನಲ್ಲಿ ಇದೆಲ್ಲವೂ ಬಂದಿದೆ. ಅದಕ್ಕೆ ಉತ್ತರವನ್ನು ಇತ್ತೀಚೆಗೆ ಕಳುಹಿಸಿದ್ದೇವೆ ಎಂದು ಹೇಳುತ್ತೀರಿ. ಅದನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ ಮೇಲೆ ಕಳುಹಿಸಿದರೋ, ಪತ್ರಿಕೆಯಲ್ಲಿ ಬಂದ ಮೇಲೆ ಕಳುಹಿಸಿದರೋ, ಯಾವಾಗ ಕಳುಹಿಸಿದರು ಎಂಬುದು ಗೊತ್ತಿಲ್ಲ. ಅದಕ್ಕಾಗಿ ದಯವಿಟ್ಟು ಪ್ರೊಸೀಡಿಂಗ್ಸ್‌ನಲ್ಲಿ ಯಾವುದೂ ಇಲ್ಲ ಎಂದು ಹೇಳುವಂಥಾದ್ದು ಬೇಡ. ನೀವು ಮೀಟಿಂಗ್‌ನಲ್ಲಿ ಹೇಳಿದ್ದು ಏನಾಗಿದೆ ಎಂದರೆ, they have taken note of that.ಆದರೆ ಅದ್ಯಾವುದನ್ನೂ ಕೂಡ ಪ್ರೊಸೀಡಿಂಗ್ಸ್‌ನಲ್ಲಿ ಎಂಟ್ರಿ ಮಾಡಿಲ್ಲ. ಇಂಟರ್ ಸ್ಟೇಟ್ ಕೌನ್ಸಿಲ್ ಮೀಟಿಂಗ್‌ಗೆ ಮುಖ್ಯಮಂತ್ರಿಗಳು ಹೋಗಬೇಕು. ಇಲ್ಲವೆಂದರೆ ಅವರು ಡೆಪ್ಯೂಟ್ ಮಾಡಿದಂಥ ಮಂತ್ರಿಗಳು ಹೋಗುತ್ತಾರೆ. Anybody can be deputed.

ಮುಖ್ಯಮಂತ್ರಿಗಳು ಇಲ್ಲವೆಂದರೆ ಉಪ ಮುಖ್ಯಮಂತ್ರಿಗಳು ಡೆಪ್ಯೂಟ್ ಮಾಡಬಹುದು ಅಥವಾ ಅವರನ್ನೇ ಡೆಪ್ಯೂಟ್ ಮಾಡಿದರೆ ಅವರು ಹೋಗುತ್ತಾರೆ. ಯಾರನ್ನೂ ಬೇಕಾದರೂ ಡೆಪ್ಯೂಟ್ ಮಾಡಬಹುದು. ಹಿಂದೆ ಮದರಾಸಿನಲ್ಲಿ ಸದರನ್ ಇಂಟರ್ ಸ್ಟೇಟ್ ಕೌನ್ಸಿಲ್ ಮುಖ್ಯಮಂತ್ರಿಗಳ

ಸಭೆಯನ್ನು ಕರೆದಾಗ ಎಸ್.ಬಿ. ಚವಾಣ್‌ರವರು ಗೃಹ ಸಚಿವರಾಗಿದ್ದರು. ಆ ಕಾಲದಲ್ಲಿ ನಾನು ಹೋಗಿದ್ದೆ. ಅಲ್ಲಿ ನೀರಾವರಿಗೆ ಸಂಬಂಧಿಸಿದಂತೆ ಇದೊಂದೇ ವಿಷಯ ಬರುವುದಿಲ್ಲ. ಬೇಕಾದಷ್ಟು ವಿಷಯಗಳು ಬರುತ್ತವೆ. ಅವುಗಳಲ್ಲಿ ಯಾವುದನ್ನಾದರೂ ಒಪ್ಪಬಹುದು ಅಥವಾ ಒಪ್ಪದಿರಬಹುದು. ಆದರೆ ಪ್ರತಿಯೊಂದು ವಿಷಯಕ್ಕೂ ನೀವು ನಿಮ್ಮ ನಿಮ್ಮ ಅಭಿಪ್ರಾಯವನ್ನು ಹೇಳುತ್ತೀರಿ. ಒಪ್ಪಿಕೊಂಡರೆ ಇಂಥಾದ್ದಕ್ಕೆ ಒಪ್ಪಿಗೆ ಇದೆ ಎಂದು ಹೇಳುತ್ತೀರಿ ಇಲ್ಲವೆಂದರೆ ಇಲ್ಲ ಎಂದು ಹೇಳುತ್ತಿರಿ. ಅದನ್ನು ಬರೆದುಕೊಂಡಿದ್ದಾರೋ ಅಥವಾ ಇಲ್ಲವೋ ಎಂದು ಈ ಸಮಯದಲ್ಲಿ ತಾವು ನೋಡದೇ ಇರಬಹುದು. ಆದರೆ ಅದಾದ ಕೂಡಲೇ ಫಾಲೋ ಅಫ್ ಆ್ಯಕ್ಷನ್ ಮಾಡುತ್ತಾರೆ. ಆಗ ನಿಮಗೆ ಇದು ಬಂದೇ ಬರುತ್ತದೆ. ಆದರೆ ಇದು ಪತ್ರಿಕೆಗಳಲ್ಲಿ ಬಂದಾಗ, ನಾವು ಇದನ್ನು ಒಪ್ಪಿಲ್ಲ ಎಂದು ನಿರಾಕರಣೆ ಮಾಡತಕ್ಕಂಥಾದ್ದನ್ನು ತರಾತುರಿಯಲ್ಲಿ ಕಾನೂನು ಸಚಿವರು ಮಾಡಿದರು, ನಂತರ ನಾಗೇಗೌಡರೂ ಮಾಡಿದರು. ಇವೆಲ್ಲವೂ ನಡೆದು ಹೋಯಿತು. ಪ್ರೊಸೀಡಿಂಗ್ಸ್ ಅನ್ನು ನೋಡದೆ ನಾವು ಆ ರೀತಿ ಹೇಳಿಲ್ಲ ಎಂದರೆ ಏನು ಅರ್ಥ: It is your duty to bring to the notice.

ಶ್ರೀ ಎಂ.ಸಿ. ನಾಣಯ್ಯ : ತರಾತುರಿ ಎಂದು ಹೇಳಬೇಡಿ. ಶ್ರೀಮಾನ್ ಹೆಚ್. ಕೆ. ಪಾಟೀಲರು ತಾವು ಕೊಟ್ಟಿರತಕ್ಕಂಥ ಹೇಳಿಕೆಯಲ್ಲಿ, ಮುಖ್ಯ ಮಂತ್ರಿಗಳಾದ ಜೆ.ಹೆಚ್. ಪಟೇಲರು ನೀರಾವರು ಮಂತ್ರಿಗಳಾದ ನಾಗೇಗೌಡರು ಸಭೆಯಲ್ಲಿ ಹಾಜರಿದ್ದು ಈ ರೀತಿಯ ಪ್ರೊಪೋಸಲ್‌ಗೆ ತಮ್ಮ ಒಪ್ಪಿಗೆಯನ್ನು ಕೊಟ್ಟರು ಎಂದು ಹೇಳಿದಾಗ, ಅದಕ್ಕೆ ನಾನು ಹೇಳಿದೆ ಇಲ್ಲ. The Chief Minister did not attend, Irrigation Minister did not attend, It was the Deputy Chief Minister who attended it. In his speech, the Deputy Chief Minister made it very clear. ತರಾತುರಿ ಮಾಡಿದುದ್ದು ನೀವು, ನಾವಲ್ಲ, ಪ್ರಚಾರಕ್ಕೋಸ್ಕರ ರಾಜಕೀಯ ಮಾಡಬೇಕೆಂದು ಮಾಡಿದಿರಿ. ಅದಕ್ಕೆ ನಾವು ಸರಿಯಾದ ಉತ್ತರ ಕೊಟ್ಟೆವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿ ಪ್ರೊಸೀಡಿಂಗ್ಸ್‌ನಲ್ಲಿ ಬಂದಾಗ ನಾವು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ?

ಶ್ರೀ ಎಂ.ಸಿ. ನಾಣಯ್ಯ : ಈಗಾಗಲೇ ಖರ್ಗೆಯವರು ಹೇಳಿದ ಹಾಗೆ ಇಂಟರ್ ಸ್ಟೇಟ್ ಕೌನ್ಸಿಲ್ ಸಭೆಯಲ್ಲಿ ಹಲವಾರು ವಿಷಯಗಳು ಚರ್ಚೆಗೆ ಬರುತ್ತವೆ. ಚರ್ಚೆಯಾಗುವುದಕ್ಕೆ ಮೊದಲು ಪ್ರತಿಯೊಂದು ವಿಷಯವನ್ನು ರಾಜ್ಯ ಸರ್ಕಾರಕ್ಕೂ ಕಳುಹಿಸುತ್ತಾರೆ. ರಾಜ್ಯ ಸರ್ಕಾರಕ್ಕೆ ಕಳುಹಿಸಿದ ಮೇಲೆ, ರಾಜ್ಯ ಸರ್ಕಾರದವರು ಪ್ರತಿಯೊಂದು ವಿಚಾರಕ್ಕೆ ಸಂಬಂಧಪಟ್ಟ ಹಾಗೆ ತಮ್ಮ ನಿಲುವು ಏನು ಎನ್ನುವುದನ್ನು ಅವರ ಭಾಷಣದಲ್ಲಿ ಅಳವಡಿಸಿಕೊಂಡು ಹೋಗುತ್ತಾರೆ. ಸಭೆಯಲ್ಲಿ 22-23 ಜನ ಮುಖ್ಯಮಂತ್ರಿಗಳಿದ್ದಾಗ ಎಲ್ಲವನ್ನೂ ಓದಿ ಚರ್ಚೆ ಮಾಡುವುದಿಲ್ಲ. ಭಾಷಣಗಳನ್ನು ಓದಲಾಗಿದೆ ಎಂದು ರೆಕಾರ್ಡ್ ಮಾಡುತ್ತಾರೆ. ಅದರ ಪ್ರೊಸೀಡಿಂಗ್ಸ್ ಅಲ್ಲಿ ಆಗುವುದಿಲ್ಲ. ಅಲ್ಲಿ ಪ್ರಧಾನ ಮಂತ್ರಿಗಳು ಭಾಷಣ ಮಾಡುತ್ತಾರೆ, ಗೃಹ ಸಚಿವರು ಭಾಷಣ ಮಾಡುತ್ತಾರೆ. ನಂತರ ಒಂದೆರಡು ಕ್ಲಾರಿಫಿಕೇಷನ್ ಅನ್ನು ಕೇಳಿಯಾದ ಮೇಲೆ ಯಾರ್‍ಯಾರು ವಿಚಾರದ ಪರವಾಗಿದ್ದಾರೆ, ಯಾರ್‍ಯಾರು ವಿರೋಧ ಎನ್ನುವುದನ್ನು

ತೆಗೆದುಕೊಳ್ಳುತ್ತಾರೆ. ನಂತರ ಪ್ರೊಸೀಡಿಂಗ್ಸ್ ಅನ್ನು ತಯಾರು ಮಾಡುತ್ತಾರೆ. ಅದು ಪ್ರೊಸೀಡಿಂಗ್ಸ್‌ನಲ್ಲಿ ಬಂದ ಕೂಡಲೇ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿದೆ. ಇದರಲ್ಲಿ ಬೇರೆ ಏನಿದೆ? You say, we have surrendered our rights. The Chief Minister is not a fool to surrender the interest of Karnataka to Tamil Nadu.

ಶ್ರೀ ಸಿದ್ಧರಾಮಯ್ಯ : ಇಂಟರ್‌ಸ್ಟೇಟ್ ಮೀಟಿಂಗ್‌ನಲ್ಲಿ ನಮ್ಮ ಭಾಷಣಗಳಿದ್ದವು. ಇದರಲ್ಲಿ ಬಂದಿರುವುದು ನಮ್ಮ ಲಿಖಿತ ಭಾಷಣಗಳು. ಅದನ್ನು ಕೊಟ್ಟಾದ ಮೇಲೂ ನಾವು ನಮ್ಮ ಭಾಷಣಗಳ ಜಿಸ್ಟ್ ಅನ್ನು ಅಲ್ಲಿ ಹೇಳಿದ್ದೇವೆ. ನಮ್ಮ ಅಬ್ಜೆಕ್ಷನ್‌ಗಳು ಏನಿವೆ? ಯಾವುದಕ್ಕೆ ನಮ್ಮ ಒಪ್ಪಿಗೆ ಇದೆ, ಯಾವುದಕ್ಕೆ ಇಲ್ಲ ಎನ್ನುವುದನ್ನು ಹೇಳಿದ್ದೇವೆ. ಅಲ್ಲಿ ಪ್ರಧಾನ ಮಂತ್ರಿಗಳು ಮತ್ತು ಗೃಹ ಸಚಿವರು ಭಾಷಣ ಮಾಡುತ್ತಾರೆ. ಅಲ್ಲಿಗೆ ಸಭೆ ಮುಗಿಯುತ್ತದೆ. ಪ್ರೊಸೀಡಿಂಗ್ಸ್ ಅನ್ನು ನಂತರ ನಮಗೆ ಕಳುಹಿಸಿಕೊಡಲಾಗುತ್ತದೆ. ಈ ಪ್ರೊಸೀಡಿಂಗ್ಸ್ ಬಂದಿರತಕ್ಕಂಥಾದ್ದು 7ನೇ ತಾರೀಖು. ನಮ್ಮ ಭಾಷಣದ ಪ್ರಕಾರ ಅವರು ಪ್ರೊಸೀಡಿಂಗ್ಸ್ ಮಾಡಬೇಕಾಗಿತ್ತು. ನಮ್ಮ ಭಾಷಣದ ಪ್ರಕಾರ ಕರ್ನಾಟಕ ರಾಜ್ಯ ಒಪ್ಪಿದೆ ಅಥವಾ ಇಲ್ಲ ಎನ್ನುವುದನ್ನು ರಿಮಾರ್ಕ್ಸ್‌ನಲ್ಲಿ ಬರೆಯಬೇಕಾಗಿತ್ತು. ಅದನ್ನು ಬರೆದಿಲ್ಲ. ಆದ್ದರಿಂದ ನಾವು ಇದು ನಮ್ಮ ನಿಲುವು ಅಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದೇವೆ ಮತ್ತು ಕನ್‌ಫರ್ಮೇಷನ್ ಬಂದಾಗ ಮತ್ತೆ ಹೇಳುತ್ತಿದ್ದೇವೆ. ನಾವು ಅಧಿಕಾರದಲ್ಲಿರಲಿ ಅಥವಾ ಇಲ್ಲದಿರಲಿ, ಯಾವುದೇ ಕಾರಣಕ್ಕೂ ಕರ್ನಾಟಕ್ಕೆ ಅನ್ಯಾಯವಾಗಲು ಬಿಡುವುದಿಲ್ಲ. ಇಲ್ಲಿ ಯಾರ ಮುಲಾಜಿಗೂ ಒಳಗಾಗುವ ಪ್ರಶ್ನೆಯಿಲ್ಲ. ಪದೇ ಪದೇ ಯಡಿಯೂರಪ್ಪನವರು ಕುರ್ಚಿ, ಕುರ್ಚಿ ಎಂದು ಹೇಳುತ್ತಿದ್ದಾರೆ. ಕುರ್ಚಿಗೋಸ್ಕರ ರಾಜಕೀಯ ಮಾಡತಕ್ಕದ್ದಲ್ಲ. ರಾಜಕೀಯ ಅಧಿಕಾರ ನಮ್ಮ ಅಪ್ಪನ ಮನೆಯ ಆಸ್ತಿಯೇ? ಇಲ್ಲೇ ಗೂಟ ಹೊಡೆದುಕೊಂಡು ಕುಳಿತುಕೊಳ್ಳಲು ಇದು ಪಿತ್ರಾರ್ಜಿತ ಸ್ವತ್ತೇ? ಬದಲಾವಣೆಗಳು ಆಗುತ್ತವೆ. ಈಗ 40 ವರ್ಷಗಳ ನಂತರ ವಾಜಪೇಯಿಯವರು ಅಧಿಕಾರಕ್ಕೆ ಬರಲಿಲ್ಲವೇ? ಇದರಲ್ಲಿ ಯಾರೂ ರಾಜಕೀಯ ಮಾಡುವುದು ಬೇಡ. ನಾವು ಅದನ್ನು ಒಪ್ಪಿಕೊಂಡಿಲ್ಲ. ಯಾವ ಕಾರಣಕ್ಕೂ ಕರ್ನಾಟಕದ ಹಿತವನ್ನು ಬಲಿ ಕೊಡಲು ಈ ಸರ್ಕಾರ ಹೋಗುವುದಿಲ್ಲ, ಅಂಥ ಪರಿಸ್ಥಿತಿಗೆ ನಾವು ಕೈ ಹಾಕುವುದಿಲ್ಲ. ನಾವು ಕಾವೇರಿ ಹರಿಯುವ ಭಾಗದಿಂದ ಬಂದಂಥವರು. ನಾವೂ ಕೂಡ ಕಾವೇರಿ ನೀರಿನ ಬಗ್ಗೆ ಕಾಳಜಿ ಇರತಕ್ಕಂಥವರು. ಇದು ನಮ್ಮ ರಾಜ್ಯ ನೀರು. ಇದನ್ನು ಈ ರೀತಿ ಮಾಡಲು ಸಾಧ್ಯವಾಗುತ್ತದೆಯೇ? ನೀವು ಇದ್ದರೆ ಮಾಡುವುದಕ್ಕೆ ಆಗುತ್ತದೆಯೇ ಅಥವಾ ಅವರು ಇದ್ದರೆ ಮಾಡುವುದಕ್ಕೆ ಆಗುತ್ತದೆಯೇ ಯಾರೂ ಕೂಡ ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಎಲ್ಲಾ ಪ್ರೊಟೆಸ್ಟ್‌ಗಳ ನಡುವೆಯೂ ಕೆಲವು ಸಲ ಅಲ್ಲಿ ಇಲ್ಲಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿರಬಹುದು. ಸತತವಾಗಿ ಎಲ್ಲಾ ಕಾಲಗಳಲ್ಲಿಯೂ ಈ ರಾಜ್ಯಕ್ಕೆ ಅನ್ಯಾಯ ಆಗಿರತಕ್ಕಂಥಾದ್ದು ನಿಜ. ಆದ್ದರಿಂದ ಈ ಅನ್ಯಾಯವನ್ನು ಅಂತ್ಯಗೊಳಿಸಲು ನಾವೆಲ್ಲರೂ ಒಟ್ಟಿಗೆ ಇದ್ದು ಹೋರಾಟ ಮಾಡಬೇಕಾದ ಅಗತ್ಯವಿದೆಯೇ ಹೊರತು ಅವರ ಮೇಲೆ ಇವರು ಗೂಬೆ ಕೂರಿಸುವುದು, ಇವರ ಮೇಲೆ ಅವರು ಗೂಬೆ ಕೂರಿಸುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಯಾವಾಗಲೂ ನಾವು ಕಾವೇರಿ ವಿವಾದದಲ್ಲಿ ಒಟ್ಟಾರೆ ತೀರ್ಮಾನ ತೆಗೆದುಕೊಂಡಿದ್ದೇವೆ. ಒಂದು ಸಾರಿಯಾದರೂ ಪರಸ್ಪರ ವಿರೋಧಾಭಾಸವಾಗಿದೆ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆ ಕೊಡಿ. ಯಾವಾಗಲೂ ಆ ರೀತಿ ಮಾಡಿಲ್ಲ. ನಾವು ಒಟ್ಟಾಗಿಯೇ ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೆ ನಮ್ಮ ವಿಶ್ವಾಸವನ್ನು ನೀವು ದುರುಪಯೋಗ ಮಾಡಕೊಳ್ಳುತ್ತಿದ್ದೀರಿ. ಸರ್ಕಾರದ ಮೇಲೆ ವಿಶ್ವಾಸವಿಟ್ಟಿದ್ದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. ನಿಮಗೆ ಇಷ್ಟ ಬಂದಂತೆ ಮಾಡುತ್ತೀರಿ, ಇದನ್ನು ಮಾಡಬೇಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಹಿಂದೆಯೂ ಸಹ ನಿಲುವುಗಳನ್ನು ತೆಗೆದುಕೊಳ್ಳುವಾಗ ವಿರೋಧ ಪಕ್ಷದ ನಾಯಕರುಗಳನ್ನು ಕರೆದು, ಅವರ ಜೊತೆ ಚರ್ಚೆ ಮಾಡಿ ತೆಗೆದುಕೊಂಡಿದ್ದೇವೆ. ಇವತ್ತೂ ಸಹ ರಾಜ್ಯದ ಪರ ನಿಲುವನ್ನು ತೆಗೆದುಕೊಳ್ಳುವಾಗ ಇವರ ಅಭಿಪ್ರಾಯಗಳನ್ನು ತೆಗೆದುಕೊಂಡು, ಇವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಮಾಡುತ್ತೇವೆಯೇ ಹೊರತು ಇದರಲ್ಲಿ ಯಾವುದೇ ರಾಜಕೀಯವನ್ನು ಮಾಡುವುದಕ್ಕೆ ಹೋಗುವುದಿಲ್ಲ.ಇದು ಬಹಳ ಸ್ಪಷ್ಟ ಎಂದು ನಾನು ಹೇಳಲು ಬಯಸುತ್ತೇನೆ. ಇದರ ಬಗ್ಗೆ ಯಾರೂ ಕೂಡ ಸಂಶಯ ಇಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ಹಾಗೆಯೇ ನಮ್ಮ ಬೋನಫೈಡನ್ನೂ ಕೂಡ ಪ್ರಶ್ನೆ ಮಾಡಬೇಕಾದಂಥ ಅಗತ್ಯವಿಲ್ಲ. ಇದು ನಾವು ಮಾಡಿರತಕ್ಕಂಥ ಭಾಷಣ. ಇದನ್ನು ನಂಬಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ನಾವು ಏನೆಲ್ಲಾ ಪ್ರೊಟೆಸ್ಟ್ ಮಾಡಬೇಕೋ ಅದನ್ನು ಮಾಡುತ್ತೇವೆ ಮತ್ತು ಕನ್‌ಫರ್ಮೇಷನ್ ಬಂದಾಗಲೂ ಕೂಡ ನಾವು ಬಹಳ ಸ್ಪಷ್ಟವಾಗಿ ಹೇಳಿ ಅದನ್ನು ಬದಲಾವಣೆ ಮಾಡಬೇಕು ಎನ್ನುವ ಒತ್ತಾಯವನ್ನು ಕೂಡ ಮಾಡುತ್ತೇವೆ. ಮತ್ತು ಅದಕ್ಕೆ ನಿಮ್ಮ ಸಹಕಾರವನ್ನು ಕೂಡ ಕೋರುತ್ತೇವೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ಇವತ್ತಿನ ಚರ್ಚೆಯ ವಿಷಯವೆಂದರೆ, ಕಾವೇರಿ ಜಲ ವಿವಾದ ಕುರಿತಂತೆ ಕರ್ನಾಟಕದೊಂದಿಗೆ ಇನ್ನು ಮುಂದೆ ಯಾವುದೇ ರೀತಿಯ ಮಾತುಕತೆ ನಡೆಸುವುದಿಲ್ಲ ಎನ್ನುವ ತಮಿಳುನಾಡು ಮುಖ್ಯ ಮಂತ್ರಿಯವರ ಹೇಳಿಕೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪ. ಇದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು? ತಮಿಳುನಾಡಿನ ಮುಖ್ಯಮಂತ್ರಿಯವರಾದ ಕರುಣಾನಿಧಿಯವರು, ನಾವು ಪ್ರಧಾನ ಮಂತ್ರಿಯವರು ಕರೆದರೂ ಮಾತನಾಡುವುದಿಲ್ಲ, ಕರ್ನಾಟಕದ ಮುಖ್ಯಮಂತ್ರಿಗಳ ಜೊತೆಗೆ ನಾವು ಮಾತುಕತೆಗೆ ಹೋಗುವುದೇ ಇಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಿದ್ದಾರೆ. ಆದರೆ ಇದರ ಬಗ್ಗೆ ನಮ್ಮ ನಿಲುವು ಏನು ಎಂದು ಇದುವರೆಗೂ ಕರ್ನಾಟಕ ಸರ್ಕಾರ ಹೇಳಿಲ್ಲ. ಒಂದು ಹಂತದಲ್ಲಿ ಈ ರಾಜ್ಯದ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು, ಸಂಸದೀಯ ಸಚಿವರಾದ ನಾಣಯ್ಯನವರು ಮತ್ತು ನೀರಾವರಿ ಸಚಿವರಾದ ನಾಗೇಗೌಡರು, ಈ ವಿಚಾರ ಮಾತುಕತೆಯಲ್ಲಿ ಮುಗಿದೇ ಹೋಯಿತು, ತೀರ್ಮಾನವಾಗೇ ಹೋಯಿತು, ಶತಶತಮಾನಗಳಿದ ಮುಗಿಯದೇ ಇದ್ದಂಥ ಈ ಸಮಸ್ಯೆ ಬಗೆಹರಿಯಿತು ಎಂದು ಇವರ ಅವರ ಬೀಗತನ ಸುಮಾರು ಒಂದು ತಿಂಗಳು ನಡೆಯಿತು. ದೆಹಲಿಯಲ್ಲಿ ಹಾಗೂ ಚನ್ನೈನಲ್ಲಿ ಮಾತುಕತೆಗಳು ನಡೆದವು. ಇವೆಲ್ಲಾ ಆದಮೇಲೆ, ನಮ್ಮ ರಾಜ್ಯಕ್ಕೆ ಈ ದೇಶದ ಪ್ರಧಾನಿಗಳು ಅಥವಾ ರಾಷ್ಟ್ರಪತಿಗಳು ಬಂದರೆ ಎಷ್ಟು ಗೌರವ, ರಕ್ಷಣೆ ಕೊಡುತ್ತೇವೋ, ಅದೇ ರೀತಿಯಲ್ಲಿ ನಮ್ಮ ವಿಧಾನಸೌಧದ ಮುಂದೆ

ಕರುಣಾನಿಧಿಯವರು ಬಂದಾಗ ಕೊಟ್ಟು, ಇವರೆಲ್ಲಾ ಸೊಂಟ ಕಟ್ಟಿಕೊಂಡು ನಿಂತುಕೊಂಡು ಇನ್ನೇನು ವಿಚಾರ ಮುಗಿಯಿತು, ನಾವು ಒಂದು ತೀರ್ಮಾನಕ್ಕೆ ಬಂದು ಬಿಡುತ್ತೇನೆ ಎಂದು ಹೇಳಿದರು ಅವತ್ತು ಆ ರೀತಿ ಸ್ವಾಗತ ಮಾಡಿದವರಲ್ಲರೇ ನೀವು. ಅದೇ ಮಂತ್ರಿಮಂಡಲದಲ್ಲಿಯಲ್ಲವೇ ನೀವು ಈಗ ಇರುವುದು ?

ಶ್ರೀ ಎಂ.ಸಿ. ನಾಣಯ್ಯ : ನಾವು ತಮಿಳುನಾಡಿನವರೊಂದಿಗೆ 5 ಸಲ ಮೀಟಿಂಗ್‌ಗಳನ್ನು ಮಾಡಿರತಕ್ಕಂಥಾದ್ದು ನಿಜ. ಅಲ್ಲಿಗೆ ಮುಖ್ಯಮಂತ್ರಿಗಳೂ ಹೋಗಿದ್ದಾರೆ, ನಾನೂ ಸಹ ಕಾನೂನು ಮಂತ್ರಿಯಾಗಿ ಹೋಗಿದ್ದೇನೆ; ಶ್ರೀಮಾನ್ ನಾಗೇಗೌಡರೂ ಹೋಗಿದ್ದಾರೆ, ಐದನೇ ಮೀಟಿಂಗ್‌ಗೆ ತಲುಪುವಂಥ ಸಂದರ್ಭದಲ್ಲಿ, ಹಿಂದಿನ ನಾಲ್ಕು ಮೀಟಿಂಗ್‌ಗಳಲ್ಲಿ ನಡೆದಿರತಕ್ಕಂಥ ಚರ್ಚೆಯ ಹಿನ್ನಲೆಯಲ್ಲಿ ಅವರೇ ಮುಂದೆ ಬಂದು ನಾವು ಇದನ್ನು ತೀರ್ಮಾನ ಮಾಡಿಕೊಳ್ಳಬೇಕು ಎಂದು ಹೇಳಿದರು. ನಾಲ್ಕು ಮೀಟಿಂಗ್‌ಗಳ ಹಂತದಲ್ಲಿ ಎಷ್ಟು ನೀರನ್ನು ಕೊಡಬೇಕು ಎಂದು ತೀರ್ಮಾನ ಮಾಡುವ ಹಂತಕ್ಕೆ ಬಂದು ತಲುಪಿದ್ದರು. ಐದನೇ ಮೀಟಿಂಗ್‌ನಲ್ಲಿ ನಾವು ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿತ್ತು.

4.50 ಪಿ.ಎಂ.

4 ಮೀಟಿಂಗ್‌ನಲ್ಲಿ ನಿಜವಾಗಿಯೂ ಈ ತರಹ ಅವರ ಮನಸ್ಸಿನಲ್ಲಿ ಇದ್ದದ್ದು ನಿಜ. ಕಡೆಗೆ 5ನೇ ಮೀಟಿಂಗ್ ಬಂದಂಥ ಸಂದರ್ಭದಲ್ಲಿ ಏತಕ್ಕೋಸ್ಕರ ಹಿಂದಕ್ಕೆ ಸರಿದರು ಎಂದು ಹೇಳತಕ್ಕಂಥದ್ದನ್ನು ಬಹುಶಃ ಅದಕ್ಕೆ ಅವರೇ ಉತ್ತರ ಹೇಳಬೇಕಾಗುತ್ತದೆ. ಇದಕ್ಕೆ ರಾಜಕೀಯ ಒತ್ತಡ ಇರಬಹುದು, ರಾಜಕೀಯ ಕಾರಣಗಳು ಇರಬಹುದು. ಅದಕ್ಕೆ ನಾವು ಏನು ಹೇಳಿದೆವು ಎಂದರೆ - ನಿಮ್ಮದು ಈ ತರಹದ ತೀರ್ಮಾನವಾದರೆ ನಾವು ಈ ತೀರ್ಮಾನಕ್ಕೆ ಒಪ್ಪುವುದಿಲ್ಲ ಎಂದು ಸ್ಪಷ್ಟವಾಗಿ ನಿರಾಕರಣೆ ಮಾಡಿ ಬಂದಿದ್ದೇವೆ. ಇದು ತಪ್ಪೇ ?

+ ಶ್ರೀ ವಾಟಾಳ್ ನಾಗರಾಜ್ : ನಾನು ತಪ್ಪು ಅಥವಾ ಸರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವರ ಜೊತೆಯಲ್ಲಿ ಎಷ್ಟು ರೀತಿಯಲ್ಲಿ ಮಾತುಕತೆ ನಡೆಸಿದಿರಿ, ಅವರ ಹತ್ತಿರ ಯಾವ ರೀತಿ ನೀವು ಮುಖಕ್ಕೆ ಬಣ್ಣ ಹಚ್ಚಿಸಿಕೊಂಡಿರಿ ಎಂಬುದನ್ನು ಹೇಳುತ್ತಿದ್ದೇನೆ. ಕರುಣಾನಿಧಿಯವರು ಅಷ್ಟು ಸುಲಭದಲ್ಲಿ ಇವರ ಮಾತುಕತೆಗೆ ಬಗ್ಗುವುದಿಲ್ಲ ಎಂದು ನಾನು ಮೊದಲೇ ಅಂದುಕೊಂಡಿದ್ದೆ. ನಮ್ಮವರು ಅಲ್ಲಿಗೆ ಹೋಗಿ ಮಾತುಕತೆ ಆಗಿ ತೀರ್ಮಾನ ಆಗಿಹೋಯಿತಂತೆ ಎಂದು ಸಂತೋಷವಾಯಿತು. ನಾನು ಮಾನ್ಯ ನಂಜೇಗೌಡರು, ಚಂದ್ರೇಗೌಡರು ಮತ್ತು ನನ್ನ ಇತರೇ ಸ್ನೇಹಿತರ ಜೊತೆ ಮಾತನಾಡುತ್ತಾ ಕಾವೇರಿ ನೀರು ಹಂಚಿಕೆ ಬಗ್ಗೆ ಮಾತುಕತೆ ಆಯಿತಂತೆ, ಇನ್ನು ಯಾವುದೂ ವ್ಯಾಜ್ಯ ಇಲ್ಲವಂತೆ, ಸುಪ್ರೀಂಕೋರ್ಟಿಗೆ ಹೋಗುವ ಅವಶ್ಯಕತೆ ಇಲ್ಲ, ಮಾತುಕತೆಯಲ್ಲಿ ಎಲ್ಲಾ ಮುಗಿದುಹೋಯಿತೆಂದು ಅವರ ಜೊತೆ ಸಂತೋಷ ಹಂಚಿಕೊಂಡೆ. ಆ ಸಮಸ್ಯೆಯನ್ನು ಬಗೆಹರಿಸಿದ ನಿಮ್ಮ 3-4 ಜನರಿಗೆ ಕೀರ್ತಿ ಬರುತ್ತದೆ ಎಂದು ತಿಳಿದುಕೊಂಡೆವು. ಮತ್ತು ನಮ್ಮ ರಾಜ್ಯಕ್ಕೆ ಬಹಳ ಶಕ್ತಿ ಬಂತಪ್ಪ ಎಂದು ತಮ್ಮೆಲ್ಲರ ಬಗ್ಗೆ ಪ್ರೀತಿ ವಿಶ್ವಾಸ ಹುಟ್ಟಿತ್ತು. ಆದರೆ ಆ ಕೊನೆಯ ಗಳಿಗೆಯಲ್ಲಿ ನಿಮ್ಮ ಪರಿಸ್ಥಿತಿ ಎಷ್ಟರಮಟ್ಟಿಗೆ ಇತ್ತು

ಎಂದರೆ ನೀವೆಲ್ಲಾ ಅಲ್ಲಿಂದ ಹೇಳದೆ ಕೇಳದೆ ತಮಿಳುನಾಡನ್ನು ಬಿಟ್ಟುಬಂದಿರಿ. ತಮಿಳುನಾಡಿನವರು ನಿಮ್ಮನ್ನೆಲ್ಲಾ ಕರೆದು ಎಷ್ಟು ಗೌರವ ಕೊಟ್ಟು ಮಾತನಾಡುತ್ತಿದ್ದರು, ಆದರೆ ಕೊನೆ ಗಳಿಗೆಯಲ್ಲಿ ಹೇಳದೆ ಕೇಳದೆ ಬಂದು ಮಾತುಕತೆ ಮುರಿದುಬಿತ್ತು ಎಂದು ಪತ್ರಿಕೆಯವರಿಗೆ ಹೇಳಿಕೆ ಕೊಟ್ಟು ವಾಪಸ್ಸು ಬರಬೇಕಾಯಿತು. ಮಾನ್ಯ ನಾಗೇಗೌಡರು ಮಾನ್ಯ ನಾಣಯ್ಯನವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಪತ್ರಿಕೆ ಹೇಳಿಕೆ ನೀಡುತ್ತಾ ಇದು ಶತಶತಮಾನದಲ್ಲಿ ನಡೆಯದೆ ಇರತಕ್ಕಂಥದ್ದು, ಮಾತುಕತೆ ಮುಗಿದೇ ಹೋಯಿತು ಎಂದು ಈ ರಾಜ್ಯದ ಜನತೆಗೆ ತಪ್ಪು ಮಾಹಿತಿಯನ್ನು ಪ್ರತಿದಿನ ಕೊಡುತ್ತಿದ್ದಿರಲ್ಲವೇ? ಆದರೆ ಕೊನೆಗೆ ಅದರ ಪರಿಸ್ಥಿತಿ ಏನು ಆಯಿತು ಅವತ್ತು ಕರುಣಾನಿಧಿಯವರು ನಿಮ್ಮ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಇದ್ದ ಉದ್ದೇಶ ಏನು? ಕೊನೆಯಲ್ಲಿ ನಾನು ಮಾತುಕತೆಗೆ ಬರುವುದೇ ಇಲ್ಲ. ಎಂದು ಖಂಡತುಂಡವಾಗಿ ಹೇಳಿರತಕ್ಕಂಥ ಪರಿಸ್ಥಿತಿ ಏನು? ಇದರ ಜೊತೆಗೆ ಗೌಪ್ಯ ಸಭೆ ಮತ್ತು ಬಹಿರಂಗ ಸಭೆ ಹೀಗೆ ಎರಡೆರಡು ಸಭೆಗಳನ್ನು ನಡೆಸಿದ್ದೀರಿ. ಪ್ರಾಮಾಣಿಕವಾಗಿ ಈ ಸಭೆಯಲ್ಲಿ ನಿಮ್ಮ ಚಿಂತನೆ ಏನಿತ್ತು? ಅವತ್ತಿನ ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದಂಥ ಕರುಣಾನಿಧಿಯವರು ಏನೇನನ್ನು ನಿಮಗೆ ಹೇಳಿದ್ದಾರೆ? ಅದನ್ನು ಇಲ್ಲಿ ಇವತ್ತು ಬಹಿರಂಗಪಡಿಸಬೇಕು. ಇನ್ನು ನನ್ನ ದೃಷ್ಟಿಯಲ್ಲಿ ಮಾತುಕತೆ ಏನೂ ಬೇಕಿಲ್ಲ. ಮಾನ್ಯ ಕರುಣಾನಿಧಿಯವರನ್ನು ಮಾತುಕತೆಗೆ ಬನ್ನಿಯೆಂದು ಕರೆಯುತ್ತಿಲ್ಲ ನಾನು ನಮ್ಮ ರಾಜ್ಯ ಸರ್ಕಾರಕ್ಕೆ ಹೇಳುವುದೇನೆಂದರೆ ನಿಮ್ಮ ಜೊತೆಗೆ ಕಾವೇರಿ ವಿವಾದ ಬಗ್ಗೆ ಮಾತುಕತೆ ನಡೆಸುವುದಕ್ಕೆ ನಾವು ಯಾರೂ ತಯಾರಾಗಿಲ್ಲ, ನೀವು ಮಾತುಕತೆಗೆ ಬಂದರೆ ಬರಬಹುದು, ಇಲ್ಲದಿದ್ದರೆ ಬಿಟ್ಟುಬಿಡಬಹುದು, ನಮ್ಮದೇನೂ ತಕರಾರು ಇಲ್ಲ. ಎನ್ನುವ ನೇರವಾದ ಉತ್ತರವನ್ನು ಈ ಸದನದಲ್ಲಿ ಸರ್ಕಾರ ಅವರಿಗೆ ಕೊಡಬೇಕು. ತಮಿಳುನಾಡಿನ ಮುಖ್ಯಮಂತ್ರಿಗಳು ಅಲ್ಲಿಯ ಸದನದಲ್ಲಿ ನಾನು ಮಾತುಕತೆಗೆ ಹೋಗುವುದಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ನೇರವಾಗಿ ನಮ್ಮ ರಾಜ್ಯಸರ್ಕಾರದವರು .ಕೂಡ ನಾವು ಮಾತುಕತೆಗೆ ಬರುವುದಕ್ಕೆ ಸಿದ್ದರಿಲ್ಲ, ಯಾವತ್ತೂ ಮಾತುಕತೆಗೆ ಬರುತ್ತೇವೆಂದು ಹೇಳಿರಲಿಲ್ಲ ಎನ್ನುವಂಥ ಕಟುವಾದ ಪದಗಳಲ್ಲಿ ಹೇಳಿ ಕರುಣಾನಿಧಿಯವರಿಗೆ ರಾಜಕೀಯವಾದಂಥ ಬುದ್ಧಿಯನ್ನು ನಾವು ಇಲ್ಲಿ ಕಲಿಸಬೇಕಾಗುತ್ತದೆ. ತಮಿಳುನಾಡಿನಲ್ಲಿ ನಡೆಯುತ್ತಿರತಕ್ಕಂಥ ವಿಚಾರಗಳು ಎಂದರೆ ಅದನ್ನು ಹೇಳುವುದಕ್ಕೆ ನನಗೆ ಬಹಳ ನೋವು ಆಗುತ್ತದೆ. ಇಡೀ ತಮಿಳುನಾಡು ಮೊದಲಿನಿಂದಲೂ ಇದೇ ರೀತಿ ಬಹಿರಂಗವಾದಂಥ ಒಂದು ರಾಜಾಕಾರಣ, ಅಂತರಂಗದ ರಾಜಕಾರಣ, ತಮ್ಮ ಸ್ವಾರ್ಥಕ್ಕೊಂದು ರಾಜಕಾರಣ, ಹೀಗೆ ಹೆಜ್ಜೆ ಹೆಜ್ಜೆಗೂ ಕರುಣಾನಿಧಿಯವರು ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಜಯಲಲಿತಾರವರು ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ನಾನು ಹೇಳುವುದು ಏನೆಂದರೆ ಆ ರಾಜಕಾರಣಕ್ಕೆ ನಾವು ಬಲಿಯಾಗುವುದು ಬೇಡ. ನಾನೇನು ನೇರವಾಗಿ ಶ್ರೀ ಸಿದ್ದರಾಮಯ್ಯನವರು ಈ ರಾಜ್ಯವನ್ನು ಹರಾಜು ಹಾಕಿಬಿಟ್ಟರು ಎಂದು ಆ ಮಟ್ಟದಲ್ಲಿ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಮತ್ತು ನೀವು ಅಲ್ಲಿ ಮಾಡಿದ ಭಾಷಣದ ಬಗ್ಗೆ ಕೂಡ ನಾನು ತಲೆಕೆಡಿಸಿಕೊಂಡಿಲ್ಲ. ಈಗ ಅದಕ್ಕೆ ಉತ್ತರವಾಗಿ ಪತ್ರವನ್ನು ಕಳುಹಿಸುತ್ತಿದ್ದೀರಿ ಅಲ್ಲವೆ? ಅದು ಗೌಪ್ಯವೇ ಅಥವಾ ಬಹಿರಂಗವೇ ಎಂಬುದನ್ನು ಹೇಳಬೇಕು. ಅದು ಗೌಪ್ಯವಾಗಿದ್ದರೆ ನಾವು ನಿಮ್ಮ ಮೇಲೆ ಅನುಮಾನ ಪಡಬೇಕಾಗುತ್ತದೆ. ಆ ಪತ್ರವನ್ನು ಈ ಸದನದಲ್ಲಿ ಓದಬೇಕಾಗುತ್ತದೆ. ಇಂಟರ್‌ಸ್ಟೇಟ್

ಕೌನ್ಸಿಲ್‌ಗೆ ನೀವು ಏನು ಉತ್ತರ ಕೊಡುತ್ತಿದ್ದೀರಿ ಆ ಉತ್ತರದ ಪ್ರತಿಯನ್ನು ಇಲ್ಲಿ ಒದಗಿಸಬೇಕು. ಈ ಸದನ ಉನ್ನತ ಸ್ಥಾನದಲ್ಲಿರತಕ್ಕಂಥ ಸದನ. ಈ ಸದನದ ಮುಂದೆ ತಾವು ಈ ಪತ್ರವನ್ನು ಬಹಿರಂಗಪಡಿಸಬೇಕು. ಅದರ ಬಗ್ಗೆ ಬೇರೆ ಮಾತು ಇಲ್ಲ. ಆ ಪತ್ರವನ್ನು ನೀವು ಬಹಿರಂಗ ಪಡಿಸಲಿಲ್ಲವೆಂದರೆ ನಿಮ್ಮ ಮೇಲೆ ನಮಗೆ ಅನುಮಾನ ಬರುತ್ತದೆ. ಮಾನ್ಯ ಉಪಮುಖ್ಯಮಂತ್ರಿಗಳಿಗೆ ನನ್ನ ಒಂದು ಸಲಹೆ ಏನೆಂದರೆ - ಇಂಥ ಪರಿಸ್ಥಿತಿಯಲ್ಲಿ ಇಂಥ ಮಹೋನ್ನತವಾದಂಥ ಸಭೆಗಳಲ್ಲಿ ಈ ರೀತಿಯಾದಂಥ ನಿಮ್ಮ ಭಾಷಣವನ್ನು ತಿರುಚಿ ಆ ನಿರ್ಣಯದಲ್ಲಿ ಬರೆಯಬೇಕಾದರೆ, ಅಲ್ಲಿ ನಿಮಗೆ ಅವರ ಬಗ್ಗೆ ನಂಬಿಕೆ ಇಲ್ಲ, ಆ ಸಭೆ ಬಗ್ಗೆ ನಂಬಿಕೆ ಇಲ್ಲ. ಆದ್ದರಿಂದ ಆ ಸಭೆಗೆ ಬರುವುದಿಲ್ಲವೆಂದು ಮುಂದಿನ ಸಭೆಯನ್ನು ನೀವು ಬಹಿಷ್ಕರಿಸಿ. ಈ ರೀತಿಯಾದಂಥ ನನ್ನ ಭಾಷಣವೇ ಬೇರೆ, ನಿಮ್ಮ ಟಿಪ್ಪಣಿಯೇ ಬೇರೆ ಎಂದು ಮಾಡುವುದಾದರೆ ಇದು ಸಭೆಯಲ್ಲ, ಇದು ನಿಜವಾಗಿಯೂ ಅತ್ಯಂತ ಮೋಸದ ಪಿತೂರಿಯ ಸಭೆ ಎನ್ನತಕ್ಕಂಥ ಮಾತನ್ನು ಹೇಳಿ ನೀವು ಪ್ರತಿಭಟನೆ ಮಾಡಿ. ಮುಂದಿನ ಸಭೆಗೆ ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಿ ಎಂದು ನಾನು ಹೇಳುತ್ತೇನೆ. ನನಗೆ ಬಹಳ ನೋವು ಆಗಿರತಕ್ಕಂಥ ಇನ್ನೊಂದು ವಿಚಾರವೇನೆಂದರೆ "ಕಾವೇರಿ ನ್ಯಾಯಮಂಡಳಿ ಮಧ್ಯಂತರ ತೀರ್ಪನ್ನು ತಮಿಳುನಾಡು ಪರವಾಗಿ ಜಾರಿಗೊಳಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ." ಎಂದು ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಶ್ರೀಮತಿ ಜಯಲಲಿತ ಅವರು ಹೇಳಿದ್ದಾರೆ. ಇದು ಇವತ್ತು 15ನೇ ತಾರೀಖಿನ ದಿನಪತ್ರಿಕೆಯಲ್ಲಿ ಬಂದಿದೆ. ಕರ್ನಾಟಕವು ಸೇರಿದಂತೆ ಯಾರೂ ನ್ಯಾಯಮಂಡಳಿಯ ತೀರ್ಪನ್ನು ನಿರ್ಲಕ್ಷಿಸುವಂತಿಲ್ಲ ಎಂದು ಪತ್ರಕರ್ತರಿಗೆ ತಿಳಿಸಿದ್ದಾರೆ. ಇದು ರಾಷ್ಟ್ರೀಯ ಅಜೆಂಡಾದಲ್ಲಿ ಬಂದಿಲ್ಲ ಅದನ್ನು ನಾನು ಒಪ್ಪುತ್ತೇನೆ. ಆದರೆ ಶ್ರೀಮತಿ ಜಯಲಲಿತಾರವರು ಹೇಳಿರತಕ್ಕಂಥ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 'ಮಧ್ಯಂತರ ತೀರ್ಪನ್ನು ತಮಿಳುನಾಡಿನ ಪರವಾಗಿ ಜಾರಿಗೊಳಿಸಲು ಕೇಂದ್ರ ಸರ್ಕಾರ ಒಪ್ಪಿದೆ, ಇದು ಜಯಲಲಿತ ಅವರು ಹೇಳಿದ ಮಾತು ಅಂದಾಗ ಇದು ಬ್ಲಾಕ್‌ಮೈಲ್ ಎಂದು ನನಗನ್ನಿಸುತ್ತದೆ. ತಮಿಳುನಾಡಿನಲ್ಲಿ ಶ್ರೀ ಕರುಣಾನಿಧಿಯವರು ಇದೇ ಕೆಲಸ ಮಾಡಿದರು ಮತ್ತು ಶ್ರೀಮತಿ ಜಯಲಿಲಿತರವರು ಕೂಡ ಇದೇ ಕೆಲಸ ಮಾಡಿದರು.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಶ್ರೀಮತಿ ಜಯಲಲಿತರವರು ಬೆಂಬಲ ಕೊಡುತ್ತಿರುವಂಥ ಸಂದರ್ಭದಲ್ಲಿ ಈ ಕಂಡೀಷನ್‌ಗಳನ್ನು ಕೂಡ ಹಾಕಿದ್ದರು. ಅವರು ಈ ಕಂಡೀಷನ್‌ಗಳನ್ನು ಹಾಕಿರತಕ್ಕಂಥ ಸಂದರ್ಭದಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಯಾವುದೇ ಒತ್ತಡಕ್ಕೆ ನಾವು ಮಣಿಯುವುದಿಲ್ಲ, ಸರ್ಕಾರ ಇಲ್ಲದಿದ್ದರೂ ಪರವಾಗಿಲ್ಲ ಎನ್ನತಕ್ಕಂಥ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದನ್ನು ಸನ್ಮಾನ್ಯ ವಾಟಾಳ್‌ನಾಗರಾಜ್‌ರವರಿಗೆ ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮೊದಲು ಕಂಡೀಷನ್‌ಗಳನ್ನು ಹಾಕಿಕೊಂಡು ರಾಷ್ಟ್ರಪತಿಯವರಿಗೆ ಪತ್ರವನ್ನು ಕೊಡದೆ ಕುಳಿತುಕೊಂಡರು ದಯವಿಟ್ಟು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು ಅದೇನೆಂದರೆ, ಕೊನೆಗೆ ಪತ್ರವನ್ನು ರಾಷ್ಟ್ರಪತಿಯವರಿಗೆ ಕಳುಹಿಸುವಂಥ ಸಂದರ್ಭದಲ್ಲಿ ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ, ಪ್ರಧಾನಮಂತ್ರಿ ಸ್ಥಾನ ನಮಗೆ ಅವಶ್ಯಕತೆಯಿಲ್ಲ' ಎಂದು ಹೇಳಿದ ಮೇಲೆ ಕೊನೆಗೆ ಶ್ರೀಮತಿ ಜಯಲಿಲಿತ ಅವರು ವಿಧಿ ಇಲ್ಲದೆ ಪತ್ರವನ್ನು ಕಳುಹಿಸಿದರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನೆನಪು ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಇಲ್ಲಿ ಶ್ರೀಮತಿ ಜಯಲಲಿತ ಅವರು ಹೇಳಿರುವ ಮಾತನ್ನು ಹೇಳುತ್ತಿದ್ದೇನೆಯೇ ಹೊರತು ಕೇಂದ್ರ ಸರ್ಕಾರದಲ್ಲಿನ ಪ್ರಧಾನಮಂತ್ರಿಗಳಾದ ಶ್ರೀವಾಜಪೇಯಿ ಅವರು ಜಯಲಲಿತ ಅವರ ಮಾತಿಗೆ ಒಪ್ಪಿದರು ಎಂದು ಹೇಳುತ್ತಿಲ್ಲ. ಸನ್ಮಾನ್ಯ ಪ್ರಧಾನಿಯವರು ಅವತ್ತಿನ ದಿವಸ 'ಯಾರ ಒತ್ತಡಕ್ಕೂ ಮಣಿಯುವುದಿಲ್ಲ' ಎನ್ನುವ ಮಾತನ್ನು ಹೇಳಿದ್ದಾರೆ. ನಾವು ಇದನ್ನು ಸ್ವಾಗತ ಮಾಡಿದ್ದೇವೆ. ಅದನ್ನು ಇವತ್ತೂ ಕೂಡ ಸ್ವಾಗತ ಮಾಡುತ್ತೇವೆ. ನಮ್ಮ ಮುಖ್ಯಮಂತ್ರಿಗಳು ಕೂಡ ಸ್ವಾಗತ ಮಾಡಿದ್ದಾರೆ. ಇದನ್ನು ಪಕ್ಷಾತೀತವಾಗಿ ನಾವು ಸ್ವಾಗತ ಮಾಡುತ್ತೇವೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಶ್ರೀಮತಿ ಜಯಲಲಿತಾ ಅವರ ಧ್ವನಿ ಹೆಜ್ಜೆ ಹೆಜ್ಜೆಗೂ ಜಾಸ್ತಿ ಆಗಿದೆ. ಈ ಧ್ವನಿ ಜಾಸ್ತಿ ಆದಷ್ಟು ಕೇಂದ್ರ ಸರ್ಕಾರ ಸ್ವಲ್ಪ ಅಲುಗಾಡುತ್ತದೆ. ಕೇಂದ್ರ ಸರ್ಕಾರದ ಅಲುಗಾಟದಲ್ಲಾ ಅಲ್ಲಿ ಶಕ್ತಿಯುತವಾಗಿ ಪ್ರಧಾನಿಯವರು 'ನಮ್ಮ ಸರ್ಕಾರ ಹೋದರೂ ಚಿಂತೆ ಇಲ್ಲ, ಇಂಥ ಮಾತಿಗೆ ನಾನು ಒಪ್ಪುವುದಿಲ್ಲ' ಎನ್ನತಕ್ಕಂಥ ತೀರ್ಮಾನಕ್ಕೆ ಬಂದರೆ ನಾವು ನಿಜವಾಗಿಯೂ ಒಂದು ಸಾವಿರ ಅಲ್ಲ ಲಕ್ಷ ಲಕ್ಷ ಅಭಿನಂದನೆಗಳನ್ನು ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಸರ್ಕಾರಕ್ಕೆ ಸಲ್ಲಿಸುತ್ತೇವೆ. ಅದಿಲ್ಲವೆಂದರೆ, ಆಗ ನಾನು ನಂಜೇಗೌಡರು ಮಾತಿಗೆ ಬರುತ್ತೇನೆ. ನನಗನ್ನಿಸುತ್ತದೆ, ಈ ಸದನದಲ್ಲಿ ಇಬ್ಬರು-ಮೂವರು ಹಿರಿಯ ಸದಸ್ಯರಲ್ಲಿ ಅವರೊಬ್ಬರು. 40 ವರ್ಷಗಳ ಕಾಲ ಈ ರಾಜ್ಯದ ಜಲದ ಬಗ್ಗೆ ಅಪಾರವಾದ ಅನುಭವ ಪಡೆದಿರುವ ಒಬ್ಬ ಧೀಮಂತ ಶಕ್ತಿ. ಅದರ ಬಗ್ಗೆ ಎರಡನೇ ಮಾತಿಲ್ಲ. ಅವರು ಮಾತನಾಡುವಾಗ ಆ ಧ್ವನಿ ನೋಡಿದಾಗ, ನನಗನ್ನಿಸುತ್ತದೆ, ಇಂಥ ಪರಿಸ್ಥಿತಿ ಬಂದಾಗ ನಾವು ರಾಜ್ಯದಲ್ಲಿ ಅಧಿಕಾರದಲ್ಲಿರಬೇಕೇ, ಬೇಡವೇ ಎನ್ನುವ ಧೋರಣೆಯನ್ನು ನಾನು ಸ್ವಾಗತಿಸುತ್ತೇನೆ. ಅದರ ಜೊತೆಗೆ, ಶ್ರೀ ಮೊಯಿಲಿಯವರು ಇವತ್ತು ಹೇಳಿದ ಅವರ ಕಠೋರ ಬದಲಾವಣೆಯನ್ನು ನಾನು ಸ್ವಾಗತಿಸುತ್ತೇನೆ. ನ್ಯಾಯಮಂಡಳಿಯನ್ನು ಬಹಿಷ್ಕಾರ ಮಾಡುವ ಮಟ್ಟಕ್ಕೂ ನಾವು ಹೋಗುತ್ತೇವೆನ್ನುವ ಮಾತನ್ನು ಅವರು ಬಳಸಿದರು. ಅದಕ್ಕಾಗಿ ನಾನು ಸಂತೋಷಪಟ್ಟೆ. ನನ್ನ ನೀತಿಗೆ ಅವರು ಬಂದರೆಂದು ಸಂತೋಷವಾಯಿತು. ನನ್ನ ತೀರ್ಮಾನವೇನು, ನ್ಯಾಯಮಂಡಳಿಯನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕು, ನ್ಯಾಯ ಮಂಡಳಿಯನ್ನು ಒಪ್ಪಬಾರದು, ಎಂದೆಂದೂ ನ್ಯಾಯಮಂಡಳಿಗೆ ಹೋಗಬಾರದು ಎನ್ನುವುದು ನನ್ನ ಏಕ ವ್ಯಕ್ತಿಯ ಸಮರ್ಥನೆ ನೀತಿ ಮೊದಲಿನಿಂದಲೂ ಇದೆ. ನ್ಯಾಯ ಮಂಡಳಿ ಬಗ್ಗೆ ನಿಮ್ಮದು ಮೊದಲಿನಿಂದಲೂ ಸ್ವಲ್ಪ ಹಾಗೂ ಹೀಗೂ ಇದೆ. ನಾನು ಅದನ್ನು ಒಪ್ಪುವುದಿಲ್ಲ. ಇದು ನನ್ನೊಬ್ಬನದೇ ತೀರ್ಮಾನ. ಅದರ ಬಗ್ಗೆ ಅಲ್ಲಿ ಒಳಗೊಳಗೆ ಪ್ರಮೀಳಾರವರು ನನಗೆ ಬೆಂಬಲಕ್ಕಿದ್ದಾರೆ. ಅದನ್ನು ಬಿಟ್ಟರೆ, ಅದರ ಬಗ್ಗೆ ನನಗೆ ಗೊತ್ತು. ಏಕೆಂದರೆ, ಶ್ರೀ ದೇವೇಗೌಡರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ, ಶ್ರೀ ನರಸಿಂಹರಾವ್‌ರವರು ಅಲ್ಲಿ ಪ್ರಧಾನಮಂತ್ರಿಗಳಾಗಿದ್ದಾಗ, 6 ಟಿಎಂಸಿ ನೀರನ್ನು ಬಿಡುವಾಗ ಎಲ್ಲರೂ ಅಂದರೆ ಬಿಜೆಪಿ, ಕಾಂಗ್ರೆಸ್‌ನವರು ಮತ್ತು ಶ್ರೀ ದೇವೇಗೌಡರೂ ಇಲ್ಲಿ ನಮಗೇ ನೀರಿಲ್ಲ, ಆಗುವುದಿಲ್ಲವೆಂದು ಹೇಳಿದರು. ಎಲ್ಲರೂ ಡೆಲ್ಲಿಗೆ ಹೋದರು. ಅಲ್ಲಿಂದ ಮುಖ ಬೇರೆ ಮಾಡಿಕೊಂಡು ಇಲ್ಲಿ ಬಂದು, ಎಲ್ಲಾ ಸಂಘ-ಸಂಸ್ಥೆಗಳ ಸಭೆ ಕರೆದರು, ಎಲ್ಲಾ ವಿರೋಧ ಪಕ್ಷಗಳ ಸಭೆ ಕರೆದರು. ನಂತರ ಒಂದು ತೀರ್ಮಾನಕ್ಕೆ ಬಂದು 6 ಟಿಎಂಸಿ ನೀರು ಕೊಡಬೇಕೆಂದರು. ಶ್ರೀ ಯಡಿಯೂರಪ್ಪನವರ ರೂಂನಲ್ಲಿ ನನಗೂ, ಶ್ರೀನಂಜೇಗೌಡರಿಗೂ ಅಂದು ಯದ್ವಾತದ್ವಾ ಜಗಳ. 40

ವರ್ಷಗಳ ರಾಜಕಾರಣ ಮಾಡಿದ್ದೀರಿ, ನೀರಿಗೋಸ್ಕರ ಹೋರಾಟ ಮಾಡಿದ್ದೀರಿ, ತ್ಯಾಗ ಮಾಡಿದ್ದೀರಿ ಎಂದು ನನಗೂ, ಅವರಿಗೂ ಹೆಚ್ಚು ಕಡಿಮೆ ದೊಡ್ಡ ಯುದ್ಧ ನಡೆಯಿತು. ಆಗ ಪ್ರಮೀಳಾರವರು ಇದ್ದರು. ನಿಮ್ಮ ಹಣೆಬರಹ ಏನಾದರೂ ಮಾಡಿಕೊಳ್ಳಿ ಎಂದು ಜಗಳ ಮಾಡಿ ಹೋದೆ.

ಶ್ರೀ ಎಚ್.ಎನ್. ನಂಜೇಗೌಡ (ಬಸವನಗುಡಿ) : ಡೆಲ್ಲಿಗೆ ಹೋದ ಕಾಲದಲ್ಲಿ ಆಗಿನ ಪ್ರಧಾನಮಂತ್ರಿಗಳು ಭರವಸೆ ಕೊಟ್ಟರು. ಮುಖ್ಯಮಂತ್ರಿಗಳಾಗಿದ್ದ ಶ್ರೀ ದೇವೇಗೌಡರಿಗೆ ರೈಟಿಂಗ್‌ನಲ್ಲಿ ಕಳುಹಿಸಿಕೊಟ್ಟರು. I do believe that this is the only method to resolve the issue. That is Formulation of the National Water Policy Guidelines. ಆ ನಂಬಿಕೆಗೋಸ್ಕರ ನಾನು ತೊಂದರೆಯಾದರೂ ಆಗಲಿ ಎಂದು 6 ಟಿಎಂಸಿ ನೀರು ಕೊಡಲು ಒಪ್ಪಿದ್ದು. ಎಲ್ಲರೂ ಒಪ್ಪಲಿಲ್ಲ. ಶ್ರೀಯಡಿಯೂರಪ್ಪನವರೊಡನೆ ಜಗಳವೂ ಆಯಿತು. ನಾನು, ಹಾಗಲ್ಲ, 6 ಟಿಎಂಸಿ ನೀರು ಹೋದರೂ ಹೋಗಲಿ, ಇನ್ನೊಂದು ಸಾರಿ ಸಫರ್ ಮಾಡೋಣ, ನ್ಯಾಷನಲ್ ವಾಟರ್ ಪಾಲಿಸಿ ಮಾಡುತ್ತಾರೆ, ನಂಬೋಣವೆಂದು ಹೇಳಿದೆ. ಫಾಲೋ ಅಫ್ ಆಕ್ಷನ್ ತೆಗೆದುಕೊಂಡರು. ಯುನೈಟೆಡ್ ಫ್ರಂಟ್ ಗೌರ್ನಮೆಂಟ್ ಬಂದ ಮೇಲೆ ಎಲ್ಲಾ ತಿರುವುಮುರುವು ಆಯಿತು. ನಾನೇನು ಮಾಡುವುದಕ್ಕೆ ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್ : ಆಗ ಪ್ರಮೀಳಾರವರೂ ಇದ್ದರು. ಯಾರೂ ಮಧ್ಯೆ ಬರಲಿಲ್ಲ. ನಾನು ಶ್ರೀ ಯಡಿಯೂರಪ್ಪನವರಿಗೆ, ಶ್ರೀ ನಂಜೇಗೌಡರ ಮಾತು ನಂಬಬೇಡಿ ಎಂದು ಹೇಳಿ ಹೊರಬನ್ನಿ ಸಭಾತ್ಯಾಗ ಮಾಡೋಣವೆಂದು ಹೇಳಿದೆ. ಯಾರೂ ಬರಲಿಲ್ಲ. ನಿಮ್ಮ ಹಣೆಬರೆಹ ಎಂದು ಹೇಳಿ ನಾನೊಬ್ಬನೇ ಹೊರಬಂದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನಿರಂತರವಾಗಿ ಕೇಂದ್ರ ಸರ್ಕಾರದವರ್‍ಯಾರೂ ನಮ್ಮ ಪರವಾಗಿ ಇಲ್ಲ. ಶ್ರೀ ವಿ.ಪಿ. ಸಿಂಗ್‌ರವರು ಪ್ರಧಾನಿಯಾದಾಗಲೂ ನಮಗೆ ಅನ್ಯಾಯವಾಯಿತು, ನ್ಯಾಯಮಂಡಳಿಯ ರಚನೆಯಾಯಿತು, ಶ್ರೀ ಪಿ.ವಿ. ನರಸಿಂಹರಾವ್‌ರವರು ಪ್ರಧಾನಿಯಾದಾಗ ಗೆಜೆಟ್‌ನಲ್ಲಿ ಪ್ರಕಟಣೆಯಾಯಿತು. ಶ್ರೀ ದೇವೇಗೌಡರು ಪ್ರಧಾನಿಗಳಾದಾಗಂತೂ ಯದ್ವಾತದ್ವಾ ಅನ್ಯಯವಾಯಿತು. ಅದರ ಬಗ್ಗೆ ಎರಡನೇ ಮಾತೇ ಇಲ್ಲ. ಅವರ ಕಾಲದಲ್ಲಾದಷ್ಟು ಅನ್ಯಾಯ ಇನ್ಯಾರ ಕಾಲದಲ್ಲೂ ಆಗಲಿಲ್ಲ. ಶ್ರೀ ಗುಜ್ರಾಲ್‌ರವರು ಬಂದ ಮೇಲೆ ಕರಡು ನಿಯಮ ತಂದರು. ಅದನ್ನು ನೋಡಿದರೆ ಪ್ರತಿ ಪ್ರಧಾನಿಮಂತ್ರಿಗಳೂ ನಮ್ಮನ್ನು ಕಾಲಕಸದಂತೆ ಕಂಡಿದ್ದಾರೆ. ಎಷ್ಟು ಯೋಗ್ಯತೆ ಇದೆಯೋ ಆ ರೀತಿಯಲ್ಲಿ ಕೇಂದ್ರ ಸರ್ಕಾರದವರು ನಮ್ಮನ್ನು ಕಂಡಿದ್ದಾರೆ. ಇದಕ್ಕೇನು ಕಾರಣ? ನಮ್ಮಲ್ಲಿ ಕೇಂದ್ರ ಸರ್ಕಾರವನ್ನು ಎದುರಿಸುವ ರಾಜಕೀಯ ಶಕ್ತಿ ಇವತ್ತು ನಮ್ಮಲ್ಲಿ ಕಡಿಮೆಯಾಗಿದೆ. ತಮಿಳುನಾಡಿನ ಜಯಲಲಿತಾರವರು ಸಮುದ್ರದ ಪಕ್ಕದಲ್ಲಿ ಸತ್ಯಾಗ್ರಹ ಮಾಡುತ್ತೇನೆಂದು ಹೇಳಿದರೆ, ರಾತ್ರೋರಾತ್ರಿ ಪ್ರಧಾನಮಂತ್ರಿಯವರು ನೀರಾವರಿ ಸಚಿವರನ್ನು ರಾತ್ರಿ 12.45 ಗಂಟೆಯಲ್ಲಿ ಕಳುಹಿಸುತ್ತಾರೆ. ಒಂದು ಗಂಟೆಗೆ ಮೊಯಿಲಿಯವರನ್ನು ಭೇಟಿ ಮಾಡುವುದಕ್ಕೆ ಬರುತ್ತಾರೆ. ನಮ್ಮ ನಿಯೋಗ ಹೋಗಿ ಶ್ರೀ ನರಸಿಂಹರಾವ್‌ರವರನ್ನು ಕಾಡಿಬೇಡಿ, ಮಧ್ಯಂತರ ಆದೇಶವನ್ನು ಗೆಜೆಟ್‌ನಲ್ಲಿ ಪ್ರಕಟಣೆ ಮಾಡಬೇಡಿ ಎಂದು ಹೇಳಿದರೂ, ನಾವು ಅಲ್ಲಿಂದ ಬರುವುದರೊಳಗೆ ಗೆಜೆಟ್‌ನಲ್ಲಿ ಪ್ರಕಟಣೆ

ಆಗೇ ಹೋಯಿತು. ಬೇರೆ ಮಾತೇ ಇಲ್ಲ. ಶ್ರೀ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆ, ಆದಮೇಲೆ, ಅವರ ಕಳಕಳಿ, ನ್ಯಾಯ ಮಂಡಳಿ ಬೇಕಾಗಿಲ್ಲ ಎಂದು ಇತ್ತು. ನಂತರ ನನ್ನ ಧ್ವನಿ ಇತ್ತು. ನ್ಯಾಯಮಂಡಳಿ ಬೇಕಾಗಿಲ್ಲವೆಂದು ನಾನು ಹೇಳುತ್ತಿದ್ದ ಧ್ವನಿಯಲ್ಲಿ, ಶ್ರೀ ದೇವೇಗೌಡರ ಧ್ವನಿಯಲ್ಲೂ ಬದಲಾವಣೆಯಾಗಿರಲಿಲ್ಲ. ಮುಖ್ಯಮಂತ್ರಿಗಳಾದ ಮೇಲೂ ಬದಲಾವಣೆಯಾಗಿರಲಿಲ್ಲ. ಕೊನೆ ಕೊನೆಗೆ, ಒಂದು ರೀತಿಯ ಬದಲಾವಣೆಯಾದರು. ಆದರೆ, ಅದಕ್ಕೆ ನಾನಾ ರೀತಿಯ ಪಕ್ಷಗಳು, ಶ್ರೀ ಕರುಣಾನಿಧಿಯವರ ಬೆಂಬಲ, ಆಂಧ್ರಸರ್ಕಾರದ ಬೆಂಬಲ, ಆ ಬೆಂಬಲಕ್ಕೋಸ್ಕರ ಒಂದು ರೀತಿಯಲ್ಲಿ ಕರ್ನಾಟಕವನ್ನು ಮಲತಾಯಿ ಧೋರಣೆಯಲ್ಲಿ ನೋಡಿದರು. ಯಾರನ್ನೂ ಸ್ವಂತ ತಾಯಿ ಎಂದು ನಂಬಿದ್ದೆವೋ, ಯಾರನ್ನು ಮಣ್ಣಿನ ಮಗ, ಯಾರನ್ನು ಕನ್ನಡಿಗರ ಪ್ರಧಾನಿ ಎಂದು ನಂಬಿದ್ದೆವೋ ಅವರೂ ಸಹ ನಮಗೆ ಕೈ ಕೊಟ್ಟರು. ಆದುದರಿಂದ ನನಗನ್ನಿಸುತ್ತದೆ, ಎಲ್ಲಾ ಪ್ರಧಾನಿಗಳೂ ಈ ರಾಜ್ಯವನ್ನು ಕಡೆಗಣಿಸಿದ್ದಾರೆ. ಅದಕ್ಕೋಸ್ಕರ ನಾನು ನೇರವಾಗಿ ಹೇಳುತ್ತಿದ್ದೇನೆ, ಒಂದು ಹಂತದಲ್ಲಿ ನಾವು ತೀರ್ಮಾನಕ್ಕೆ ಬರಬೇಕು. ಶ್ರೀ ಕರುಣಾನಿಧಿಯವರು ಮಾತುಕತೆಗೆ ಬರುವುದಿಲ್ಲವೆಂದಿದ್ದಾರೆ. ನಾವೂ ಹೋಗಬೇಕಾಗಿಲ್ಲ. ಈ ಸದನದಲ್ಲಿ 3 ಸಾರಿ ನಿರ್ಣಯ ಮಾಡಿದ್ದೆವು. ನ್ಯಾಯ ಮಂಡಳಿಯ ತೀರ್ಪನ್ನು ಜಾರಿ ಮಾಡುವುದಕ್ಕೆ ಈ ಸದನದ ವಿರೋಧವಿದೆ, ನ್ಯಾಯಮಂಡಳಿ ಮುಂದೆ ಭಾಗವಹಿಸುವುದಕ್ಕೆ ಹೋಗುವುದಿಲ್ಲ ಈ ರೀತಿಯ ವೀರಾವೇಶದ ನಿರ್ಣಯವನ್ನು ಮಾಡಿದ್ದೆವು. ಆದರೆ, ಆ ನಿರ್ಣಯದ ಗತಿ ಏನಾಯಿತು? ಇವತ್ತು ಈ ಸದನದಲ್ಲಿ ಮತ್ತೊಂದು ನಿರ್ಣಯ ಮಾಡಿ ಎಂದು ಮಾತನಾಡುತ್ತಿದ್ದೇವೆ. ಆ ನಿರ್ಣಯವೇನಾಯಿತು? ಶ್ರೀ ಬಂಗಾರಪ್ಪನವರ ಕಾಲದಲ್ಲಿ, ಶ್ರೀ ವೀರಪ್ಪಮೊಯಿಲಿಯವರ ಕಾಲದಲ್ಲಿ, ಶ್ರೀ ದೇವೇಗೌಡರ ಕಾಲದಲ್ಲೂ ನಿರ್ಣಯಗಳು ಆದುವು. ಆ ನಿರ್ಣಯಗಳೇನಾದವು? ಆ ನಿರ್ಣಯದ ಪ್ರತಿ ತೆಗೆದು ನೋಡಿ. ಅದರಲ್ಲಿ ಸ್ಪಷ್ಟವಾಗಿದೆ, ನ್ಯಾಯ ಮಂಡಳಿಯನ್ನು ಬಹಿಷ್ಕರಿಸಬೇಕು ಎಂಬ ಪದವಿಲ್ಲದಿದ್ದರೂ, ಬಹಿಷ್ಕರಿಸಬೇಕೆನ್ನಲು ಏನೇನು ಬೇಕು ಅದೆಲ್ಲವೂ ಆ ನಿರ್ಣಯದಲ್ಲಿದ್ದೆ. ಆ ನಿರ್ಣಯಕ್ಕೆ ಇವತ್ತೇನಾಗಿದೆ? ಅದರ ಬಗ್ಗೆ ಏನೂ ಗೊತ್ತಾಗುತ್ತಿಲ್ಲ. ನಾವು ನ್ಯಾಯ ಮಂಡಳಿಯ ತೀರ್ಪನ್ನು ಒಪ್ಪುವುದಿಲ್ಲ. ಕೇಂದ್ರಸರ್ಕಾರದ ಮಾತನ್ನು ಒಪ್ಪುವುದಿಲ್ಲ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಒಪ್ಪುವುದಿಲ್ಲವೆಂದು ಹೇಳುತ್ತೇವೆ. ನಾವು ನಮ್ಮ ಹಕ್ಕಿಗಾಗಿ, ಕರ್ನಾಟಕದ ಹಕ್ಕಿಗಾಗಿ, ಕಾವೇರಿಯ ಹಕ್ಕಿಗಾಗಿ, ಕನ್ನಡಿಗರ ಹಕ್ಕಿಗಾಗಿ ಒಂದು ಹನಿ ನೀರನ್ನೂ ಕೊಡುವುದಿಲ್ಲ. ಸರ್ವೋಚ್ಚ ನ್ಯಾಯಾಲಯ, ನ್ಯಾಯ ಮಂಡಳಿಯ ತೀರ್ಪನ್ನು ಒಪ್ಪಬೇಕೆಂದು ತೀರ್ಪು ನೀಡಿದರೂ ಇಡೀ ಕರ್ನಾಟಕದ ಜನ ಒಪ್ಪುವುದಿಲ್ಲವೆಂದು ಹೇಳುತ್ತೇವೆ. ಏನು ಮಾಡುತ್ತಾರೆ? ಸರ್ಕಾರವನ್ನು ವಜಾ ಮಾಡುತ್ತಾರೆಯೇ? ವಜಾ ಮಾಡಲಿ. ವೀರರಾಗಿ ಹೋಗಲಿ. ತಪ್ಪೇನೂ ಇಲ್ಲ. ಮತ್ತೊಂದು ಸರ್ಕಾರ ಬರಲಿ. ಎಷ್ಟು ಸರ್ಕಾರಗಳನ್ನು ವಜಾ ಮಾಡುತ್ತಾರೆ? ಇದೇನು ಹುಡುಗಾಟವೇ? ನಿಮಗೆ ಶಕ್ತಿ ತಾಕತ್ತು ಇದ್ದರೆ, ಈ ತೀರ್ಮಾನಕ್ಕೆ ನೀವು ಬನ್ನಿ. ಕೇಂದ್ರ ಸರ್ಕಾರದೊಡನೆ ಮಾತುಕತೆಯನ್ನು ಮುಚ್ಚಿ, ತಮಿಳುನಾಡಿನ ಜೊತೆಯಲ್ಲಿ ಮಾತುಕತೆ ಮುಚ್ಚಿ, ಸರ್ವೋಚ್ಚ ನ್ಯಾಯಾಲಯ ಇರಬಹುದು, ಆ ನ್ಯಾಯಾಲಯದ ಬಗ್ಗೆ, ನ್ಯಾಯಾಧೀಶರ ಬಗ್ಗೆ, ತೀರ್ಪುಗಳ ಬಗ್ಗೆ ನನಗೆ ಗೌರವವಿದೆ. ನಮ್ಮ ಕತ್ತೇ ಹೋಗುವಾಗ, ಕನ್ನಡಿಗರನ್ನೇ ನೇಣಿಗೆ ಹಾಕುವಂತಹ ತೀರ್ಪು ನಮಗೆ ಬರುವುದಾದರೆ ಅದನ್ನು ನಾವು

ಒಪ್ಪುವುದಿಲ್ಲ. ಈ ಸದನದ ಎಲ್ಲಾ ಸದಸ್ಯರೂ ನಂಜೇಗೌಡರೊಬ್ಬರೇ ಅಲ್ಲ. ಎಲ್ಲರೂ ರಾಜೀನಾಮೆ ಕೊಡೋಣ. ನಮ್ಮ ಲೋಕಸಭಾ ಸದಸ್ಯರು ಅವರು ಬಿಜೆಪಿ ಇರಬಹುದು, ಕಾಂಗ್ರೆಸ್ ಇರಬಹುದು, ಯಾರೇ ಇರಲಿ ಅವರ ರಾಜೀನಾಮೆ ಕೊಡಿಸೋಣ. ಕೇಂದ್ರದ ಮಂತ್ರಿಗಳ ರಾಜೀನಾಮೆ ಕೊಡಿಸೋಣ. ಮಿಲಿಟರಿ ತಂದು ನೀರನ್ನು ತೆಗೆದುಕೊಂಡು ಹೋಗಿ ಕೊಡುತ್ತಾರೆಯೇ? ಕೇಂದ್ರದ ಮಂತ್ರಿ ಮಂಡಲವಿದೆ ಎಂದು, ಯಾರೇ ಪ್ರಧಾನಿ ಇರಬಹುದು, ನಮಗೇನು ಮಿಲಿಟರಿ ತಂದು ಕನ್ನಂಬಾಡಿ ಹತ್ತಿರ ನಿಲ್ಲಿಸಿ ಬಾಗಿಲು ತೆಗೆದು ತಮಿಳುನಾಡಿಗೆ ನೀರು ಬಿಡುವ ಶಕ್ತಿ ಯಾವ ಸರ್ಕಾರಕ್ಕೂ ಇಲ್ಲ. ನಾನು ಘೋಷಣೆ ಮಾಡುತ್ತಿದ್ದೇನೆ. ಇಡೀ ನಾಡಿನ ಜನ ನಮ್ಮ ಹಕ್ಕಿಗಾಗಿ ನಿಲ್ಲಬೇಕಾಗಿದೆ. ರಾಜಕೀಯದ ಹೋರಾಟ, ತಂತ್ರಗಾರಿಕೆ ಬೇಡ. ವಕೀಲರ ವಾದಗಳ ಕತೆ ಮುಗಿದಿದೆ. ಅದರ ಬಗ್ಗೆ ಹೇಳುವುದಕ್ಕೆ ಹೋದರೆ ಇವತ್ತು ದೊಡ್ಡ ದುರಂತ, ಕಣ್ಣೀರಿನ ಕತೆ, ಯಾವ ಯಾವ ರೀತಿಯಲ್ಲಿ ವಾದ ನಡೆದಿದೆ, ಏನೇನಾಗಿದೆ, ಯಾವ್ಯಾವ ರೀತಿಯಲ್ಲಿ ಪ್ರಮಾಣಪತ್ರ ಸಲ್ಲಿಸಿದ್ದೇವೆ, ಎಷ್ಟೆಷ್ಟು ನಡೆದಿದೆ, ಬಿಳಿ ಆನೆ ರೀತಿ ಬೆಳೆಯುತ್ತಿದೆ. ಡೆಲ್ಲಿ ಬಿಳಿ ಆನೆ ರೀತಿ ಬೆಳೆಯುತ್ತಿದೆ. ನನಗೆ ಅದರ ಬಗ್ಗೆ ನಂಬಿಕೆಯೂ ಇಲ್ಲ. ಒಂದೇ ನಂಬಿಕೆಯಿಂದ ನಾನು ಹೇಳುತ್ತಿರುವುದು, ಏನೆಂದರೆ ನ್ಯಾಯಮಂಡಳಿಯನ್ನು ನಾವು ತಿರಸ್ಕರಿಸಿದ್ದೇವೆ, ನ್ಯಾಯಮಂಡಳಿಯ ಒಂದು ತೀರ್ಪನ್ನೂ ನಾವು ಒಪ್ಪುವುದಿಲ್ಲ. ಅಂತಿಮವಾಗಿ, ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನೂ ಸಹ ನಾವು ಒಪ್ಪುವುದಕ್ಕಾಗುವುದಿಲ್ಲ. ನಾವು ಇವತ್ತು ಹೇಳುತ್ತೇವೆ, ನಮಗೇ ನೀರಿಲ್ಲ ಎಂದಾಗ, ನೀರು ಬಿಡಿ ಎಂದು ಹೇಳಿದರೆ ಒಳ್ಳೆಯದಲ್ಲ. ಆ ದೃಷ್ಟಿಯಿಂದ ಕರ್ನಾಟಕದ ಜನ ಸಿದ್ಧರಾಗಬೇಕು, ರಾಜಕಾರಣಿಗಳು ಸಿದ್ಧರಾಗಬೇಕು, ರಾಜಕೀಯದ ಉತ್ತರವನ್ನೇ ಕೊಡಬೇಕು. ಶ್ರೀ ಕರುಣಾನಿಧಿಯವರಾಗಲೀ, ಕು. ಜಯಲಲಿತಾರವರಾಗಲೀ ಹೇಳುವ ಗೊಡ್ಡು ಬೆದರಿಕೆಗೆ ನಾವು ಖಂಡಿತವಾಗಿಯೂ ಎಂದೆಂದೂ ಮಣಿಯುವುದಕ್ಕೆ ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ನಾವು ಬರಬೇಕು ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ನಾನು ಎಂದೆಂದೂ ನ್ಯಾಯ ಮಂಡಳಿ ಬಗ್ಗೆ ಬೆಲೆ ಕೊಟ್ಟವನಲ್ಲ. ನ್ಯಾಯ ಮಂಡಳಿಯನ್ನು ರದ್ದು ಮಾಡಬೇಕಾದುದು ಕರ್ತವ್ಯವಾಗಿದೆ. ಆ ದೃಷ್ಟಿಯಿಂದ ಎಲ್ಲಾ ಪಕ್ಷಗಳೂ ಆ ತೀರ್ಮಾನಕ್ಕೆ ಬರಬೇಕು. ಅಂತಿಮವಾಗಿ ಕರ್ನಾಟಕ ಸರ್ಕಾರವೇ ಅದೇ ತೀರ್ಮಾನಕ್ಕೆ ಬರಬೇಕೇ ಹೊರತು ಬೇರೆ ಮಾತೇ ಇಲ್ಲ ಎನ್ನುವ ಮಾತನ್ನು ಹೇಳೇ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಶ್ರೀ ನಂಜೇಗೌಡರು ಒಂದು ಮಾತನ್ನು ಹೇಳಿದ್ದಕ್ಕೆ ನನಗೆ ಸಂತೋಷವಾಯಿತು. ನಿಜ. ಏಕೆ ಇರಬೇಕು ಇಲ್ಲಿ? ಯಾವ ಉದ್ದೇಶಕ್ಕಾಗಿ ನಾವೆಲ್ಲಾ ಇರಬೇಕಾಗಿದೆ. ರಾಜ್ಯದ ಜನತೆಗೆ ಮರಣ ಶಾಸನವಾಗಿ, ಕತ್ತಿಗೆ ಹಗ್ಗ ಹಾಕುವುದಕ್ಕೆ ಬಂದಿರುವಾಗ, ಈ ಸದನ ಏಕಿರಬೇಕು? ಯಾವ ಉದ್ದೇಶಕ್ಕೆ ಇರಬೇಕು? ಈ ರಾಜ್ಯದ ಜನತೆಯ ಪರವಾಗಿ ನಾವು ನಿಲ್ಲುವುದಕ್ಕೆ ಸದಾ ಸಿದ್ಧಾರಾಗಿರಬೇಕು ಎನ್ನುವ ಮಾತನ್ನು ನಾನು ಸದನದಲ್ಲಿ ಹೇಳುತ್ತಾ, ಮಾನ್ಯ ಕರುಣಾನಿಧಿಯವರಿಗೆ ನನ್ನ ಒಂದು ಮಾತು ಏನೆಂದರೆ, ನೀವು ಮಾತುಕತೆಗೆ ಕರೆದರೆ ಬರುವುದಿಲ್ಲ, ನಮಗೆ ನಿಮ್ಮ ಮಾತುಕತೆ ಬೇಕಾಗಿಲ್ಲ, ನಾವು ಇದನ್ನು ವಿರೋಧಿಸುತ್ತೇವೆ, ಹಾಗೂ ಕರುಣಾನಿಧಿ ಮತ್ತು ಜಯಲಲಿತಾರವರ ಬ್ಲಾಕ್‌ಮೇಲ್ ವಿರುದ್ಧ ಇಡೀ ರಾಜ್ಯಾದ್ಯಂತ ಮೂಲೆಮೂಲೆಗಳಿಂದ ಚಳುವಳಿ ನಡೆಸಿ ವಿರೋಧಿಸುತ್ತೇವೆ. ಇದರ ಬಗ್ಗೆ ಬೇರೆ ಮಾತೇ ಇಲ್ಲ ಎಂದು ನೇರವಾಗಿ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ನಾನು ನಿನ್ನೆ ಇದೇ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ನನ್ನ ಉದ್ದೇಶ ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ನಿನ್ನೆ ಇದೇ ವಿಚಾರದ ಬಗ್ಗೆ ಮಾತನಾಡುತ್ತಾ, ದಿನಾಂಕ 28-11-97ರಂದು ನಡೆದ ಅಂತರ್‌ರಾಜ್ಯ ಮಂಡಳಿಯ ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ ಭಾಗವಹಿಸಿ ಮಾತನಾಡಿದ ಮಾನ್ಯ ಸಿದ್ದರಾಮಯ್ಯನವರು, ಅಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಕಾವೇರಿ ಜಲವಿವಾದದ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರ ಅನುಸರಿಸಬೇಕಾಗಿರುವ ವಿಧಿವಿಧಾನಗಳು ತಪ್ಪಾಗಿವೆ, ಆದರಿಂದಾಗಿ ಈ ರೀತಿ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದರು. ಕರ್ನಾಟಕಕ್ಕೆ ಅನ್ಯಾಯವಾಗಿರುವ ಸೂಚನೆಗಳು ಇರುವುದರಿಂದ, ದಯವಿಟ್ಟು ಇದಕ್ಕೆ ಸರ್ಕಾರ ಸ್ಪಷ್ಟವಾದ ಉತ್ತರ ಕೊಡಬೇಕೆಂದು ನಾನು ನಿನ್ನೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದೆ. ನಂತರ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ ಮೇಲೆ, ಈಗ ಚರ್ಚೆ ನಡೆಯುತ್ತಿದೆ. ಬಹುಶಃ ಸುಮಾರು ಮೂರೂವರೆ ವರ್ಷಗಳಿಂದ ಈ ಸದನದಲ್ಲಿ ಕಾವೇರಿ ವಿವಾದದ ಬಗ್ಗೆ ಚರ್ಚೆ ನಡೆದಷ್ಟು ಬೇರೆ ಯಾವುದೇ ವಿಷಯದ ಬಗ್ಗೆ ಚರ್ಚೆಯಾಗಿರುವ ನಿದರ್ಶನವಿಲ್ಲ. ಇಂತಹ ಚರ್ಚೆಯ ಸಮಯದಲ್ಲಿ ಹಲವಾರು ವಿಷಯಗಳು ಬಂದಿವೆ. ಕರ್ನಾಟಕ ರಾಜ್ಯ ಕಾವೇರಿ ಜಲ ವಿವಾದವು ಒಂದು ರಾಜಕೀಯವಾಗಿ ನಡೆಯುತ್ತಿದೆ, ಇದರಲ್ಲಿ ಎಲ್ಲರೂ ಇದ್ದಾರೆ, ಇಂಥವರು ಇಲ್ಲವೆಂದು ಹೇಳುವ ಪ್ರಶ್ನೆ ಇಲ್ಲ. ಇದರಲ್ಲಿ ನಾವು ವೀರಾವೇಶದ ಮಾತುಗಳನ್ನಾಡಿರುವ ಪರಿಣಾಮವಾಗಿ, ಭಾವವೇಶದ ಮಾತುಗಳನ್ನಾಡಿರುವ ಪರಿಣಾಮವಾಗಿ ಹಲವಾರು ಸಮಸ್ಯೆಗಳನ್ನು ನಾವೇ ಎದುರಿಸಿ, ಆ ಸಮಸ್ಯೆಗಳನ್ನು ಸಿಕ್ಕಿ ಹಾಕಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಏಕೆಂದರೆ ಎರಡು ರಾಜ್ಯಗಳ ಮಧ್ಯ ಇರತಕ್ಕಂಥ ಜಲವಿವಾದವನ್ನು ಹಾದಿಬೀದಿಯಲ್ಲಿ ತೀರ್ಮಾನ ಮಾಡುವುದಕ್ಕೆ ಸಾಧ್ಯವಿಲ್ಲ. ಈ ವಿವಾದವನ್ನು ಬಗೆಹರಿಸಬೇಕಾದರೆ ಸೌಹಾರ್ದ ವಾತಾವರಣದಲ್ಲಿ ಕುಳಿತು ಚರ್ಚೆ ಮಾಡುವುದೊಂದೇ ಈಗ ಉಳಿದಿರುವ ಏಕೈಕ ಮಾರ್ಗ. ಆದರೆ ಅವರು ಹೇಳುವಂತಹ ಮಾತು ಇವತ್ತು ಬೇರೆ ಸಂದರ್ಭವನ್ನು ಸೃಷ್ಟಿಮಾಡುವ ರೀತಿಯಲ್ಲಿ ಕಂಡುಬರುತ್ತಿದೆ. ಬ್ಲಾಕ್‌ಮೇಲ್ ರಾಜಕಾರಣದಿಂದಾಗಿ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಹೇಳದೇ ಬೇರೆ ವಿಧಿ ಇಲ್ಲ. ಇದು ಎಷ್ಟರ ಮಟ್ಟಿಗೆ ನಿಜ ಎಂಬುದನ್ನು ಇತಿಹಾಸ ತೀರ್ಮಾನ ಮಾಡಬೇಕಾಗುತ್ತದೆ. ಆದರೆ ಒಂದಂತೂ ಸತ್ಯ. ಅದೇನೆಂದರೆ, 1989ನೇ ಇಸವಿಯಿಂದ ಈಚೆಗೆ ದೇಶದಲ್ಲಿ ಉಂಟಾದ ರಾಜಕೀಯ ಬದಲಾವಣೆಯಿಂದ ಕೇಂದ್ರಸರ್ಕಾರದಲ್ಲಿರುವ ಹಲವಾರು ಸರ್ಕಾರಗಳು ಬಲಿಯಾಗಿರುವುದು ನಿಜ. ಬಹುಶಃ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರಕ್ಕೆ ಈ ಒತ್ತಡಗಳು ಇವೆ. ಈ ಒತ್ತಡಗಳು ಯಾವರೀತಿಯಲ್ಲಿ ಪರಿಹಾರವಾಗುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಇವತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಡ ಇಲ್ಲವೆಂದು ಯಾರು ಹೇಳುವಂತಹ ಪರಿಸ್ಥಿತಿಯಲ್ಲಿಲ್ಲ. ಆದರೆ ಅದನ್ನು ಹೇಗೆ ನಿಭಾಯಿಸುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ. ಈಗಾಗಲೇ ಇದರ ಬಗ್ಗೆ ತೀರ್ಮಾನ ಹೇಳುವುದಕ್ಕಾಗುವುದಿಲ್ಲ. 89ರಿಂದ ಕರ್ನಾಟಕ ರಾಜ್ಯಕ್ಕೆ ರಾಜಕೀಯವಾಗಿ ಕಾವೇರಿ ಜಲ ವಿವಾದದಲ್ಲಿ ಅನ್ಯಾಯವಾಗಿದೆ ಎಂದು ಹೇಳತಕ್ಕಂಥ ನಾವು, 1932ರಲ್ಲಿ ಇದಕ್ಕೆ ಒಂದು ಒಪ್ಪಂದವಾಯಿತು, 1972ರಲ್ಲಿ ಆ ಒಪ್ಪಂದ ಮುಗಿಯಿತು, ಅಂದರೆ 50 ವರ್ಷಗಳ ನಂತರ ಆಗ ಮಾಡಿಕೊಂಡಿರುವ

ಒಪ್ಪಂದ ಮುಗಿಯಿತು. 1972ರಿಂದ 1989ರ ವರೆವಿಗೂ ಹೊಸ ಒಪ್ಪಂದ ಮಾಡಿಕೊಳ್ಳುವುದಕ್ಕೆ ಬ್ಲಾಕ್‌ಮೇಲ್ ರಾಜಕಾರಣ ಇಲ್ಲದಿರುವ ಸಂದರ್ಭದಲ್ಲಿ ಏನು ಪ್ರಯತ್ನ ನಡೆಯಿತು? ಇದಕ್ಕೆ ಕರ್ನಾಟಕ ರಾಜ್ಯವೇ ಉತ್ತರ ಹೇಳಬೇಕಾಗುತ್ತದೆ. ಆದ್ದರಿಂದ, ಹಲವಾರು ಪರಿಸ್ಥಿತಿಗಳಲ್ಲಿ ರಾಜಕೀಯ ಒತ್ತಡಗಳಿಂದ ಈ ಕಾವೇರಿ ಜಲವಿವಾದ ಕೂಡ ರಾಜಕೀಯವಾಗಿ ಪರಣಮಿಸಿದೆ ಎಂದು ಹೇಳುವುದರಲ್ಲಿ ಬೇರೆ ಮಾತೇ ಇಲ್ಲ. ಈ ಅಂತರರಾಜ್ಯ ಜಲಮಂಡಳಿಯ ಸಭೆಯಲ್ಲಿ ನಿಜವಾಗಿ ಆಗಿರುವುದು ಏನು? ಅಂತರರಾಜ್ಯ ಜಲ ಮಂಡಳಿಯ ಸಭೆಯಲ್ಲಿ ಆಯಾಯಾ ರಾಜ್ಯದವರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳುತ್ತಾರೆ. ಅದನ್ನು ರಾಜ್ಯಮಂಡಳಿ ತೀರ್ಮಾನ ಒಪ್ಪುವುದು, ಬಿಡುವುದು, ಅದು ಬೇರೆ ವಿಷಯ. ರಾಜ್ಯ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಹೇಳುವಂತಹ ಸನ್ನಿವೇಶದಲ್ಲಿ ತಮ್ಮ ಅಭಿಪ್ರಾಯವನ್ನು ಅಂತರರಾಜ್ಯಮಂಡಳಿಯವರು ಒಪ್ಪಿಕೊಂಡಿದ್ದಾರೋ ಅಥವಾ ಒಪ್ಪಿಕೊಂಡಿಲ್ಲವೋ ಎಂಬುದನ್ನು, ಚರ್ಚೆ ಮಾಡಿ, ಈ ಸರ್ಕಾರದ ಪರವಾಗಿ ಆ ಸಭೆಯಲ್ಲಿ ಭಾಗವಹಿಸಿದಂಥವರು ಗಮನಿಸಬೇಕಾಗಿತ್ತು. ಆದರೆ ಇದನ್ನು ಮಾಡದೇ ಬೇಜವಾಬ್ದಾರಿಯನ್ನು ಮಾಡಿರುವುದು ಸರ್ಕಾರದ ಮೊಟ್ಟಮೊದಲನೆಯ ತಪ್ಪು. ಅಂತರರಾಜ್ಯ ಮಂಡಳಿಯಲ್ಲಿಯಾಗಿರುವ ನಿರ್ಣಯಕ್ಕೆ ಯಾವುದೇ ರೀತಿಯ ಲೀಗಲ್ ಸ್ಯಾಂಕ್ಟಿಟಿ ಇಲ್ಲ. ಇದಕ್ಕೆ ಯಾವುದೇ ರೀತಿಯ ಕಾನೂನು ಬದ್ಧವಾಗಿಲ್ಲ. ಅದು ಮ್ಯಾನ್‌ಡೇಟರಿ ಅಲ್ಲ, ಇಟ್ ಈಎಸ್ ಓನ್ಲಿ ರೆಕಮೆಂಡೇಟರಿ. ಅಂತರ್ ರಾಜ್ಯ ಮಂಡಳಿಯ ಆ ತೀರ್ಮಾನಗಳನ್ನು, ಸಲಹೆಗಳನ್ನು ಮತ್ತು ತೀರ್ಮಾನಗಳ ರೆಕಮೆಂಡೇಷನ್‌ಗಳನ್ನು ಪಾರ್ಲಿಮೆಂಟ್ ಮುಂದೆ ಹೋಗಬೇಕಾಗಿತ್ತು. ಅದು ಅಲ್ಲಿ ಒಪ್ಪಿಕೊಂಡ ನಂತರ ಅದು ಕಾನೂನುವಾಗುತ್ತದೆಯೇ ವಿನಹ ಅಂತರ್ ರಾಜ್ಯಮಂಡಳಿಯಲ್ಲಿ ನಿರ್ಣಯವಾದ ತಕ್ಷಣ ಅದು ಕಾನೂನು ಆಗುವುದಕ್ಕೆ ಸಾಧ್ಯವಿಲ್ಲ. ದಿನಾಂಕ 28-11-97ರಂದು ಅಂತರ್‌ರಾಜ್ಯಮಂಡಳಿಯ ಸಭೆ ನಡೆದಿದೆ. ನಮ್ಮ ರಾಜ್ಯ ಸರ್ಕಾರಕ್ಕೆ ದಿನಾಂಕ 7-4-98ರಂದು ಆ ನಿರ್ಣಯ ಬಂದಿದೆ. ಇವತ್ತು 16ನೇ ತಾರೀಖು. 7ನೇ ತಾರೀಖಿಗೆ ರಾಜ್ಯ ಸರ್ಕಾರಕ್ಕೆ ಆ ನಿರ್ಣಯ ಬಂದಾದಮೇಲೆ ಇವರು ಜವಾಬ್ದಾರಿಯುತವಾಗಿ ಮೊಟ್ಟಮೊದಲನೆಯದಾಗಿ ಮಾಡಬೇಕಾದ ಕೆಲಸ ಏನೆಂದರೆ, ತಕ್ಷಣವೇ ಅಂತರ್‌ರಾಜ್ಯಮಂಡಳಿಯ ಕಾರ್ಯದರ್ಶಿಯವರಿಗೆ ಹಾಗೂ ಮಾನ್ಯ ಪ್ರಧಾನಮಂತ್ರಿಗಳಿಗೆ ಪತ್ರ ಬರೆಯಬೇಕಾಗಿತ್ತು. ಏನು ಪತ್ರ ಬರೆಯಬೇಕು ಎಂದರೆ "ಅಂತರ್ ರಾಜ್ಯಮಂಡಳಿಯಲ್ಲಿ ನಮ್ಮ ರಾಜ್ಯ ಸರ್ಕಾರದಪರವಾಗಿ ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇವೋ ಆ ಅಭಿಪ್ರಾಯವನ್ನು ಈ ನಿರ್ಣಯದಲ್ಲಿ ಒಂದು ಅಕ್ಷರ ಕೂಡ ಹೇಳದೆ, ನಾವು ಒಪ್ಪಿದ್ದೇವೆ ಎನ್ನುವ ರೀತಿಯಲ್ಲಿ ಬರೆದಿದ್ದೀರಿ, ಇದಕ್ಕೆ ನಾವು ಬದ್ಧರಲ್ಲ, ನಾವು ಈ ರೀತಿ ಹೇಳಿಲ್ಲ, ನಮ್ಮ ಅಭಿಪ್ರಾಯ ಇದು ಅಲ್ಲ, ಆದರೂ ಕೂಡ ನೀವು ಸ್ಥಾಯಿ ಸಮಿತಿಯ ನಿರ್ಣಯವೆಂದು ಕಳುಹಿಸಿದ್ದೀರಿ, ಇದಕ್ಕೆ ನಾವು ಒಪ್ಪುವುದಿಲ್ಲವೆಂದು, ತಕ್ಷಣವೇ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆಯಬೇಕಾಗಿತ್ತು. ಇದು ತಾವು ಮೊದಲು ಮಾಡಬೇಕಾದ ಕರ್ತವ್ಯ. ಇದು ಯಾವುದನ್ನು ಮಾಡದೇ ಪತ್ರಿಕೆಗಳಲ್ಲಿ ಬರುವವರೆಗೆ ಸುಮ್ಮನೇ ಇದ್ದು, ನಾವು ಸದನದಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ, ನಾವು ಅದನ್ನು ಬರೆದಿದ್ದೇವೆ, ಇದನ್ನು ಬರೆದಿದ್ದೇವೆ ಎಂದು ಹೇಳತಕ್ಕಂಥದ್ದು ಇದು ಬೇಜವಾಬ್ದಾರಿಯ ಪರಮಾವಧಿ. ಇದರಿಂದಾಗಿಯೇ ಕರ್ನಾಟಕ ರಾಜ್ಯದಲ್ಲಿ ಜಲ ವಿವಾದದಂಥ ಸೂಕ್ಷ್ಮವಿಷಯಗಳು

ಇಂದು ಬೀದಿಗೆ ಬರುವಂತಹ ಪರಿಸ್ಥಿತಿ ಬಂದಿರುವುದು. ರಾಜ್ಯ ಸರ್ಕಾರ ಮಾಡಿರುವ ತಪ್ಪು ಏನೆಂದರೆ, ಅಂತರ್‌ರಾಜ್ಯ ಮಂಡಳಿಯ ಸಭೆಯಲ್ಲಿ ಭಾಗವಹಿಸಿದಂಥವರು ಆ ನಿರ್ಣಯ ಏನಾಗುತ್ತದೆ ಎನ್ನುವುದನ್ನು ನೋಡಿಕೊಳ್ಳದೇ ಇರುವುದು ಮೊದಲನೆ ತಪ್ಪು. ಎರಡನೇ ತಪ್ಪು ಏನೆಂದರೆ, ನಿರ್ಣಯ ಬಂದಾದ ನಂತರ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿದೇ ಇರುವುದು. ಈ ಎರಡು ಗಂಭೀರವಾದ ತಪ್ಪುಗಳನ್ನು ರಾಜ್ಯ ಸರ್ಕಾರ ಮಾಡಿದೆ. ಈ ತಪ್ಪುಗಳನ್ನು ಈಗಲಾದರೂ ತಿದ್ದಿಕೊಂಡು ತಕ್ಷಣವೇ ಪ್ರಧಾನಿಮಂತ್ರಿಯವರಿಗೆ ಮತ್ತು ಅಂತರರಾಜ್ಯ ಮಂಡಳಿಯ ಕಾರ್ಯದರ್ಶಿಯವರಿಗೆ ಪತ್ರ ಬರೆಯಬೇಕು. ಕಡೆಯದಾಗಿ ನನ್ನ ಮಾತು ಏನೆಂದರೆ, ಇವತ್ತೂ ಕೂಡ ಈ ವಿವಾದವನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಬೇಕಾದರೆ ಮಾತುಕತೆಯ ಮೂಲಕ ಸಾಧ್ಯವಿದೆಯೇ ಹೊರತು, ಬೇರೆ ಯಾವುದೇ ರೀತಿಯಲ್ಲಿ ಇದನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ, ಇದು ಕೇಂದ್ರ ಸರ್ಕಾರಕ್ಕೂ ಕೂಡ ಕಷ್ಟವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಮಾತುಕತೆಗೆ ಕರುಣಾನಿಧಿಯವರು ಬರುವುದಿಲ್ಲವೆಂದು ಹೇಳಬಹುದು, ನಾಳೆ ಕರುಣಾನಿಧಿಯವರೇ ಮುಖ್ಯಮಂತ್ರಿಯಾಗಿರುತ್ತಾರೆಂದೇನೂ ಇಲ್ಲ, ಇಲ್ಲಿ ಮಾನ್ಯ ಜೆ.ಹೆಚ್ ಪಟೇಲ್‌ರವರೇ ಮುಖ್ಯಮಂತ್ರಿಯಾಗಿರುತ್ತಾರೆಂದೇನೂ ಇಲ್ಲ, ಬೇರೆಯವರು ಬರಬಹುದು, ಅವರ ನಿಲುವುಗಳು ಕೂಡ ಬದಲಾವಣೆಯಾಗಬಹುದು. ಹೀಗಾಗಿ ನಾವು ಈ ವಿಷಯವನ್ನು ಭಾವನಾತ್ಮಕವಾಗಿ ನೋಡುವುದು ಸರಿಯಲ್ಲ, ಸೌಹಾರ್ದಯುತವಾಗಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಬೇಕು. ರಾಜ್ಯ ಸರ್ಕಾರದವರು ಕೂಡಲೇ ಪ್ರಧಾನಿಯವರಿಗೆ ಪತ್ರ ಬರೆಯಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಹಿರಿಯರಾದ ನಂಜೇಗೌಡರು ಸುಮಾರು 40 ವರ್ಷಗಳಿಂದ ಈ ಕಾವೇರಿ ವಿಷಯದಲ್ಲಿ ನಾನು ಹೋರಾಟ ಮಾಡಿದ್ದೇನೆ, ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇನೆಂದರು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಈ ಸಮಸ್ಯೆ ಇನ್ನೂ ನಾನೂರು ವರ್ಷಗಳು ಕಳೆದರೂ ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದು ಪ್ರಕೃತಿಗೆ ಸಂಬಂಧಪಟ್ಟ ವಿಷಯ. ಇದರಲ್ಲಿ ಕಾನೂನಿನ ಮೂಲಕ ಯಾವುದೇ ಕಾರಣಕ್ಕೂ ಇದನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ನಮ್ಮ ಹಳ್ಳಿಯ ಕಡೆ ಒಂದು ಮಾತು ಹೇಳುತ್ತಾರೆ, ಬಹುಶಃ ಮಾನ್ಯ ನಾಗೇಗೌಡರವರಿಗೆ ಗೊತ್ತಿದೆ, ಅದು ಏನೆಂದರೆ, "ತಾಳಮಡವಿ ಗದ್ದೆಯವನಿಗೆ ಮತ್ತು ಕೊನೆ ಗದ್ದೆಯವನಿಗೆ ಹೋರಾಟ". ಆದರೆ ತಾಳಮಡಿ ಗದ್ದೆಯವನಾ ಜೊತೆಯಲ್ಲಿ ವಿಶ್ವಾಸ, ಪ್ರೀತಿಯಿಂದ ಇಲ್ಲದಿದ್ದರೆ, ಕೊನೆ ಗದ್ದೆಯವನಿಗೆ ನೀರು ಬಿಡಿಸಿಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಕರುಣಾನಿಧಿಯವರು "ಸುಪ್ರೀಂ ಕೋರ್ಟ್‌ನ ಆದೇಶದಂತೆ ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ತೀರ್ಪು ಜಾರಿಗೊಳಿಸಲು ಆಗಿನ ಸಂಯುಕ್ತ ರಂಗದ ಸರ್ಕಾರವು ಯೋಜನೆಯನ್ನು ರೂಪಿಸಿತ್ತು" ಎನ್ನುವ ಒಂದು ಮಾತನ್ನು ಹೇಳಿದ್ದಾರೆ. ಸಂಯುಕ್ತ ರಂಗದ ಮೇಲೆ ಬ್ಲಾಕ್‌ಮೇಲ್ ತಂತ್ರವನ್ನು ಕರುಣಾನಿಧಿಯವರು ಮಾಡಿದರು. ನಂತರ ಕೊನೆಯಲ್ಲಿ ಅವರು ಕಾವೇರಿ ವಿಷಯಕ್ಕೆ ಸಂಬಂಧಪಟ್ಟಂತೆ ಹಿಂದಿನ ಸರ್ಕಾರದ ನಿಲುವನ್ನು ಮುಂದುವರಿಸಿಕೊಂಡು ಹೋಗುವಂತೆ ಪ್ರಧಾನಿಗೆ ಸಲಹೆ ಮಾಡಿದ್ದೇನೆಂದರು.

5.20 ಪಿ.ಎಂ

ಇವತ್ತಿನ ದಿವಸ ಕುಮಾರಿ ಜಯಲಲಿತರವರು ಮತ್ತು ಮಾನ್ಯ ಕರುಣಾನಿಧಿಯವರು ಕಾವೇರಿ ವಿಷಯವನ್ನು ಸಿನಿಮಾ ಎಂದು ತಿಳಿದುಕೊಂಡಿದ್ದಾರೆ. ಅಂದರೆ ಅಲ್ಲೇ ಡ್ಯಾಮ್ ಕಟ್ಟಿ, ಗೇಟ್ ಓಪನ್ ಮಾಡಿಕೊಂಡು ನೀರು ತೆಗೆದುಕೊಂಡು ಹೋಗಬಹುದೆಂದು ತಿಳಿದುಕೊಂಡಿದ್ದಾರೆ. ಕೆಲವರು ಕೃಷಿ ಮಾಡುವ ಭೂಮಿಯಲ್ಲಿಯೇ ನಾಟಿ ಮಾಡಿ, ಅಲ್ಲೇ ಒಡೆ ಕಡಿಯುವುದು ಮತ್ತು ಅಲ್ಲೇ ಭತ್ತ ಕುಯಿಲು ಮಾಡುವುದು ಮತ್ತು ಅಲ್ಲೆ ಭತ್ತ ತೂರಿ ಒಂದು ಹಾಡು ಹೇಳಿ ಭತ್ತವನ್ನು ಮನೆಗೆ ತೆಗೆದುಕೊಂಡು ಹೋಗಬಹುದೆಂದು ಅವರು ತಿಳಿದುಕೊಂಡಿದ್ದಾರೆ. ಇದು ಪ್ರಕೃತಿದತ್ತವಾಗಿ ಬೆಳೆದಿರತಕ್ಕಂಥ ವಿಷಯ. ಇವತ್ತಿನ ದಿವಸ ಎಲ್ಲಾ ಪಕ್ಷಗಳು ಆಯಾಯ ಕಾಲಕ್ಕೆ ಅವರ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ಅಂದರೆ ಖಾಯಂ ಆಗಿ ಮ್ಯೂಸಿಕಲ್ ಚೇರ್ ಆಟವನ್ನು ಆಡಿಕೊಂಡು ಬರುತ್ತಿದ್ದಾರೆ. ವಿಜಲ್ ಊದಿದರೆ ಒಂದು ಸಾರಿ ಕರುಣಾನಿಧಿಯವರು ಕುಳಿತುಕೊಳ್ಳುವುದು, ಮತ್ತೊಂದು ಸಲ ವಿಜಲ್ ಊದಿದರೆ ಒಂದು ಸಾರಿ ಜಯಲಲಿತರವರು ಕುಳಿತುಕೊಳ್ಳುವುದು. ಈ ರೀತಿ ಮ್ಯೂಸಿಕಲ್ ಚೇರ್ ರಾಜಕಾರಣವನ್ನು ಮಾಡಿಕೊಂಡು ಬಂದಿದ್ದೇವೆ. ಏಕೆಂದರೆ ಇದು ಅತ್ಯಂತ ಗಂಭೀರವಾದಂಥ ಸಮಸ್ಯೆ. ಆದ್ದರಿಂದ ರಾಜ್ಯ ಸರ್ಕಾರ ಬಹಳ ಗಂಭೀರವಾದ ನಿಲುವನ್ನು ತಿಳಿಸಬೇಕು. ರಾಜ್ಯಕ್ಕೆ ಮಾರಕವಾಗುವಂತಹ ತೀರ್ಮಾನಕ್ಕೆ ಬರಬಾರದು. ಎಲ್ಲಾ ಪಕ್ಷಗಳು ಒಂದೇ ಒಕ್ಕೊರಲಿನಿಂದ ರಾಜ್ಯದ ಹಿತವನ್ನು ಕಾಪಾಡತಕ್ಕಂಥ ಒಂದು ನಿರ್ಣಯವನ್ನು ಮಾಡಿ, ಇವತ್ತು ಇಂಟರ್ ಸ್ಟೇಟ್ ವಾಟರ್ ಕೌನ್ಸಿಲ್‌ನಲ್ಲಿ ಆಗಿರತಕ್ಕಂಥ ಏನು ವಿಚಾರ ಇದೆ, ಅದಕ್ಕೆ ರಾಜ್ಯ ಸರ್ಕಾರದ ನಿಲುವು ಏನು ಎಂಬುದನ್ನು ಇಲ್ಲಿ ಪ್ರಕಟಣೆ ಮಾಡುವುದರ ಮೂಲಕ ಮತ್ತು ಎಲ್ಲರೂ ಒಗ್ಗಟ್ಟಾಗಿ ಕಾವೇರಿ ಹಿತವನ್ನು ಕಾಪಾಡುವಲ್ಲಿ ಬದ್ಧರಾಗಿರಬೇಕೆಂದು ಸನ್ಮಾನ್ಯ ಉಪಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ನೀರಾವರಿ ಸಚಿವರು ನನ್ನ ಎರಡು, ಮೂರು ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ಅದು ಏನೆಂದರೆ, ಸ್ಟ್ಯಾಂಡಿಂಗ್ ಕಮಿಟಿ ರೆಸಲ್ಯೂಷನ್‌ನಲ್ಲಿ ಯಾರು ಮೆಂಬರ್ಸ್ ಇದ್ದಾರೆ ಮತ್ತು ನಮ್ಮ ರಾಜ್ಯದಿಂದ ಯಾರು ಆಗಿದ್ದರು? ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ರೆಸಲ್ಯೂಷನ್ ಯಾವಾಗ ಆಯಿತು? ರೆಸಲ್ಯೂಷನ್ ಪ್ರತಿ ತಮಗೆ ಬಂದಿರಬೇಕು, ಅದು ಯಾವಾಗ ಬಂತು? ಬಂದ ನಂತರ ಸರ್ಕಾರ ಆ ರೆಸೆಲ್ಯೂಷನ್‌ಗೆ ಪ್ಯಾರವೈಸ್ ರಿಮಾರ್ಕ್‌ಮಾಡಿರಬೇಕಲ್ಲಾ, ಆ ರಿಮಾರ್ಕ್ಸ್‌ನಲ್ಲಿ ಏನು ಬರೆದು ಕಳುಹಿಸಿದ್ದೀರಿ? ಮಾನ್ಯ ಸಿದ್ದರಾಮಯ್ಯನವರ ಭಾಷಣ ಆಮೇಲೆ, ಆದರೆ ಅದಕ್ಕಿಂತ ಮುಂಚೆ ತಾವು ಏನು ಬರೆದು ಕಳುಹಿಸಿದ್ದೀರಿ ಎಂಬುದು ಮೊದಲು ನಮಗೆ ಗೊತ್ತಾಗಬೇಕು. ಇದು ಆದಮೇಲೆ ನಾವೇನೂ ಒಪ್ಪಲ್ಲ ಮತ್ತು ಭಾಷಣದಲ್ಲಿ ಬೇರೆ ಏನೂ ಹೇಳಿಲ್ಲವೆಂದು ತಾವು ಹೇಳಿದ್ದೀರಿ, ಆದರೆ ಸನ್ಮಾನ್ಯ ಸಿದ್ಧರಾಮಯ್ಯನವರ ಭಾಷಣ ಓದಿದಾಗ, ತಾವು ಹೇಳಿರುವುದು ಸಂಪೂರ್ಣವಾಗಿ ಅದರಲ್ಲಿ ಚಿತ್ರಬಿಂಬಿತವಾಗಿಲ್ಲ. Law of pleadingsನಲ್ಲಿ first-deny. Either admit or deny, ಆಕಸ್ಮಾತ್

ಡಿನೈ ಮಾಡದೆ ಇದ್ದರೆ what are the conditions or modifications ಎಂದು ಹೇಳುತ್ತೀರಿ. ನಿಮ್ಮ ಭಾಷಣದಲ್ಲಿ ಒಂದೇಒಂದು ಪಾಯಿಂಟ್‌ಗೆ ರಿಜೆಕ್ಟ್ ಎಂದು ಹೇಳಿದ್ದೀರಿ, ಅದು ಯಾವುದೆಂದರೆ `` "We however would reject the idea of constitution of Tribunal suo-moto by the Union" ಈ ಒಂದು ಪಾಯಿಂಟನ್ನು ತಾವು ರಿಜೆಕ್ಟ್ ಮಾಡಿರುವುದು. ಮಿಕ್ಕ ಎಲ್ಲದಕ್ಕೂ ಕೂಡ ಅಡ್ಡ ಗೋಡೆ ಮೇಲೆ ದೀಪ ಇಟ್ಟ ಹಾಗೆ ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಬಗ್ಗೆ ಸನ್ಮಾನ್ಯ ಸಿದ್ಧರಾಮಯ್ಯನವರು ಭಾಷಣ ಮಾಡಿದ ಪ್ರತಿಯನ್ನು ನಾನು ಓದಿದ್ದೇನೆ. ಅಲ್ಲೂ ಕೂಡ ಡಿನೈ ಮಾಡಿಲ್ಲ. ಅಲ್ಲಿ ತಾವು ಏನು ಹೇಳಿದ್ದೀರಿ ಎಂದರೆ, we also don't accept the time limit of 2 years being prescribed for implementation of award. ಎರಡು ವರ್ಷದಲ್ಲಿ ಆಗದಿದ್ದರೆ, ಅಂದರೆ ಮೂರು ವರ್ಷದಲ್ಲಿ ಆದರೆ ತಾವು ಒಪ್ಪಿಕೊಳ್ಳುತ್ತೀರಾ ಎಂದು ಕೇಳುತ್ತೇನೆ. We are not accepting the interim decree of the Supreme Court, ಎಂದು ತಾವು ಹೇಳಬೇಕಾಗಿತ್ತು. We also don't accept the time limit of 2 years being prescribed for implementation of the award. ಎರಡು ವರ್ಷಗಳಲ್ಲಿ ಆಗದಿದ್ದರೆ, 4 ವರ್ಷಗಳಲ್ಲಾದರೂ ತಾವು ಒಪ್ಪಿಕೊಳ್ಳುತ್ತೀರಾ? We are not bound ಎಂದು ಹೇಳಬೇಕಾಗಿತ್ತು. ಒಂದು ಸಲ ಡಿಸ್‌ಪ್ಯೂಟ್ ಆಗಿರುವುದನ್ನು we will not bound ಎಂದು ಹೇಳಿದ್ದಾರೆ. ಆದರೆ ತಾವು ಎಲ್ಲೂ ಕೂಡ ಹೇಳಿಲ್ಲ even if it is concluded, we have every right, ಎಂದು ಹೇಳಬೇಕಾಗಿತ್ತು. ಐದು ರೆಸಲ್ಯೂಷನ್ ಬಗ್ಗೆ ನಾನು ಸಂಪೂರ್ಣವಾಗಿ ನೋಡಿದ್ದೇನೆ, ತಮ್ಮ ಭಾಷಣದಲ್ಲಿ ಎಲ್ಲಿಯೂ ಕೂಡ ಹಾಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ ಮತ್ತು ಬೇರೆ ಯಾವುದೇ ಮೆಟೀರಿಯಲನ್ನು ತಮ್ಮ ಮುಂದೆ ಇಟ್ಟಿಲ್ಲ, ಹಾಗೂ ಅಲ್ಲಿಗೂ ಕೂಡ ಕೊಟ್ಟಿದ್ದೀರಿ ಎಂದು ನನಗೆ ಅನ್ನಿಸುತ್ತದೆ. ಇನ್ನೊಂದು ಹೇಳುತ್ತೀರಿ. Therefore, it is suggested that the Inter-State Council makes an attempt to lay down such guidelines. Who are these people to give such guidelines. Are we given jurisdiction to these people? ಇಂಟರ್ ಸ್ಟೇಟ್ ಕೌನ್ಸಿಲ್‌ಗೆ ನಾವು ಏಕೆ ಕೊಡಬೇಕು? ಸನ್ಮಾನ್ಯ ಮೊಯ್ಲಿಯವರು ಹೇಳಿದ ಹಾಗೆ ನ್ಯಾಷನಲ್ ಪಾಲಿಸಿಯಲ್ಲಿ ಆರ್ಟಿಕಲ್ 262 ಮತ್ತು 263ಕ್ಕೆ ಡಿಫರೆಂಟ್ ಇದೆ. ಈ ಕೌನ್ಸಿಲ್‌ಗೆ ಪವರ್ ಇಲ್ಲ. ತಾವು ಏನು ಹೇಳುತ್ತೀರೆಂದರೆ however, it is suggested to give guidelines. Who are these people? Why do you give jurisdiction to them? ನಾವು ಯಾವುದೇ ಪ್ಲೀಡಿಂಗ್ಸ್‌ನಲ್ಲಿ ಕೊಡಬೇಕಾದರೆ, ಮೊದಲನೆ ಪಾಯಿಂಟ್ ತೆಗೆದು ಕೊಳ್ಳತಕ್ಕಂಥದ್ದು ಕೋರ್ಟ್‌ಗೆ ಜ್ಯೂರಿಸ್‌ಡಿಕ್ಷನ್ ಇಲ್ಲ. Second point-limitation, third - Inherent jurisdiction ಇಲ್ಲ, ಮಾಡಲು ಬರುವುದಿಲ್ಲ. Fourth -even if a decree is passed, it is not executable... ಎಂದು ನಾವು ಹೇಳುತ್ತೇವೆ. ಆದರೆ ನೀವು ಎಲ್ಲಿ ಹೇಳಿದ್ದೀರಿ? ಇವತ್ತು ಜ್ಯೂರಿಸ್‌ಡಿಕ್ಷನ್ ಬಗ್ಗೆ ತಾವು ಎಲ್ಲೂ ಕೂಡ ಚಕಾರ ಎತ್ತಿಲ್ಲ. I don't know who drafted this and who gave this written speech to Sri Siddaramaiah.

ಅವರೇ ಮಾಡಿದ್ದಾರೋ ಅಥವಾ ಅಡ್ವೈಸ್ ಕೊಟ್ಟಿದ್ದಾರೋ ಗೊತ್ತಿಲ್ಲ. ನಾವು ಏನು ಹೇಳದೇ ಇದ್ದರೂ, ರೆಸಲ್ಯೂಷನ್‌ನಲ್ಲಿ ಕನ್‌ಸೆಂಟ್ ಎಂದು ಬರೆದುಕೊಂಡಿದ್ದಾರೆಂದು ತಾವು ಈಗ ಹೇಳುತ್ತಿದ್ದೀರಿ. It is all an eye wash ಸದಸ್ಯರು ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ ಮೇಲೆ ತಾವು ಕಣ್ಣು ತೆರೆದಿದ್ದೀರಿ. ಇಲ್ಲಿ ಪ್ರಸ್ತಾಪ ಆಗುವವರೆಗೂ ತಾವು ಈ ವಿಷಯವನ್ನು ಹೇಳಲಿಲ್ಲ. ಕುಮಾರಿ ಜಯಲಲಿತರವರ ಬಗ್ಗೆ ಮತ್ತು ಮಾನ್ಯ ಕರುಣಾನಿಧಿಯವರ ಬಗ್ಗೆ ಮಾನ್ಯ ವೀರಪ್ಪಮೊಯ್ಲಿಯವರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಈಗಾಗಲೇ ಹೇಳಿದ್ದಾರೆ. ನಮ್ಮ ಇವತ್ತಿನ ಪ್ರಧಾನಿ ಎಂಥವರು ಎಂದರೆ "ಪ್ರಾಣ ಜಾಯ್ ಪರ ವಚನ ಜಾಯ್" ಎಂದು ಶ್ರೀರಾಮಚಂದ್ರ ವನವಾಸಕ್ಕೆ ಹೋಗಬೇಕಾದರೆ ಕೈಕೇಯಿಗೆ ವಚನ ತಪ್ಪುವುದಿಲ್ಲವೆಂದು ಮಾತು ಕೊಟ್ಟು ಹೋದರಲ್ಲಾ, ಅಂಥ ಪ್ರಧಾನ ಮಂತ್ರಿ ಇವತ್ತು ನಮಗೆ ಇರತಕ್ಕಂಥವರು. ಕೈಕೇಯಿಯಂತೆ ಇರುವ ಜಯಲಲಿತರವರು ನ್ಯಾಷನಲ್ ಅಜೆಂಡಾ ಬರೆಯುವಾಗ ಒಪ್ಪಿಕೊಂಡು, ನ್ಯಾಷನಲ್ ವಾಟರ್ ಪಾಲಿಸಿ ಆದಮೇಲೆ ಅವರು ಒಪ್ಪಿಕೊಂಡು, ಮಂತ್ರಿಮಂಡಲಕ್ಕೆ ಸೇರಿದ್ದಾರೆ. ನ್ಯಾಷನಲ್‌ಅಜೆಂಡಾಗೆ ಅವರು ಪಾರ್ಟಿಯಾಗಿದ್ದಾರೆಂದಮೇಲೆ ಅವನು ವಚನ ಬದ್ಧರಾಗಿದ್ದಾರೆ ಎನ್ನುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ; ಕೈಕೇಯಿ ಮಾತಿಗೆ ದಶರಥ ಏನು ಮಾಡಿದ ಮತ್ತು ರಾಮನಿಗೆ ಕೊನೆಗೆ ಏನು ಪರಿಸ್ಥಿತಿ ಬಂತು ಎಂಬುದನ್ನು ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ದಶರಥನ ಬಗ್ಗೆ ಮಾತನಾಡುತ್ತಿಲ್ಲ. ದಶರಥ ಯಾರು ಎಂಬುದು ಇಷ್ಟು ವರ್ಷದಿಂದ ಗೊತ್ತಾಗಿದೆ, ಆದರೆ ಈಗ ಇರತಕ್ಕಂಥವರು ಯಾರು ಎಂಬ ಮಾತನ್ನು ಹೇಳುತ್ತೇನೆ. ವಚನ ಕೊಟ್ಟವರು ಯಾರು ? ವಚನ ಯಾರಿಗೆ ಕೊಟ್ಟರು ? ಸನ್ಮಾನ್ಯ ವಾಜಪೇಯಿರವರು ವಚನವನ್ನು ಯಾರಿಂದ ತೆಗೆದುಕೊಂಡರು ಎಂಬುದನ್ನು ನಾವು ನೋಡಬೇಕಾಗುತ್ತದೆ. ಈ ಅಜೆಂಡಾಗೆ ಒಪ್ಪಿದರೆ ಮಾತ್ರ ನಮ್ಮ ಪಕ್ಷದ ಜೊತೆ ಸೇರಿಕೊಳ್ಳಿ, ಇಲ್ಲದಿದ್ದರೆ ನಮಗೆ ಅಧಿಕಾರ ಬೇಡ ಎಂದು ಸನ್ಮಾನ್ಯ ವಾಜಪೇಯಿರವರು ಹೇಳಿದರು. ಇದಕ್ಕೆ ಜಯಲಲಿತರವರು ಒಪ್ಪಿಕೊಂಡು ನ್ಯಾಷನಲ್ ಅಜೆಂಡಾಗೆ ಸಹಿ ಹಾಕಿದನಂತರ ಇವತ್ತು ನಮ್ಮ ಮಂತ್ರಿಮಂಡಲ ಆಗಿದೆ, ಅದನ್ನು ತಾವೆಲ್ಲಾ ನೋಡುತ್ತಿದ್ದೀರಿ. ನ್ಯಾಷನಲ್ ಅಜೆಂಡಾಗೆ ಒಪ್ಪಿಕೊಂಡು ಮಾರ್ಗಸೂಚಿ ಹಾಕಬೇಕೆಂದು ಕುಮಾರಿ ಜಯಲಲಿತರವರು ಅದಕ್ಕೆ ಬದ್ಧರಾಗಿದ್ದಾರೆ. ಇವತ್ತು ಅವರಿಗೆ ವಚನಪರ ಆಯಿತು ಎಂದರೆ ನ್ಯಾಷನಲ್ ಅಜೆಂಡಾವನ್ನು ಬೇರೆ ಬರೆಯುವುದಕ್ಕೆ ಆಗುವುದಿಲ್ಲ ಮತ್ತು ಅವರು ಬೇರೆ ಮಾತನ್ನು ಹೇಳಿದರೂ ಕೂಡ ಇವತ್ತು ಬದ್ಧರಾಗುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಜಯಲಲಿತರವರಿಗೆ ನೀವು ಒಂದು ಸಾರಿ ಕುಮಾರಿ ಎಂದು ಮತ್ತೊಂದು ಸಾರಿ ಶ್ರೀಮತಿ ಎಂದು ಹೇಳುತ್ತೀರಿ, ಅದಕ್ಕೆ ಇವರೆಡೂ ಬೇಡ, ಜಯಲಲಿತ ಎಂದು ಹೇಳಿದರೆ ಸಾಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕುಮಾರಿ ಎಂದು ಹೇಳುವುದು ತಪ್ಪು. ನಾವು ಶ್ರೀಮತಿ ಜಯಲಲಿತ ಎಂದೇ ಹೇಳೋಣ. ಶ್ರೀಮತಿ ಎಂಬುದು ಒಳ್ಳೆಯ ಗಾಂಭೀರ್ಯವಾದ ಪದ. ಕುಮಾರಿ ಎನ್ನುವುದಕ್ಕೆ ಸಂಸ್ಕೃತದಲ್ಲಿ ಬೇರೆ ಅರ್ಥ ಇದೆ, ಅದು ಏನೆಂದರೆ "ಕೌಮಾರ್ಯವನ್ನು ಮೀರಿದಂಥವರು" ಆದ್ದರಿಂದ ಜಯಲಲಿತ ಎಂಬುದು ಮತ್ತು ಶ್ರೀಮತಿ ಜಯಲಲಿತ ಎನ್ನುವುದು ಸೂಕ್ತವಾದ ಪದವೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಮಾತುಕತೆಗೆ ಬರುವುದಿಲ್ಲವೆಂದು ಸನ್ಮಾನ್ಯ ಕರುಣಾನಿಧಿಯವರು ಹೇಳಿದ್ದಾರೆ. ಇದು ಯಾವರೀತಿ ಇದೆ ಎಂದರೆ, ಯಾರಾದರೂ ಫೋನ್ ಮಾಡಿದಾಗ ಧ್ವನಿ ಸರಿ ಇಲ್ಲದಿದ್ದರೆ ಫೋನ್ ಇಟ್ಟುಬಿಡುತ್ತಾರೆ, ಏಕೆಂದರೆ ನನ್ನ ಧ್ವನಿ ಸರಿಯಾಗಿ ಕಾಣಲಿಲ್ಲವೆಂದು ಹೇಳುತ್ತಾರೆ. ಆ ರೀತಿ ಇವರು ಸನ್ಮಾನ್ಯ ಕರುಣಾನಿಧಿಯವರು ನಮ್ಮನ್ನು ನೋಡುವುದಕ್ಕೆ ಬರುವುದಿಲ್ಲವೆಂದರೆ, ನಾವೇನು ನೋಡಬೇಕೆಂದೇನೂ ಇಲ್ಲವಲ್ಲಾ ಮತ್ತು ಅವರ ಹತ್ತಿರ ಮಾತನಾಡಬೇಕೆಂದು ನಮಗೇನೂ ಆಸೆ ಇಲ್ಲ. ಇವತ್ತು ನಮ್ಮ ಮಂತ್ರಿಗಳಿಗಾಗಲಿ, ಈ ರಾಜ್ಯದ ಜನತೆಗಾಗಲಿ, ಕರುಣಾನಿಧಿಯವರು ನೋಡಬೇಕು, ಅವರ ಜೊತೆ ಮಾತುಕತೆ ಮಾಡಬೇಕೆಂದು ನಮಗೇನೂ ಇಚ್ಛೆ ಇಲ್ಲ, ಅದೇ ರೀತಿ ನೀವು ನೋಡುವುದಿಲ್ಲವೆಂದೇ ನಾವೂ ಕೂಡ ನೋಡುವುದಕ್ಕೆ ಬರುವುದಿಲ್ಲ ಮತ್ತು ಮಾತುಕತೆ ಮಾಡುವುದಕ್ಕೆ ನಾವೂ ಕೂಡ ಸಿದ್ದರಿಲ್ಲ ಎಂಬುದನ್ನು ಇವತ್ತು ಸರ್ಕಾರ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆ ರೀತಿ ನೀವು ಬರದೇ ಇದ್ದರೆ ಎಕ್ಸ್‌ಪಾರ್ಟಿ ಏನು ಮಾಡಬೇಕಾಗುತ್ತದೆ ಎಂಬುದನ್ನು ಯಾರಿಗೆ ಅಧಿಕಾರ ಇದೆ ಅವರು ಮಾಡುತ್ತಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ತಾವು ರಾಜಕೀಯ ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಸರಿಯಾಗಿ ಜ್ಯೂರಿಸ್‌ಡಿಕ್ಷನ್ ಬಗ್ಗೆ, ಇಂಟರ್ ಸ್ಟೇಟ್ ಕೌನ್ಸಿಲ್ ಬಗ್ಗೆ ದಯಮಾಡಿ Art. 262 is different from Art 263 ನೀವು ಇದನ್ನು ಮುಂದುವರಿಸಬೇಡಿ ಎಂದು ಮತ್ತು ಕ್ರಮಬದ್ಧವಾಗಿ ತಾವು ಬರೆಯಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಉಪಾಧ್ಯಕ್ಷರಿಗೆ ಅಭಿನಂದಿಸುತ್ತೇನೆ.

+ ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇವತ್ತು ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಹಿರಿಯ ಮುಖಂಡರು ದಿನಾಂಕ 28ನೇ ನವೆಂಬರ್ 1997ರಲ್ಲಿ ನಡೆದ ಇಂಟರ್ ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಪ್ರೊಸೀಡಿಂಗ್ ಬಗ್ಗೆ ಕೆಲವು ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಮಾನ್ಯ ವೀರಪ್ಪಮೊಯಿಲಿಯವರು ಮೂಲಭೂತವಾಗಿ ಆರ್ಟಿಕಲ್ 262 ಬಗ್ಗೆ ಹೇಳಿದ್ದಾರೆ, ನಾನು ಆರ್ಟಿಕಲ್ 263ನ್ನೂ ಸಹ ನೋಡಿದ್ದೇನೆ. ಈ ಜ್ಯೂರಿಸ್‌ಡಿಕ್ಷನ್ ಇದೆಯೋ ಇಲ್ಲವೋ ಎಂದು ನನಗೆ ಅನುಮಾನ ಬಂದಿದ್ದರಿಂದ, ಮೂರು ದಿವಸದಿಂದ ಬೆಂಗಳೂರಿನಲ್ಲಿಯೇ ಇರುವ ನಮ್ಮ ಲಾಯರ್ ಮೋಹನ್ ಕಾತರಕಿಯವರಲ್ಲಿ ಇದರ ಬಗ್ಗೆ ಕೇಳಿದ್ದೇನೆ. 1997ರಲ್ಲಿ ಸರ್ಕಾರಿಯಾ ಕಮೀಷನ್ ಮುಕ್ತಾಯ ಆದ ಮೇಲೆ ನಾಲ್ಕು ಇಂಟರ್ ಸ್ಟೇಟ್ ಕೌನ್ಸಿಲ್ ಮೀಟಿಂಗ್‌ಗಳು ಆಗಿವೆ. ಈ ನಾಲ್ಕು ಮೀಟಿಂಗ್‌ನಲ್ಲಿ ಮೊದಲನೆಯದು 10-10-1990 ರಂದು ಮತ್ತು ಎರಡನೇಯದು 15-10-96 ರಂದು ಮತ್ತು 10-7-97ರಂದು ಮೂರನೆಯದು ಹಾಗೂ 18-11-97ರಂದು ನಾಲ್ಕನೇ ಮೀಟಿಂಗ್ ನಡೆದಿದೆ. ದಿನಾಂಕ 10-10-1990 ರಲ್ಲಿ ನಡೆದ ಮೀಟಿಂಗ್‌ನಲ್ಲಿ ವಾಟರ್ ವಿಚಾರ

ಬಂದಿಲ್ಲ. 1996ರಲ್ಲಿ ವಾಟರ್ ಪಾಲಿಸಿ ಬಗ್ಗೆ ಚರ್ಚೆಯಾಗಿದೆ. ಮತ್ತು 1997ರಲ್ಲಿ ಅಂತರ್ ರಾಜ್ಯ ಮಂಡಳಿಯ ಸಭೆಯಲ್ಲಿ ವಾಟರ್ ಪಾಲಿಸಿ ಬಗ್ಗೆ ಬಂದಿಲ್ಲ. 28-11-1997 ರಲ್ಲಿ ಆ ವಿಚಾರ ಬಂದಿದೆ. ಮೋಹನ್ ಕಾತರಕಿಯವರು ಕೊಟ್ಟಂಥ ಟಿಪ್ಪಣಿ ನನ್ನ ಹತ್ತಿರ ಇದೆ. Though I am not a lawyer, because the Sarkaria Commission was constituted for Inter-State relations etc. ಅದನ್ನು ನೋಡಿದ ಮೇಲೆ ಆ ವಿಷಯದ ಮೇಲೆ ಅವರು ಒಂದು ಶಿಫಾರಸ್ಸು ಕಳುಹಿಸಿದ್ದಾರೆ. "The decision of the Inter-State council constituted under Article 263 of the Constitution will not have any force of the law. It may, at best, have the persuasive value before the Union Government. The Parliament alone can change or amend the Inter State Water Dispute Act incorporating the suggestions of the Inter-State Council to treat its order as an order of the Tribunal or the Supreme Court".

ತಾವು ಇವತ್ತು ಏನು ಸಲಹೆಯನ್ನು ಕೊಟ್ಟಿದ್ದೀರಿ, ನಮ್ಮ ಕಾನೂನು ಮಂತ್ರಿಗಳು ಇಲ್ಲಿಯೇ ಇದ್ದಾರೆ, ಅವರ ಜೊತೆ ನಾನು ಚರ್ಚೆ ಮಾಡಿ ಆರ್ಟಿಕಲ್ 262 ರಂತೆ ಅಂತರ್ ರಾಜ್ಯ ಮಂಡಳಿಯ ಸಭೆ ಆಗಿದ್ದು, ಅದು 263 ರ ಒಳಗಡೆ ಆಗಿದೆ. ``Co-ordination between the two States, Dispute" ಎಂಬ ಪದಗಳು ಅದರಲ್ಲಿ ಬಂದಿವೆ. ಬಹುಶಃ ಆ ಅರ್ಥದಲ್ಲಿ ತೆಗೆದುಕೊಂಡಿದ್ದಾರೆ. ನಾವು ಇನ್ನೊಂದು ಸಲ ಲೀಗಲ್ ಎಕ್ಸಾಮಿನೇಷನ್‌ನನ್ನೂ ನಮ್ಮ ಅಕೌಂಟೆಂಟ್ ಜನರಲ್ ರವರ ಹತ್ತಿರ ಮತ್ತು ವಾಟರ್ ಡಿಸ್‌ಪ್ಯೂಟ್ ಮಾಡತಕ್ಕಂಥ ನಾರಿಮನ್‌ರವರ ಹತ್ತಿರ ಮುಂದಿನ ಸಭೆಯಲ್ಲಿ ಆ ಆರ್ಟಿಕಲ್ 262 ಮತ್ತು ಆರ್ಟಿಕಲ್ 263ಕ್ಕೆ ಒಂದು ಲೀಗಲ್ ಓಪಿನಿಯನ್ ತೆಗೆದುಕೊಂಡು ಆ ವ್ಯಾಪ್ತಿಯೊಳಗೆ ಅಂತರ್ ರಾಜ್ಯ ಮಂಡಳಿಗೆ ಬರುವುದಿಲ್ಲವೆಂದು ಹೇಳಿದರೆ certainly we will adhere by the legal advice.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಲೀಗಲ್ ಅಡ್‌ವೈಸ್ ಅಲ್ಲ, ಅದು ಏನಾಗಿದೆ ಎಂದರೆ, As per article 262 though we have kept the matter outside the purview of the other provisions of the constitution, ಬೈ ಕನ್‌ಸೆಂಟ್ ಮಾಡಿಕೊಂಡು, ನೀವು ಹೊಳೆಗೆ ಬೀಳುತ್ತೇವೆಂದು ಹೇಳಿದರೆ, ಯಾರು ಅದನ್ನು ತಡೆಯುವುದಕ್ಕೆ ಆಗುತ್ತದೆ?

ಶ್ರೀ ಕೆ.ಎನ್. ನಾಗೇಗೌಡ : ಸಭಾಧ್ಯಕ್ಷರೇ, He has mentioned twice 're-examine whether jurisdiction is there for Inter-State Council or not under Article 262' But I have mentioned, under Article 263 the Inter-State Council is constituted. The duties of the Inter-State Council have also been mentioned in the Article. The duties are, co-operation between the two states and disputes of the State also. Your point has been well noted by the Government.

ಶ್ರೀ ಎಂ. ವೀರಪ್ಪ ಮೊಯಿಲಿ : ಆರ್ಟಿಕಲ್ 262 ಪ್ರಕಾರ ಅಂತರ್ ರಾಜ್ಯ ಮಂಡಳಿ ಎನ್ಯಾಕ್ಟ್ ಮಾಡಿದ್ದಾರೆ. There is a National Water Resources Council where the Chief

Ministers are the Members and the Prime Minister is the Chairman whereas the Inter-state Council need not be chaired by the Prime Minister. It can be chaired by the Home Minister. Chief Ministers are not invariably Members. Their representatives can also be Members. That means, Water Resources Council is a higher body, and the Inter-State Council is a lower body. ಆದ್ದರಿಂದ ಪ್ಯಾರ ಮೌಂಟ್ ಪವರ್ ಯಾರಿಗೆ ಇದೆ. ಆ ಪವರನ್ನು ಸಬಾರ್ಡಿನೇಟ್ ಬಾಡಿಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

SRI K.N. NAGE GOWDA : I agree with your point. That is why the National Water Resources Council (NWRC) under the Chairmanship of Shri P.V. Narasimha Rao, the national water guidelines have been discussed. ಆದ್ದರಿಂದ ನೀವು ನ್ಯಾಷನಲ್ ವಾಟರ್ ರಿಸೋರ್ಸ್ ಕೌನ್ಸಿಲ್ ಬಗ್ಗೆ ತಾವು ಹೈಯರ್ ಬಾಡಿ ಬಗ್ಗೆ ಏನು ಹೇಳಿದ್ದೀರಿ in 1996 because that is a higher body when Shri. P.V. Narasimha Rao was the Prime Minsiter; for the first time national water policy guidelines have been discussed under the NWRC. That is also well noted by the Government. ಲೀಗಲ್ ಆಗಿ ನಾನು ಮತ್ತು ಕಾನೂನು ಮಂತ್ರಿಗಳು ಅಡ್ವೋಕೇಟ್ ಹತ್ತಿರ ಜನರಲ್ ಮಾತನಾಡಿ Of course anyhow it is a recommendatory body and does not have legal force, and for any Inter-State Act for amendment it should come before the parliament is all there. ನಂಜೇಗೌಡರ ಭಾಷಣದ ಬಗ್ಗೆ ಹೇಳುತ್ತಾ ನಾವು ಲೀಗಲ್ ಫೋರ್ಸ್‌ಗಿಂತ ವಾತಾವರಣ ಬೇರೆ ಕಡೆಗೆ ಹೋಗಬಾರದು ಎನ್ನುವ ಮಾತನ್ನು ನಾನು ಒಪ್ಪಿ ಲೀಗಲ್ ರೀ ಎಕ್ಸಾಮಿನ್ ಮಾಡಿಸುತ್ತೇವೆ ಎನ್ನುವ ಮಾತನ್ನು ಹೇಳಿ, the second point mentioned by the Hon'ble Madam, i.e., who is the Standing Committee Member; before attending the Inter-state Council meeting whether the State Government sent a clause-by-clause comment on the Sarakaria Commission report? ಎಂದು ಕೇಳಿದ್ದಾರೆ. It is a very valid point. It is the most valid point for the whole of the debate. ಸರ್ಕಾರ ಎಲ್ಲೂ ಫೇಲ್ ಆಗಿಲ್ಲ. ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ನಾವು ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೇವೆ ಎನ್ನುವುದಕ್ಕೆ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಕೇಳಿದ ಪ್ರಶ್ನೆಗೆ ನಾವು ಉತ್ತರ ಮಾಡದೆ ಹೋಗಿದ್ದರೆ we would have failed. 28-11-1997ಕ್ಕೆ ಮುಂಚಿತವಾಗಿ ಸರ್ಕಾರದ ಕಮೀಷನ್‌ಗೆ ಕ್ಲಾಜ್ ಬೈ ಕ್ಲಾಜ್ ಕಳುಹಿಸಿದ್ದೇವೆ. For the Standing Committee, our state is not a Member. Secondly, before the meeting we have sent clause-by-clause comments. For the items No. 212, 213, 214, 215 and 216 our comments are: For the first, instead of one year the time limit prescribed may be two years. For the Second, the recommendation of the Standing Committee may be accepted.

3rd, may be accepted. We are discussing the 4th and 5th. 215 and 216 of REC No. The recommendation of the Sarkaria Commission :

"The Inter State Water Dispute Act should be amended to ensure that the Award of a Tribunal becomes effective within 5 years from the date of constitution of the Tribunal. If, however, for some reasons a Tribunal feels that the five years period has to be extended, the Union Government may on a reference made by a Tribunal, extend its term." There is a standing committee recommendation also. "The Tribunal should give its award within a period of three years from the date of its constitution. However if for an unavoidable reason the award could not be given within a period of three years, the Union Government may extend the period suitably not exceeding two years. The award should be implemented within two years from the date of notification of the award. If for unavoidable reasons the award could not be implemented within a period of two years, the Union Government may extend the period suitably." Therefore we have written it very clearly before the meeting, the views and comments of Karnataka. "The time limit of three years....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಅದನ್ನು ನೋಡಿಲ್ಲವೆಂದ ಮೇಲೆ ಅದನ್ನು ಏಕೆ ಹೇಳುತ್ತೀರಿ ?

SRI K.N. NAGEGOWDA : Sir, he has not caught the point. ಪ್ರಮೀಳಾ ನೇಸರ್ಗಿಯವರು ಹೇಳಿದಾಗ ನೀವು ಇರಲಿಲ್ಲ ಹೊರಗಡೆ ಹೋಗಿದ್ದೀರಿ, ಅವರು ಏನು ಹೇಳಿದರು ಎಂದರೆ ಸರ್ಕಾರಿಯಾ ಕಮೀಷನ್ ರೆಕ್ಮಂಡೇಷನ್ ಬಂದಿದೆ. ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ನೀವು ಯಾರು ಯಾರು ಇದ್ದೀರಿ ? ಸ್ಟ್ಯಾಂಡಿಂಗ್ ಕಮಿಟಿಗೆ ಹೋಗುವ ಮುಂಚೆ ಮಾನ್ಯ ಉಪ ಮುಖ್ಯಮಂತ್ರಿಗಳು ಕ್ಲಾಜ್ ಬೈ ಕ್ಲಾಜ್ ಕಾಮೆಂಟ್ಸ್ ಕಳುಹಿಸಬೇಕಾಗಿತ್ತು ಕರ್ನಾಟಕ ಸರಕಾರದ್ದು, ಸಭೆಗೆ ಹೋಗುವ ಮುಂಚೆ ಕಾಮೆಂಟ್ಸನ್ನು ಕಳುಹಿಸಿದ್ದೀರಿ ಎಂದು ಕೇಳಿದ್ದರು. ಆದ್ದರಿಂದ ಅವರು ಕೇಳಿದ ಎರಡು ಪಾಯಿಂಟ್‌ಗಳು ಕವರ್ ಆಗಿವೆ, ಉಳಿದ ಮೂರು ಪಾಯಿಂಟ್‌ಗಳು ಕವರ್ ಆಗಿಲ್ಲವೆನ್ನುವ ಮಾತನ್ನು ಅವರು ಹೇಳಿದರು. ಸ್ಟ್ಯಾಂಡಿಂಗ್ ಕಮಿಟಿಗೆ ಕರ್ನಾಟಕದವರು ಸದಸ್ಯರು ಅಲ್ಲ. ಬೇರೆ ಬೇರೆ ರಾಜ್ಯದವರು ಸದಸ್ಯರಿದ್ದಾರೆ. ಅದರ ವಿವರವನ್ನು ಕೊಡುತ್ತೇನೆ. ಸಭೆಗೆ ಮುಂಚೆ ನಾವು ಐದು ಪಾಯಿಂಟ್‌ಗಳನ್ನು ಕಳುಹಿಸಿದ್ದೇವೆ. "The time limit of 3 years recommendation for the award of the tribunal may be extended. However, the time limit of two years prescribed for the implementation of the Tribunal award is not acceptable as a matter of poilicy. The second point. The experience of Karnataka suggests that the main hurdle in providing a satisfactory solution to these river water disputes

lies in the absence of written laws or the guidelines formulated by the concerned authority. Therefore, it is felt that the Inter-State Council can, make an attempt to lay down such guidelines. Although there are many decided cases spelling out principles of equitable apportionment, yet in the larger interest of the nation and for providing suitable basis for resolution"

ಆ ರೀತಿ ನಾವು 5 ಕ್ಲಾಜ್‌ಗೆ, ಕ್ಲಾಜ್ ಬೈ ಕ್ಲಾಜ್ ಅಬ್ಜೆಕ್ಷನ್ ಸ್ಟ್ಯಾಂಡಿಂಗ್ ಕಮಿಟಿಗೆ ಕಳುಹಿಸಿದ್ದೇವೆ. ಅದನ್ನು ಕಳುಹಿಸಿದ ಮೇಲೆ.... ಅದು ಉಪ ಮುಖ್ಯಮಂತ್ರಿಗಳ ಭಾಷಣದ ಆಧಾರ.

"A strict enforcement of the orders of the Tribunal like a decree of a civil court is an impracticable proposition in a federal set up. The ultimate compliance to the orders should be secured not by force but by conciliation involving adjustment in the spirit of give and take. It is therefore, suggested that the relevant guidelines for the purpose may be drawn from the experience of international litigation. The orders of the World court are not enforced directly. The matter goes to the Security Council which, upon consideration of the factors including the maintenance of the people of the region."

ಶ್ರೀಮತಿ ಪ್ರಮೀಳಾ ನೇಸರ್ಗಿ : ಇಂಟರೀಮ್ ಬಗ್ಗೆ ನಿಮ್ಮ ರಿಪ್ಲೈದಲ್ಲಿ ಇಲ್ಲ. ಮತ್ತು ನಿಮ್ಮ ಭಾಷಣದಲ್ಲಿ ಎಲ್ಲೂ ಇಲ್ಲ.

SRI M. VEERAPPA MOILY : You should have referred to the Interim award.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. 6ನೇ ಕ್ಲಾಸ್‌ನಲ್ಲಿ 5 ಮತ್ತು 215 ಮತ್ತು 216ರ ಬಗ್ಗೆ ಪ್ರಾಕ್ಟಿಕ್‌ಬಲ್ ಅಲ್ಲವೆಂದು ನಾವು ಸ್ಟೈಟ್ ಆಗಿ ಹೇಳಿದ್ದೇವೆ. ಇದನ್ನು ನಮ್ಮ ರಾಜ್ಯ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನತಕ್ಕ ಮಾತನ್ನು ಇವರು ಸ್ಪೀಚನ್ನು ಓದುವುದಕ್ಕೆ ಮೊದಲೇ ಕಳುಹಿಸಿಕೊಟ್ಟಿದ್ದೇವೆ. ಆಮೇಲೂ ಸಹಿತ ಕಳುಹಿಸಿ ಕೊಟ್ಟಿದ್ದೇವೆ ಇದೇ ಸಾಕು. ಅದೇ ಇಂಡಿಕೇಷನ್ ಆಗುತ್ತದೆ ನಾವು ಒಪ್ಪಿಕೊಂಡಿಲ್ಲ ಎನ್ನುವುದಕ್ಕೆ ಇದು ಮೊದಲನೆಯದು. 2ನೆಯ ಸ್ಟ್ಯಾಂಡಿಂಗ್ ಕಮಿಟಿ ಆದ ಮೇಲೆ, ಪ್ರೊಸೀಡಿಂಗ್ಸ್ ಬಗ್ಗೆ ಅವರು ಹೇಳಿದ್ದಾರೆ, ಯಾವ ರೀತಿ ನಡೆದಿದೆ, ಯಾವ ರೀತಿ ಸ್ಪೀಚಸ್ ಆಗಿದೆ ಎಂದು ಹೇಳಿದ್ದಾರೆ. ಮತ್ತೊಂದು ಏನಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿಯವರು ಆ ಪ್ರೊಸೀಡಿಂಗ್ಸ್ ನಿಮ್ಮ ಇಲಾಖೆಗೆ ಯಾವಾಗ ಬಂತು ಎಂದು ಕೇಳಿದರು. ಆ ಪ್ರೊಸೀಡಿಂಗ್ಸ್ ನೀರಾವರಿ ಇಲಾಖೆಗೆ ಈ ತಿಂಗಳ 7ನೇ ತಾರೀಖು ಬಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಪ್ರೊಸೀಡಿಂಗ್ಸ್ ಸರಿಯಲ್ಲ ಎಂದು ಹೇಳಿದಾಗ ಏನು ಕ್ಲಾಜ್ ಬೈ ಕ್ಲಾಜ್ ರಿಪ್ಲೈ ಮಾಡಿದ್ದೀರಲ್ಲಿ ಅದರಲ್ಲಿ ರೆಫರ್ ಮಾಡಿ ಬರೆದಿದ್ದೀರಾ, ಅದನ್ನು ಹೇಳುತ್ತೀರಾ?

ಶ್ರೀ ಕೆ.ಎನ್. ನಾಗೇಗೌಡ : 7ನೇ ತಾರೀಖು ನೀರಾವರಿ ಇಲಾಖೆಗೆ ಬಂದಿದೆ. ಅದು ಬಂದ ತಕ್ಷಣವೇ ನನಗೆ 13ನೇ ತಾರೀಖು ನೋಟ್ ಹಾಕಿದ್ದಾರೆ. ಹೋಂ ಮಿನಿಸ್ಟ್ರಿಯವರು ಇಂಟರ್‌ಸ್ಟೇಟ್ ಕೌನ್ಸಿಲ್ ವಿಚಾರವನ್ನೆಲ್ಲಾ ಡೀಲ್ ಮಾಡುತ್ತಾರೆ. ಅದಕ್ಕೆ ಇಲ್ಲಿ ಅವರು ಕಾರಣ ಕೇಳಿದರು.

ಶ್ರೀಮತಿ ಪ್ರಮೀಳಾನೇಸರ್ಗಿ : ನಿಮಗೆ ಇದು ಬಂದು 6 ದಿವಸಗಳು ಆಗಿದೆ. ಇಷ್ಟು ದಿವಸ ನೀವು ಏನು ಮಾಡುತ್ತಿದ್ದೀರಾ?

ಶ್ರೀ ಕೆ.ಎನ್. ನಾಗೇಗೌಡ : ಇದು ನಮಗೆ 7ನೇ ತಾರೀಖು ಬಂದಿದೆ. ನಂತರ, 8,9,10 ರಜಾ ದಿನಗಳಾಗಿದ್ದು 11ನೇ ತಾರೀಖು ವರ್ಕಿಂಗ್ ಡೇ ಮತ್ತು 12ನೇ ತಾರೀಖು ಭಾನುವಾರ, 13ನೇ ತಾರೀಖು ವರ್ಕಿಂಗ್ ಡೇ ಆಗಿದೆ. ಗೃಹಸಚಿವರಾದ ಆದ್ವಾನಿಯವರಿಗೆ ದಿನಾಂಕ 15-4-98ರಂದು ಬರೆದಿರುವ ಪತ್ರವನ್ನು ತಮಗೆ ಓದಿಬಿಡುತ್ತೇನೆ. You must understand how the Government must function. Irrigation Department received this copy on the 7th. "kindly refer to the record.." ಮಾನ್ಯ ವಾಟಾಳ್ ನಾಗರಾಜ್‌ರವರು ಏನೋ ಗುಟ್ಟಾಗಿ ಬರೆದುಬಿಟ್ಟಿದ್ದೀರೆಂದು ಹೇಳಿದರು. ಏನೇನೋ ಅಂಡರ್‌ಸ್ಟ್ಯಾಂಡಿಂಗ್ ಇದೆಯೆಂದು ಹೇಳಿದರು. ಕಾವೇರಿಯ ವಿಚಾರದಲ್ಲಿ ಗುಟ್ಟಿನ ಪ್ರಶ್ನೆಯೇ ಇಲ್ಲ.

ಶ್ರೀ ಎಂ.ಸಿ. ನಾಣಯ್ಯ : ಆ ಇಂಟರ್‌ಸ್ಟೇಟ್ ಕೌನ್ಸಿಲ್‌ನ ಪ್ರೊಸೀಡಿಂಗ್ಸ್‌ನಲ್ಲಿ ಕಾವೇರಿ ಬಗ್ಗೆ ಒಂದು ಸ್ವಲ್ಪವೂ ರೆಫರೆನ್ಸ್ ಇಲ್ಲ. ಅದರಲ್ಲಿರುವುದೆಲ್ಲಾ ಜನರಲ್ ಥಿಂಗ್. ನಾವು ಒಂದು ವಿಷಯವನ್ನು ಮರೆತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅದರಲ್ಲಿರುವುದು ಜನರಲ್ ಆಗಿರುವ ಅಬ್ಜರ್‌ವೇಷನ್‌ಗಳೇ ಹೊರತು ಕಾವೇರಿಗೆ ಸಂಬಂಧ ಪಟ್ಟಂತೆ ಏನೂ ಇಲ್ಲ. ಕಾವೇರಿ ವಿಚಾರ ಅಲ್ಲಿ ಬಂದಿಲ್ಲ. ಸಮಸ್ಯೆ ಇರುವ ಸಬ್ಜೆಕ್ಟ್ ಅದಲ್ಲ.

ಶ್ರೀ ಎಂ. ಸಿ. ನಾಣಯ್ಯ : ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಇಡೀ ದೇಶಕ್ಕೆ ಸಂಬಂಧಪಟ್ಟಂತೆ ಈ ರೀತಿಯಾದ ಡಿಸ್‌ಪ್ಯೂಟ್‌ಗಳ ಬಗ್ಗೆ ಹೇಳಿದ್ದಾರೆಯೇ ಹೊರತು ಅಲ್ಲಿನ ಇಡೀ ಪ್ರೊಸೀಡಿಂಗ್ಸ್‌ನಲ್ಲಿ ಕಾವೇರಿಗೆ ಸಂಬಂಧಪಟ್ಟಂತೆ ಒಂದು ವಾಕ್ಯವೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾವೇರಿ ವಿಚಾರ ಇಲ್ಲದಿರಬಹುದು, ಆದರೆ ನಾವು ಟ್ರಿಬ್ಯೂನಲನ್ನು ಒಪ್ಪಿಕೊಂಡರೆ ಅದು ನಮಗೆ ಅಪ್ಲಿಕಬಲ್ ಆಗುವುದಿಲ್ಲವೆ? ಮನೆಯೊಳಗೇ ಕುಳಿತು ಬೆಂಕಿ ಹಚ್ಚಿಕೊಂಡರೆ ನಮಗೆಲ್ಲಿ ಬೆಂಕಿ ಹಚ್ಚುತ್ತದೆಂದರೆ ಹೇಗೆ? ಪಕ್ಕದ ಮನೆಗೆ ಬೆಂಕಿ ಬಿದ್ದರೆ ನಮ್ಮ ಮನೆಗೂ ಬೆಂಕಿ ಹಚ್ಚುತ್ತದೆ.

ಶ್ರೀ ಸಿದ್ದರಾಮಯ್ಯ : ಇಂಟರ್ ಸ್ಟೇಟ್ ಡಿಸ್‌ಪ್ಯೂಟ್ ಆ್ಯಕ್ಟ್‌ನ7ನೇ ಚಾಪ್ಟರ್‌ಗೆ ಸಂಬಂಧಪಟ್ಟಂತೆ ಸರ್ಕಾರಿಯಾ ಕಮೀಷನ್ ಶಿಫಾರಸ್ಸುಗಳೇನಿದೆ ಅದರ ಬಗ್ಗೆ ಸ್ಟ್ಯಾಂಡಿಂಗ್ ಕಮಿಟಿಯವರು ಕೊಟ್ಟಿರುವ ಶಿಫಾರಸ್ಸುಗಳ ಮೇಲೆ ಅಲ್ಲಿ ಚರ್ಚೆ ನಡೆದಿರತಕ್ಕದ್ದು. ಅದರ ಬಗ್ಗೆ ನಮ್ಮ ನಿಲುವೇನು ಎಂಬ ಬಗ್ಗೆ ಲಿಖಿತವಾಗಿ ಮತ್ತು ಭಾಷಣದ ಮೂಲಕ ಸ್ಪಷ್ಟವಾಗಿ ಕೊಟ್ಟಿದ್ದೇವೆ. ಅಲ್ಲಿ ಕಾವೇರಿಯ ಬಗ್ಗೆ ಚರ್ಚೆಯಾಗಲಿಲ್ಲ.

SRI K.N. NAGEGOWDA : The standing Committee Members. Home Minister of the Union Government is the Chairman of the Standing Committee; Finance Minister, Industries Minister of the Union Government, Defence Minister of the Union Government, Assam Chief Minister, Orissa Chief Minister....."

ಶ್ರೀಮತಿ ಪ್ರಮೀಳ ನೇಸರ್ಗಿ : ಎಲ್ಲರೂ ಅವರುಗಳೇ ಇದ್ದಾರಲ್ಲಾ? ಸ್ಟಾಂಡಿಂಗ್ ಕಮಿಟಿಗೆ ನಮ್ಮನ್ನು ಸೇರಿಸಿ ಎಂದು ಹೇಳಬೇಕು.

SRI K.N. NAGEGOWDA : This has been constituted by the Union Government. How can we...?

SRI M. VEERAPPA MOILY : The Industries Minister is a Tamilian, the Finance Minister is a Tamilian. ಆ ಕಲ್ಲರ್ ಎಲ್ಲಿ ಹೋಗುತ್ತದೆ?

SRI K.N. NAGEGOWDA : By designation they might have come. ತಾವು ಈ ರೀತಿ ಹೇಳಿಬಿಟ್ಟರೆ ಬಹಳ ಕಷ್ಟವಾಗುತ್ತದೆ. ತಾವು ಹೇಳುವುದನ್ನು ಒಪ್ಪಿಕೊಳ್ಳೋಣ. ಅಸ್ಸಾಂ, ಓರಿಸ್ಸಾ, ಪಶ್ಚಿಮ ಬಂಗಾಳ, ರಾಜಾಸ್ತಾನ, ಮಹಾರಾಷ್ಟ್ರ ಮುಖ್ಯಮುತ್ರಿಗಳವರು ಏನು ಸ್ಟ್ಯಾಂಡಿಂಗ್ ಸಮಿತಿಯವರು ಐದಕ್ಕೂ ಕೊಟ್ಟಿದ್ದಾರೆ. ಆ ಐದಕ್ಕೂ ನಮ್ಮ ಅಬ್ಜೆಕ್ಷನನ್ನು ಫೈಲ್ ಮಾಡಿದ್ದೇವೆ. ತಾವು 15ರಂದು ಗೃಹಸಚಿವರಿಗೆ ಏನು ಕಾಗದ ಬರೆದಿದ್ದೀರಿ ಎನ್ನತಕ್ಕ ಮಾತನ್ನು ಅವರು ಕೇಳುತ್ತಿದ್ದಾರೆ. ಹೋಮ್ ಮಿನಿಸ್ಟರಿಯವರು ಎಲ್ಲಾ ಇಂಟರ್‌ಸ್ಟೇಟ್ ಅಫೇರ್ಸನ್ನು ನೋಡಿಕೊಳ್ಳುವುದರಿಂದ ಅವರಿಗೆ ಮೊದಲ ಪತ್ರವನ್ನು ಬರೆದಿದ್ದೇನೆ. ಅಲ್ಲಿನ ಪ್ರೊಸೀಡಿಂಗ್ಸ್ ಬಂದಮೇಲೆ ಅದರ ಬಗ್ಗೆ ಮತ್ತೊಮ್ಮೆ ಚರ್ಚೆಮಾಡಿ, ಅಡ್ವೋಕೇಟ್ ಜನರಲ್‌ರವರನ್ನು ಭೇಟಿ ಮಾಡಿ ಅವರ ಸಲಹೆಗಳನ್ನು ತೆಗೆದುಕೊಂಡು ಅಂತಿಮವಾಗಿ ಪ್ರಧಾನಮಂತ್ರಿಯವರಿಗೆ ಪತ್ರವನ್ನು ಬರೆಯಬೇಕು ಎಂಬ ದೃಷ್ಟಿಯಿಂದ, ತಕ್ಷಣಕ್ಕೆ ನಮ್ಮ ಪ್ರೊಟೆಸ್ಟನ್ನು ರಿಜಿಸ್ಟರ್ ಮಾಡುವುದಕೋಸ್ಕರ ಅಧ್ವಾನಿಯವರಿಗೆ 15.4.98ರಂದು "kindly refer to the record note on discussion at the 4th meeting of the Inter-State Council held on 28.11.97. I represented the State of Karnataka at this meeting and expressed the views of the State Government during the said meeting. On going through the Record Note in respect of the Inter-State River Water Dispute, it is surprising

to notice that the recommendations have been recorded as though it was the shared view of all the Members present at the Inter-State Council. I find to my dismay that the views expressed by me which are different from the recommendations of the Inter-State Council have not even been recorded or referred to in the proceedings, which goes against the very principle and spirit under which the Inter-State Council has been constituted. The view of my Government, in respect of the subject expressed by me in the meeting, I have given in the extract enclosed in the letter. The second point mentioned here, in the Inter -State Council, we would like to arrive at a consensus on this recommendation No.212, 215, and 216 of the Sarkaria Commission, the subject may be discussed again in the next Inter-State Council meeting ... in the last meeting of the Inter-state Council represented by my State. I strongly protest about the manner in which the Minutes have been recorded. In respect of other items in the record note, I will be sending the view of the State in due course. "Siddaramaiah, Deputy Chief Minister, Karnataka." This is the letter we have written at the present, Sir.

ಶ್ರೀಮತಿ ಪ್ರಮೀಳನೇಸರ್ಗಿ : ತಾವು 15ನೇ ತಾರೀಖು ಪತ್ರವನ್ನು ಬರೆದಿದ್ದೀರಿ, ಆದರೆ ಅದು ಡಿಸ್‌ಪ್ಯಾಚ್ ಆಗಿದೆಯೇ?

ಶ್ರೀ ಕೆ.ಎನ್. ನಾಗೇಗೌಡ : ಫ್ಯಾಕ್ಸನ್ನೇ ಕಳುಹಿಸಿದ್ದೇವೆ. ತಾವು ಸರ್ಕಾರದ ಬಗ್ಗೆ ಇಷ್ಟೊಂದು ಅಪನಂಬಿಕೆ ಪಡಬಾರದು. ಇದು ಸ್ವಂತ ಕೆಲಸವಲ್ಲ, ಇದು ಸರ್ಕಾರದ ಕೆಲಸ. ಸಾರ್ವಜನಿಕರ ಕೆಲಸ. ಇಲ್ಲಿ ಯಾವ ರೀತಿ ಪ್ರೊಸೀಡಿಂಗ್ಸ್ ನಡೆಯುತ್ತದೆಂದರೆ, ಮುಂದಿನ ಸಭೆಯಲ್ಲಿ ಈ ವಿಚಾರಗಳು ಚರ್ಚೆಗೆ ಬರುತ್ತದೋ ಇಲ್ಲವೋ ಎನ್ನತಕ್ಕ ಅನುಮಾನ ಬಂದಿದ್ದರಿಂದ ಮತ್ತೆ ಅದನ್ನು ಕನ್‌ಫರ್ಮ್ ಮಾಡಿಸಿದ್ದೇವೆ. ಇಂಟರ್ ಸ್ಟೇಟ್ ಕೌನ್ಸಿಲ್ ಸೆಕ್ರೆಟೇರಿಯೇಟ್‌ನಲ್ಲಿ how it functions, minutes confirmation ಮತ್ತೆ ಇದು ಬರುತ್ತದೆಯೇ ಇಲ್ಲವೋ ಎಂಬುದಕ್ಕೆ the following item continues in the agenda. How the agends is formed in the Inter-State Council Meeting is, the first agenda in the Inter-State Council is always action taken on the decision taken in an meeting of the Inter-State Concil. That is ann example. Action taken on the decision is the first subject in the agenda in every meeting.

ಶ್ರೀ ಎಂ. ವೀರಪ್ಪಮೊಯಿಲಿ : ಪ್ರೊಸೀಡಿಂಗ್ಸ್‌ಗೂ ಆಕ್ಷನ್ ಟೇಕನ್‌ಗೂ ಬಹಳ ವ್ಯತ್ಯಾಸ ಇರುತ್ತದೆ. Approval of the previous proceedings ಕೊಡದಿದ್ದರೆ ಏನು ಪ್ರಯೋಜನ? ಆ ಅಂಶ ಬರುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಇಂಡಿವಿಜ್ಯುಯಲ್ ಆಗಿ ಇರತಕ್ಕ ಮ್ಯಾಟರ್ಸ್‌ಗಳಿಗೆ, ನೀವು ಪ್ರಧಾನ ಮಂತ್ರಿಯವರನ್ನು ನೋಡಿದ್ದೀರಿ ಅವರಿಗೆ ಏನು ಹೇಳಿದ್ದೀರೆಂದು ಕೇಳಿದರು. ಮಾನ್ಯ ಮುಖ್ಯ ಮಂತ್ರಿಯವರು, ಉಪಮುಖ್ಯಮಂತ್ರಿಯವರು, ನಾವುಗಳೆಲ್ಲರೂ ಪ್ರಧಾನ ಮಂತ್ರಿಯವರನ್ನು 8ನೇ ತಾರೀಖು ಭೇಟಿ ಮಾಡಿ, ಆ ಐದು ಸಭೆಗಳು ಯಾವ್ಯಾವ ರೀತಿ ಆಯಿತು, ಅವರು ಯಾವ್ಯಾವ ರೀತಿ ಮಾತನಾಡಿದರು, ಯಾವ ರೀತಿಯಲ್ಲಿ ಅಂಡರ್ ಸ್ಟ್ಯಾಂಡಿಂಗ್‌ನಲ್ಲಿದ್ದರು ಎಂಬ ಬಗ್ಗೆ ಸಂಕ್ಷಿಪ್ತವಾಗಿ ಅವರ ಗಮನಕ್ಕೆ ತಂದಿದ್ದೇವೆ. ಮೊದಲ, ಎರಡನೆಯ ಮತ್ತು ಮೂರನೆಯ ಸಭೆಗಳಲ್ಲಿ ವಿಶೇಷವಾಗಿ ಸುಪ್ರೀಮ್ ಕೋರ್ಟ್‌ನ ನಿರ್ದೇಶನದ ಮೇರೆಗೆ ಮಾತುಕತೆಯಾಯಿತು. ಆ ಆಧಾರವನ್ನು ಇಟ್ಟುಕೊಂಡು ಜನವರಿ 4ರಂದು ಅವರು ಮಾತುಕತೆಗೆ ಯಾವ ರೀತಿ ತಪ್ಪಿಸಿಕೊಂಡರು ಎಂಬುದನ್ನು, ಪ್ರಿಲಿಮಿನರಿ ಸಭೆಗಳಲ್ಲಿ ಏನು ಚರ್ಚೆ ಮಾಡಿದ್ದೇವೆ ಎಂಬುದನ್ನು ಪ್ರಧಾನಿಯವರ ಗಮನಕ್ಕೆ ತಂದಿದ್ದೇವೆ. ಅವರಿಗೆ ಕೊಟ್ಟಿರುವ ಮೆಮೊರ್‍ಯಾಂಡಂನ ಪ್ರತಿಯನ್ನು ತಮಗೂ ಒದಗಿಸುತ್ತೇನೆ. ಅದು ದೊಡ್ಡದಾಗಿರುವುದರಿಂದ, ಅದರ ಡೀಟೇಲ್‌ಗಳನ್ನು ಬರೆದು ಕೊನೆಯಲ್ಲಿ "At this stage I whole-heartedly welcome your Government committed to frame the national water policy. It would therefore be appropriate that any decision on the draft scheme is taken only after the national water policy is framed."

5.50 ಪಿ.ಎಂ.

This is the final content. ಇದರ ಬಗ್ಗೆ ನಾವು ಅವರಿಗೆ ಸ್ಪಷ್ಟವಾಗಿ ವಿವರಿಸಿದ್ದೇವೆ. ಬಹುಶಃ ಅವರು ಕನ್‌ವಿನ್ಸ್ ಆಗಿದ್ದಾರೆಂದು ಅಂದುಕೊಂಡಿದ್ದೇವೆ. ಅವರು ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡಲಿಲ್ಲ. ಡ್ರಾಫ್ಟ್ ಸ್ಕೀಂ ಬಗ್ಗೆ ಮತ್ತೆ ಸ್ಕೀಂ ಮಾಡುವುದಕ್ಕೆ ಅಥಾರಿಟಿ ಮಾಡಿದರೆ again this is going to be a new dispute created. ಎಂಬುದನ್ನು ನಾವು ಅವರಿಗೆ ಹೇಳಿದ್ದೇವೆ. ಅದಕ್ಕೆ ಅವರು ಏನೂ ಪ್ರತಿಕ್ರಿಯೆ ವ್ಯಕ್ತ ಮಾಡಿಲ್ಲ. ನಮ್ಮ ಮೆಮೋರ್‍ಯಾಂಡಂ ಅನ್ನು ಸೀರಿಯಸ್ ಆಗಿ ಕೇಳಿದ್ದಾರೆ. ಎಕ್ಸ್‌ಪ್ಲೈನ್ ಮಾಡಿ ಹೇಳಿದ್ದಾರೆ. ನ್ಯಾಷನಲ್ ವಾಟರ್ ಪಾಲಿಸಿ ಆಗುವವರೆಗೆ, ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಆಗುವವರೆಗೆ ಈ ಸ್ಕೀಂ ಅಥಾರಿಟಿ ಮಾಡುವುದನ್ನು ನಾವು ಈ ಸದನದ ಮೂಲಕ ತೀವ್ರವಾಗಿ ವಿರೋಧ ಮಾಡುತ್ತೇವೆ, ಅದನ್ನು ಮಾಡಕೂಡದು ಎಂದು ಹೇಳತಕ್ಕದ್ದು ಒಂದು. ಮಾನ್ಯ ಹೆಚ್.ಎನ್. ನಂಜೇಗೌಡರು ಹೇಳಿದರು, ಬಹುಶಃ ಅಷ್ಟು ಸುಲಭವಾಗಿ ನಾವು ಅದನ್ನು ಅಂದರೆ ಕಾವೇರಿ ವ್ಯಾಲಿ ಅಥಾರಿಟಿ ಮಾಡುವುದಕ್ಕೆ ಬಿಡುವುದಿಲ್ಲ. ಈ ವಿಚಾರದಲ್ಲಿ ನಮಗೆಲ್ಲಾ ಹೇಳಿಕೊಟ್ಟಿರುವುದೇ ಅವರು. ಆದುದರಿಂದ ತಮಗೆ ಗೊತ್ತಿದೆ, ಕಾವೇರಿ ವ್ಯಾಲಿ ಅಥಾರಿಟಿ ಅಲ್ಲ, ಈ ದೇಶದಲ್ಲಿ ಯಾವುದೇ ರಿವರ್ ವ್ಯಾಲಿ ಅಥಾರಿಟಿ ಆಗಿಲ್ಲ. ಬಹುಶಃ ಅದು ಶ್ರೀಮತಿ ಜಯಲಲಿತಾ ಅವರ ಆಸೆ ಇರಬಹುದು. ಆದರೆ ತಮಿಳ್ನಾಡು ಸರ್ಕಾರದಿಂದ ಒಂದು ತೊಂದರೆ ಏನಾಗುತ್ತಿದೆ ಎಂಬ ಬಗ್ಗೆ ನಾವು ಶ್ರೀ ವಾಜಪೇಯಿ ಅವರ ಹತ್ತಿರ ಒಂದು ಪಾಯಿಂಟ್ ಹೇಳಿದ್ದೇವೆ. ಏತಕ್ಕೆ ಸ್ಕೀಂ ಬೇಕಾಗಿಲ್ಲವೆಂದು ಕೇಳಿದಾಗ ಮೂರು ಕಾರಣಗಳನ್ನು ಕೊಟ್ಟಿದ್ದೇವೆ. ಈ ಟ್ರಿಬ್ಯೂನಲ್ ಒಂದು ವರ್ಷದಲ್ಲಿ ಫೈನಲ್

ಅವಾರ್ಡ್ ಕೊಡುವ ಹಂತದಲ್ಲಿದೆ. ತಮಿಳ್ನಾಡಿನ 8 ವಿಟ್ನೆಸ್‌ಗಳು ಮುಗಿದು ಹೋಗಿವೆ. ಕರ್ನಾಟಕದ ವಿಟ್‌ನೆಸ್ ಒಂದೇ ಆಗಿರುವುದು. ಇನ್ನು ಒಂದು ವರ್ಷದಲ್ಲಿ ಫೈನಲ್ ಅವಾರ್ಡ್ ಬಂದಿರುವುದರಿಂದ ನೀವು ಮತ್ತೆ ಇದಕ್ಕೆ ಒಂದು ಅಥಾರಿಟಿ ಕ್ರಿಯೇಟ್ ಮಾಡುವ ಅವಶ್ಯಕತೆ ಬರುವುದಿಲ್ಲವೆಂದೂ, ಇದರಿಂದ ಪುನಃ ಒಂದು ಹೊಸ ವಿಷಯ ಸೃಷ್ಟಿಯಾಗುತ್ತದೆಂಬ ಒಂದು ಅಂಶವನ್ನು ಕೂಡ ಹೇಳಿದ್ದೇವೆ. ಎರಡನೆಯ ವಿಚಾರ ನಾವು ಶ್ರೀ ವಾಜಪೇಯಿ ಅವರಿಗೆ ಹೇಳಿರುವುದು; After the Interim Award from 1990-91 to this point, except 1996 a distress year, ನೀರು ಬಿಡುವುದಕ್ಕೆ ತೊಂದರೆ ಆದಾಗ on the directive of the Supreme Court, the Prime Minister has convened concerned Leaders of these States, ಕರೆದು 6 ಟಿಎಂಸಿ. ನೀರು ಬಿಡಿ ಎಂದು ಹೇಳಿರುವುದು ಬಿಟ್ಟರೆ ಇನ್ನು ಯಾವ ಪ್ರಕರಣದಲ್ಲೂ ಇಂಟರಿಂ ಅವಾರ್ಡ್ ಆದಾಗಿನಿಂದ ನಾವು ಇವತ್ತಿನವರೆಗೆ ತಮಿಳ್ನಾಡಿಗೆ ನೀರು ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ಹೇಳಿದ್ದೇವೆ. That has very much impressed him. ತಮಿಳ್ನಾಡಿನಿಂದ ಆಗುತ್ತಿರುವ ಒಂದೇ ಒಂದು ತೊಂದರೆ ಅಂದರೆ 26 ಸಿಟ್ಟಿಂಗ್ಸ್ ನಡೆದಿವೆ. ತಮಿಳ್ನಾಡು ವಿಟ್ನೆಸ್ಸಿಗೆ. 26 ಸಿಟ್ಟಿಂಗ್‌ಗಳಲ್ಲಿ 8 ವಿಟ್ನೆಸ್ ಅನ್ನು ನಮ್ಮ ಅಡ್ವೊಕೇಟ್‌ಗಳು ಕಂಪ್ಲೀಂಟ್ ಮಾಡಿದ್ದಾರೆ. 21 ಸಿಟ್ಟಿಂಗ್ಸ್ ಟ್ರಿಬ್ಯುನಲ್‌ನಲ್ಲಿ ನಡೆದಿವೆ. ಒಂದು ವಿಟ್ನೆಸ್‌ನಲ್ಲಿ ತಮಿಳ್ನಾಡಿನವರು ಕರ್ನಾಟಕದವರಿಗೆ ಕ್ರಾಸ್ ಮಾಡಿದ್ದಾರೆ. ಅದೂ ಕೂಡ ಒಂದೇ ಒಂದು ಕರ್ನಾಟಕ ವಿಟ್ನೆಸ್ ಆಗಿರುವುದು. ಅದೂ ಸಹ ಡಾ. ಶಿವರಾಮ ಕಾರಂತರು ತೀರಿಹೋಗಿದ್ದಾರೆ. ಈಗ ನಮಗೆ ಬೇಕಾಗಿರುವುದು ಮಾತುಕತೆ. We still believe in amicable settlement. The State Government stand is, ನಾವು ಪರಸ್ಪರ ಮಾತುಕತೆಯಲ್ಲಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂಬ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಆದರೆ ತಮಿಳ್ನಾಡಿನವರು ಫೈನಲ್ ಅವಾರ್ಡ್ ಬಾರದೆ ಇರುವ ಹಾಗೆ ಮಧ್ಯೆ ಸ್ಕೀಂ ಮಾಡಿಸಿಕೊಳ್ಳಬೇಕೆಂದು ಮಾಡುತ್ತಿದ್ದಾರೆ. ನಮ್ಮ ಕರ್ನಾಟಕದ 6 ವಿಟ್ನೆಸ್‌ನಲ್ಲಿ ಒಂದೇ ವಿಟ್ನೆಸ್ ಆಗಿರುವುದು. 21 ಸಿಟ್ಟಿಂಗ್ಸ್ ಮಾಡಿ they are deliberately delaying in the Tri bunal, I do not know, ಅದು ಕೋ-ಅಪರೇಟ್ ಮಾಡದೆ ಸ್ಲೋಡೌನ್ ಮಾಡಿರುವುದನ್ನು we have to strongly protest and we are going to write to the Prime Minister, ಈ ರೀತಿ ಮಾಡಿದ್ದಾರೆ. ತಮಿಳ್ನಾಡಿನಲ್ಲಿ 8 ವಿಟ್ನೆಸ್ ಅನ್ನು 26 ಸಿಟ್ಟಿಂಗ್ಸ್‌ನಲ್ಲಿ ಮುಗಿಸಿದ್ದಾರೆ. 21 ಸಿಟ್ಟಿಂಗ್ಸ್‌ನಲ್ಲಿ ಒಂದು ವಿಟ್ನೆಸ್ ಕೂಡ ಕರ್ನಾಟಕದಲ್ಲಿ ಮಾಡಿಲ್ಲ. ಫೈನಲ್ ಅವಾರ್ಡ್ ತಕ್ಷಣ ಆಗಬೇಕೆಂಬ ವಾದವನ್ನು ಅವರ ಮುಂದೆ ಇಟ್ಟು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಆಗಬೇಕು, ಅದು ಆಗುವವರೆಗೆ ಯಾವುದೇ ಕಾರ್ಯ ಮಾಡಕೂಡದು ಎಂಬುದನ್ನು ಮಾಡಿದ್ದೇವೆ. ನಾನು ಬೇರೆ ವಿಚಾರಗಳನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದು ಅಷ್ಟು ಸಮಂಜಸ ಅಲ್ಲವೆಂಬುದು ಒಂದು ಮಾತು. ಆದರೆ ಮಾನ್ಯ ಯಡಿಯೂರಪ್ಪನವರು ಒಂದು ಮಾತು ಹೇಳಿದರು. ಆ ಮಾತಿಗೆ ಉತ್ತರ ಕೊಡಲೇಬೇಕಾಗಿದೆ ಅನ್ನಿಸುತ್ತದೆ. ಮಾನ್ಯ ವಾಜಪೇಯಿ ಅವರ ಕೈಯನ್ನು ಕಟ್ಟಿಬಿಟ್ಟಿದ್ದೀರಿ ಎಂದು ಒಂದು ಮಾತು ಹೇಳಿದರು. ನಾವು ವಾಜಪೇಯಿ ಅವರ ಕೈಯನ್ನು ಕಟ್ಟಿಲ್ಲ. ನಾವು ಇಂಟರ್ ಸ್ಟೇಟ್ ಕೌನ್ಸಿಲ್ ಪ್ರೊಸೀಡಿಂಗ್ಸ್‌ನಲ್ಲಿ except the two items that we are strongly

protesting, one item that is 7th item, ಆದರೆ 7ನೇ ಐಟಂ ಅನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ತಾವು ಅವರ ಗಮನಕ್ಕೆ ತರಬೇಕು. The Inter State Council also approved the recommendation of the Standing Committee that the broad principle that is National Water Policy Guidelines, for sharing of the river water by a State should be awarded by Inter State Council secretariat in consultation with the Ministry of Water Resources and place before the Inter State council for its consideration in due course. ಎಂದು ಶಿಫಾರಸ್ಸು ಮಾಡಿದ್ದಾರೆ. The same Inter State Council met on 20-11-97. This is also the recommendation of the Inter State Council meeting. ಇದರಲ್ಲಿ ಅವರು ಬಹಳ ಬ್ರಾಡ್ ಪ್ರಿನ್ಸಿಪಲ್ ಆಗಿ ಷೇರಿಂಗ್ ವಾಟರ್‌ನಲ್ಲಿ ಆಗಬೇಕೆಂದು ಹೇಳಿದ್ದಾರೆ. This is going to help our Prime Minister. ನೀವು ಬೇಕಾದರೆ ಕಾಗದ ಬರೆಯಿರಿ. ಈ ರೀತಿ ಇದೆ, ಆದುದರಿಂದ ಇದು ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಆಗುವವರೆಗೆ ಟ್ರಿಬ್ಯೂನಲ್ ಇರಲಿ, ಮತ್ತೊಂದು ಇರಲಿ, ಸುಪ್ರೀಂ ಕೋರ್ಟ್ ಇರಲಿ ಎಲ್ಲವನ್ನೂ ಡೆಫರ್ ಮಾಡಿ within a specific time-doesn't matter within three months, six months or four monthsಕರೆದು ನಾವು ಮತ್ತೆ ಎಲ್ಲಾ ಮುಖ್ಯಮಂತ್ರಿಗಳನ್ನು ಕರೆಸಿ ಮಾತನಾಡೋಣ. ಮಾನ್ಯ ನರಸಿಂಹರಾಯರ ಕಾಲದಲ್ಲಿ ಆದ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ನೋಡಿದೆ. ಆಗ ಡೀಪ್ ಆಗಿ ಮೀಟಿಂಗ್ ನಡೆದಿರತಕ್ಕದ್ದನ್ನು ನೋಡಿದ್ದೇನೆ. ಕ್ಲಾಜ್ ಬೈ ಕ್ಲಾಜ್ ಓದಿದ್ದೇನೆ. ನಿಮ್ಮ ಹತ್ತಿರ ಎಲ್ಲಾ ಕುಳಿತು ಮಾತನಾಡಿ ಇದು ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತದೆ, ಮತ್ತು ಅದರಲ್ಲಿ ಯಾವ ಯಾವ ಮೀಟಿಂಗ್ಸ್ ಆಗಿದೆ ಎಂದು ನೋಡಿ ಕ್ಲಾಜ್ ಬೈ ಕ್ಲಾಜ್ ಓದಿದ್ದೇನೆ. ಆದುದರಿಂದ ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗುವ ಅವಶ್ಯಕತೆ ಇಲ್ಲ. ಇದರ ಬಗ್ಗೆ ಮತ್ತೊಂದು ಸಾರಿ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಮಾಡುವಾಗ ಎಲ್ಲಾ ವಿರೋಧ ಪಕ್ಷದ ನಾಯಕರ, ಮುಖಂಡರುಗಳ ಜೊತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಾನೂನು ಸಚಿವರು ಕುಳಿತುಕೊಂಡು ಚರ್ಚೆ ಮಾಡಿ ಮುಂದಿನ ಸಾರಿ ಪ್ರಧಾನ ಮಂತ್ರಿಗಳು ಕರೆಯುವ ಕಾಲದಲ್ಲಿ ಅವರ ಸಲಹೆ ತೆಗೆದುಕೊಳ್ಳುತ್ತೇವೆ. ಒಟ್ಟಾರೆ ಕೊನೆಯದಾಗಿ ಒಂದು ಮಾತು ಹೇಳುವುದಾದರೆ, ಈಗ ಏನು ವಾದ ಎದ್ದಿದೆ ಆ ವಾದಕ್ಕೆ ಅರ್ಥವಿಲ್ಲ. Inter State Council is only a recommendatory Authority. ಅದಕ್ಕೆ ನಾವು ಒಪ್ಪಿಲ್ಲ. ಅದನ್ನು ಪ್ರೊಟೆಸ್ಟ್ ಮಾಡುವುದಕ್ಕೆ ಇನ್ನೂ ಅವಕಾಶಗಳು ಸಾಕಷ್ಟು ಇವೆ. ಇದಕ್ಕೆ ಲೀಗಲ್ ಫೋರ್ಸ್ ಇಲ್ಲ. ಇದನ್ನು ರಾಜಕೀಯವಾಗಿ ಅವರು ಬಳಸಿಕೊಳ್ಳುವುದಿಲ್ಲ. ಏನೋ ಒಂದು ಗಾಬರಿ ಆಗಿರಬಹುದು. ಅಗ್ರೀಡ್ ಅಗ್ರೀಡ್ ಅಂದತಕ್ಷಣ ಸ್ಟೇಟ್ ಇಂಟರೆಸ್ಟ್ ಹೋಗಿದೆ ಎಂಬ ಗಾಬರಿ ಜಾಸ್ತಿ ಬಂದಿರಬಹುದು. ಆ ಗಾಬರಿ ಬಂದಿಲ್ಲವೆಂದು ನಾನು ಹೇಳುವುದಿಲ್ಲ. ಗಾಬರಿ ಆದಾಗ ತರಾಟೆಗೆ ತೆಗೆದುಕೊಳ್ಳಬೇಕೆಂದು ಆಲೋಚನೆ ಮಾಡಿದ್ದೇವೆ. ಆದರೆ ಇವರ ಗಾಬರಿಗೆ ಅರ್ಥವಿಲ್ಲ.

ಶ್ರೀ ಬಿ.ಎಸ್ ಯಡಿಯೂರಪ್ಪ : ಇಂಟರ್ ಸ್ಟೇಟ್ ಕೌನ್ಸಿಲ್ ಕಮಿಟಿಯಲ್ಲಿ 12 ಜನ ಸದಸ್ಯರು ಯಾರಿದ್ದಾರೆ ಅವರಲ್ಲಿ ನಮ್ಮವರು ಯಾರೂ ಇಲ್ಲ. ಆ ಒಂದು ವ್ಯವಸ್ಥೆ ಇದೆ. ಅದರಂತೆ ಯಾರು ಇರಬೇಕು ಅವರು ಇದ್ದಾರೆ, Is it not our duty. ಇಂಟರ್ ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಯಾರಿದ್ದಾರೆ ಸದಸ್ಯರು ಅವರ ಹತ್ತಿರ ಹೋಗಿ ಸ್ಟ್ಯಾಂಡಿಂಗ್ ಕಮಿಟಿ ರೆಸಲ್ಯೂಷನ್ ಬಗ್ಗೆ ಪಾಯಿಂಟ್ ಬೈ ಪಾಯಿಂಟ್ ನಾವು ರಿಪ್ಲೈ ಮಾಡಿದ್ದೇವೆ. ಮಾನ್ಯ ಹಣಕಾಸಿನ ಸಚಿವರು ಈ ರೀತಿ ಮಾತನಾಡಿದ್ದಾರೆ ನಮ್ಮ ರಾಜ್ಯದ ಅಭಿಪ್ರಾಯ ಈ ರೀತಿ ಇದೆ. ನಾವು ಇದನ್ನು ಪಾಸ್ ಮಾಡುವ ಕಾಲದಲ್ಲಿ ನಮ್ಮ ಅಭಿಪ್ರಾಯ ಈ ರೀತಿ ಇದೆ ಎಂದು ಹೇಳಿದ್ದೇವೆ. ಸಂಬಂಧಪಟ್ಟ ಸದಸ್ಯರು ಆ ಕಾಲದಲ್ಲಿ ಯಾರಿದ್ದರು? ಶ್ರೀ ಗುಜ್ರಾಲ್ ಸರ್ಕಾರ ನಿಮ್ಮೆಲ್ಲರ ಬೆಂಬಲದಿಂದ ಇದ್ದ ಸರ್ಕಾರ ಇತ್ತು. ಯಾರೇ ಇರಲಿ ಆ ಸದಸ್ಯರಿಗೆ ನಮ್ಮ ನಿಲುವು ಏನಿದೆ ಎಂದು ಅವರಿಗೆ ಮನದಟ್ಟು ಮಾಡಿ, ಅವರು ನಮ್ಮ ಒಂದು ಹಿತಕ್ಕೆ ಧಕ್ಕೆ ಬಾರದ ರೀತಿಯಲ್ಲಿ, ರೆಸಲ್ಯೂಷನ್ ಆಗದಂತೆ, ತೀರ್ಮಾನವಾಗದಂತೆ ನೋಡಿಕೊಳ್ಳುವ ಹಾಗೆ ಇನ್‌ಫ್ಲ್ಯೂಯೆನ್ಸ್ ಮಾಡಬೇಕಲ್ಲಾ. ಅದಕ್ಕೆ ತಾನೇ ಸರ್ಕಾರ ಇರುವುದು. ಯಾವುದೇ ಪಕ್ಷ ಇರಲಿ.

ಶ್ರೀ ಕೆ.ಎನ್. ನಾಗೇಗೌಡ : ಸ್ಟ್ಯಾಂಡಿಂಗ್ ಕಮಿಟಿ ರಿಪೋರ್ಟ್ ಬಂದಮೇಲೆ ಕ್ಲಾಜ್ ಬೈ ಕ್ಲಾಜ್ ಏನು ಆನ್ಸರ್ ಮಾಡಿ ಪ್ರೊಟೆಸ್ಟ್ ಮಾಡಿದ್ದೇವೆ, ಅದರಲ್ಲಿ ರಾಜ್ಯ ಸರ್ಕಾರ ಮಾಡುವ ಕರ್ತವ್ಯದಲ್ಲಿ ನಾವು ಫೈಲ್ ಆಗಿಲ್ಲ. ಅದರ ಅವಶ್ಯಕತೆಯೂ ಇಲ್ಲ. We have got our share in the Inter State Council. ಪುನಃ ಬರುತ್ತದೆ, ಮಾಡೋಣ. ಒಟ್ಟಿನಲ್ಲಿ ಹೇಳುವುದಾದರೆ, ಸರ್ಕಾರ ಎಡವಿಲ್ಲ. ಕಾವೇರಿ ವಿಚಾರದಲ್ಲಿ ಶ್ರೀ ಮೊಯಿಲಿಯವರ ಕಾಲದಲ್ಲಿ ನಿಮಗೆ ಹೇಳುವುದಾದರೆ ಮಾನಿಟರಿ ಸೆಲ್ ಎಂದು ಬಂತು. I was the man who strongly stood with Mr. Veerappa Moily. Eight Ministers of his Cabinet, after ತಾವು ಏನು 8 ಜನ ಮಂತ್ರಿಗಳು ಕ್ಯಾಬಿನೆಟ್‌ನಲ್ಲಿದ್ದಾಗ ಪತ್ರಿಕಾಗೋಷ್ಠಿ ಕರೆದು ಒಂದೇ ರಾಜಕೀಯ ಪಕ್ಷದವರ ಮೇಲೆ, ಕೇಂದ್ರ ಸರ್ಕಾರದ ಒಬ್ಬ ಮಂತ್ರಿ ಶ್ರೀ ವಿ.ಸಿ. ಶುಕ್ಲ ಅವರ ಮೇಲೆ, the senior most leader in the Congress Party. ಅವರಿಗೆ ಅಟ್ಯಾಕ್ ಮಾಡಿದವರು along with Mr. Moily, I am also one person. ಶ್ರೀ ವಿ.ಸಿ. ಶುಕ್ಲ ಅವರು ತಮ್ಮ ರಾಜಕೀಯ ಜೀವನಮಾನಪರ್ಯಂತ ನಮ್ಮ ಮೇಲೆ ಕಣ್ಣು ಬಿಡುತ್ತಾರೆ, ಬಿಟ್ಟರೆ ಬಿಡುತ್ತಾರೆ. ಈಗ ಆ ವಿಚಾರ ಇಲ್ಲ. ನಾನು ಏತಕ್ಕೆ ಹೇಳುತ್ತೇನೆಂದರೆ, ಅವರಾಗಲಿ, ಬಂಗಾರಪ್ಪನವರಾಗಲಿ, ನಂಜೇಗೌಡರಾಗಲಿ ಯಾರೂ ಕೂಡ ಎಡವಿಲ್ಲ. ಕರ್ನಾಟಕ ರಾಜ್ಯದ ಹಿತವನ್ನು ಬಲಿ ಕೊಡುವುದಕ್ಕೆ I don't think there is not even one person in Karnataka ಆದುದರಿಂದ ಆ ಅನುಮಾನ ಬೇಡ, ರಾಜಕೀಯ ಬೇಡ. ಆತ್ಮಸಾಕ್ಷಿಯಿಂದ ಕಾವೇರಿ ವ್ಯಾಲಿ ಅಥಾರಿಟಿ ಆದರೆ ಎಲ್ಲದಕ್ಕೂ ಸಿದ್ಧರಾಗೋಣ, ಯಾವುದೇ ಹೋರಾಟಕ್ಕೂ ಸಿದ್ಧರಾಗೋಣ. ಅದರಲ್ಲಿ ಅನುಮಾನ ಬೇಡ. ಡ್ರಾಫ್ಟ್ ಸ್ಕೀಂ ಬಂದು ಆಗಿಯೇ ಹೋಯಿತು ಅಂದರು. Another four weeks they have given. Luckily the new Government has come. The Supreme Court has already

directed the Union Government to send its comments within four weeks. We have got another three weeks time.ಇದೇ ರೀತಿ ನಡೆಯುತ್ತಿದೆ. ಮಾನ್ಯ ವಾಜಪೇಯಿ ಅವರು ಹೇಳಿದ್ದಾರೆ. ಇದು ನೂರಾರು ವರ್ಷಗಳ ಸಮಸ್ಯೆ. ಅವರು ನೀರಿಗೆ ಬೆಂಕಿ ಹಾಕಬಾರದೆಂದು ಹೇಳಿದ್ದಾರೆ. ನೀರಿಗೆ ಬೆಂಕಿ ಹಾಕತಕ್ಕ ಮಾತಲ್ಲ. ಆದುದರಿಂದ ಎಲ್ಲರ ವಿಶ್ವಾಸದಿಂದ ಕಾವೇರಿ ಹಿತರಕ್ಷಣೆ ಮಾಡೋಣ; ಮಾಡಿ ಜನರಿಗೆ ಅನ್ಯಾಯ ಆಗದಂತೆ ನೋಡಿಕೋಳ್ಳೋಣ. ಜನರಿಗೆ ಅನ್ಯಾಯ ಆಗಬೇಕೆಂದು ಯಾರೂ ಇಲ್ಲಿ ಬರುವುದಿಲ್ಲ. ಆ ರೀತಿ ಬರುವವರಿಗೆ ಯಾರೂ ಓಟು ಕೊಡುವುದಿಲ್ಲ. ಆದುದರಿಂದ ವಿಶ್ವಾಸ ಇಟ್ಟು ಕೆಲಸ ಮಾಡೋಣ ಎನ್ನುವ ಮಾತನ್ನು ಹೇಳಿ ರೈತರ ಹಿತ ಕಾಪಾಡುವುದಕ್ಕೆ ನಾವೆಲ್ಲಾ ಒಗ್ಗಟ್ಟಾಗಿ ಕೆಲಸ ಮಾಡಿದ್ದೇವೆ. ಸರ್ಕಾರ ಬಹಳ ಯಶಸ್ವಿಯಾಗಿ ಈ ವಿಚಾರದಲ್ಲಿ ಕೆಲಸ ಮಾಡಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಈ ಮಾತನ್ನು ಮಂಡ್ಯದಲ್ಲಿ ಬೇಕಾದರೆ ಹೇಳುತ್ತೇನೆ, ಮೈಸೂರಿನಲ್ಲಿ ಬೇಕಾದರೆ ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಏನು ಭಾಷಣ ಮಾಡಿದ್ದಾರೆ, ಮಾನ್ಯ ಖರ್ಗೆಯವರ ಭಾಷಣ ಏನು ಮಂಡ್ಯದಲ್ಲಿ? ಇವರೆಲ್ಲರ ಭಾಷಣ ಮಂಡ್ಯದಲ್ಲಿ. ಈಗ ಏನಾಯಿತು? ಹಾಸನದಲ್ಲಿ ಏನಾಯಿತು?....

(ಗೊಂದಲ)

ನೀವು ರಾಜಕೀಯ ಭಾಷಣ ಮಾಡಿದರೆ, ರಾಜಕೀಯ ಹೋರಾಟ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಂಡ್ಯದಲ್ಲಿ ಏನಾಯಿತೆಂದು ಮಾನ್ಯ ನಾಗೇಗೌಡರು ಹೇಳಬೇಕಾದರೆ, ಹಾಸನದಲ್ಲಿ ಮಾಲಾಶ್ರೀ ನಿಲ್ಲಿಸಿದ್ದರೆ ಮಾನ್ಯ ದೇವೇಗೌಡರೂ ಸೋತು ಬಿಡುತ್ತಿದ್ದರು.

ಉಪಾಧ್ಯಕ್ಷರು : ದಯಮಾಡಿ ಒಬ್ಬೊಬ್ಬರು ಮಾತನಾಡಿ.

ಶ್ರೀ ಕೆ.ಎನ್. ನಾಗೇಗೌಡ : ವಾಟಾಳ್ ನಾಗರಾಜ್‌ರವರು ಹಾಸನದಲ್ಲಿ ಮಾಲಾಶ್ರೀ ಅವರನ್ನು ಚುನಾವಣೆಯಲ್ಲಿ ನಿಲ್ಲಿಸಿದ್ದರೆ ದೇವೇಗೌಡರು ಸೋತುಬಿಡುತ್ತಿದ್ದರು ಎಂದು ಹೇಳಿದರು. ರಾಮನಗರ ಉಪ ಚುನಾವಣೆಯಲ್ಲಿ ಅಂಬರೀಶ್‌ರವರು ನಿಂತಿದ್ದರು ಏನಾಯಿತು? ಅವೆಲ್ಲಾ ಬೇಡ. ಆ ಮಾತುಗಳನ್ನು ಆಡುವುದಕ್ಕೆ ಹೋದರೆ ರಾಜಕೀಯವಾಗಿ ಬೇಕಾದಷ್ಟು ಮಾತನಾಡಬಹುದು. ಜನ ಓಟು ಕೊಟ್ಟಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಅಪ್ಪರ್ ರೈಫೇರಿಯನ್ ಸ್ಟೇಟ್‌ನವರು ಇದ್ದಾರೋ ಲೋಯರ್ ರೈಪೇರಿಯನ್ ಸ್ಟೇಟ್‌ನವರು ಇದ್ದಾರೋ ಎನ್ನುವುದನ್ನು ದಯವಿಟ್ಟು ಕ್ಲಾರಿಫೈ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ನಾನು ಪುನಃ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಸಂಶಯ ಏನಿದೆ ಅಂದರೆ ನೀವು ಸಮರ್ಥನೆ ಮಾಡಿಕೊಳ್ಳುವುದು ಸರಿಯಿಲ್ಲ. ಏಕೆಂದರೆ ಐಟಂ ನಂ.3 ಪ್ಯಾರಾ 6ರಲ್ಲಿ ಕೊನೆಯ ವಾಕ್ಯ ನೋಡಿ.

"In respect of recommendation No.212 relating to setting up of Tribunal on an application made by a State, it was decided that the disputes already settled should not be reopened."

ಹೌದಾ? ಅದಕ್ಕೇ ನೀವೇನು 7ನೆಯದು ಪ್ಲೀಡ್ ಮಾಡುತ್ತಿದ್ದೀರಿ, ಇನ್ನು ನಮಗೆ ಅವಕಾಶವಿದೆ ಎಂದು. ಅದೇನು?

"The Inter-State Council also approved the recommendations of the Standing Committee that the broad principles for sharing of river water by States should be evolved by Inter-State Council Secretariat in consultation with the Ministry of Water Resources and placed before the Inter-State Council for its consideration in due course."

ಇದು ಹೋಯಿತು ಇದು ನಮಗೆ ಇಲ್ಲ. ಇದು ಯಾರೋ ಬೇರೆಯವರಿಗೆ ಅಪ್ಲಿಕಬಲ್ ಆಗುತ್ತದೆಯೇ ಹೊರತಾಗಿ ನಮಗೆ ಇದರ ಬೆನಿಫಿಟ್ ಸಿಗುತ್ತಿಲ್ಲ. ಅದಕ್ಕೆ ತಾವು ಇದರ ಗೋಜಿಗೆ ಹೋಗಬೇಡಿ. ದಯವಿಟ್ಟು ತಾವು ಒಂದು ಕೆಲಸ ಮಾಡಿ, ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸ್ಮಾಲ್ ರೆಸಲ್ಯೂಷನ್ ಅನ್ನು ನಾನು ಮೂವ್ ಮಾಡುತ್ತೇನೆ. ಇದನ್ನು ಒಪ್ಪುವುದಾದರೆ ಎಲ್ಲರೂ ಕೂಡಿ ಒಪ್ಪೋಣ. ಇಲ್ಲದಿದ್ದರೆ ಬಿಡಿ. ತಾವು ನಾನು ಹೇಳುವುದನ್ನು ಕೇಳಿ. ಇದರ ಉದ್ದೇಶ ಇಷ್ಟೆ. ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಅವೊತ್ತಿನ ದಿನ ನಮ್ಮ ಅಭಿಪ್ರಾಯದ ವಿರುದ್ಧ ನಮ್ಮ ಉಪ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅದರ ವ್ಯತಿರಿಕ್ತವಾಗಿ ಪ್ರೊಸೀಡಿಂಗ್ಸನಲ್ಲಿ ಆಗ್ರೀಡ್ ಆಗ್ರೀಡ್ ಎಂದು ಬಂದಿದೆ. ಅದನ್ನು ತೆಗೆದು ಹಾಕಬೇಕೆಂದು ಇಡೀ ಸದನ ಒಪ್ಪಿದರೆ ಒಂದೇ ನಿರ್ಣಯವನ್ನು ಎಲ್ಲಾ ಪಕ್ಷದವರು ತೆಗೆದುಕೊಂಡಿದ್ದಾರೆ ಎನ್ನತಕ್ಕ ಅಭಿಪ್ರಾಯ ಬರುತ್ತದೆ. ಅದನ್ನು ತಾವೆಲ್ಲರೂ ಒಪ್ಪಬೇಕೆಂದು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಈ ರೀತಿ ಇದೆ. "ಪೂರ್ವ ಪ್ರಧಾನ ಮಂತ್ರಿಗಳಾದ ಐ.ಕೆ. ಗುಜ್ರಾಲ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ 28-11-97ರಲ್ಲಿ ನಡೆದ ಅಂತರ್ ರಾಜ್ಯ ಮಂಡಳಿ ಸಭೆಯಲ್ಲಿ 216ನೇ ನಿರ್ಣಯ ರಾಜ್ಯದ ನದಿ ನೀರಿನ ಹಿತಾಸಕ್ತಿ ನಿಷ್ಪಕ್ಷಪಾತ ಮತ್ತು ನ್ಯಾಯಪರತೆಗೆ ಆಘಾತ ತರುವ ಕಾರಣ ರಾಜ್ಯ ಸರ್ಕಾರದ ವಾದಕ್ಕೆ ವಿರುದ್ಧವಾದ ಕಾರಣ ಇಂದಿನ ಪ್ರಧಾನಮಂತ್ರಿಗಳು ಜರೂರಾಗಿ ತುರ್ತು ಅಂತರ್‌ರಾಜ್ಯ ಮಂಡಳಿ ಸಭೆಯನ್ನು ಕರೆದ ಮೇಲೆ ಕಾಣುತ್ತಿದ್ದ ಅಸಂವಿಧಾನಿಕ ಮತ್ತು ಕಾನೂನುಬಾಹಿರ ನಿರ್ಣಯವನ್ನು ರದ್ದುಗೊಳಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸದನ ಸರ್ವಾನುಮತದ ನಿರ್ಣಯ ಮಾಡುತ್ತದೆ" ನಾನು ಏಕೆ ಹೇಳುತ್ತಿದ್ದೇನೆಂದರೆ......

ಶ್ರೀ ಕೆ.ಎನ್. ನಾಗೇಗೌಡ : ನಾನು ಕ್ರಿಯಾಲೋಪ ಎತ್ತುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಕ್ರಿಯಾಲೋಪ ಏನಿದೆ?

ಶ್ರೀ ಕೆ.ಎನ್. ನಾಗೇಗೌಡ : ನಾನು ಹೇಳುತ್ತೇನೆ. ತಾವು ಇವತ್ತು ಏನು ರೆಸಲ್ಯೂಷನ್ ಮಾಡಬೇಕೆಂದಿದ್ದೀರಿ, ನಾವು ಕ್ರಮ ತೆಗೆದುಕೊಳ್ಳದಿದ್ದರೆ you can ask for that resolution. ಪ್ರೊಸೀಡಿಂಗ್ಸ್ ಅಕ್ಸೆಪ್ಟ್ ಮಾಡಿಕೊಂಡಿಲ್ಲವೆಂದು ಕಾಗದ ಬರೆದ ಮೇಲೆ ರೆಸಲ್ಯೂಷನ್ ಮೂವ್ ಮಾಡುವ ಅವಶ್ಯಕತೆ ಏನಿದೆ? ನಾವು ಕಾಗದ ಬರೆಯದಿದ್ದರೆ, ಪ್ರೊಸೀಡಿಂಗ್ಸ್ ಪ್ರೊಟೆಸ್ಟ್ ಮಾಡದಿದ್ದರೆ such a resolution is required. ಇದೇ ಪಾಲಿಟಿಕ್ಸ್ Let him not do that politics.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಸಹಕಾರ ಕೊಡುತ್ತೇವೆ, ಏನು ಪಾಲಿಟಿಕ್ಸ್ ಇದೆ ಇಲ್ಲಿ? ಇದು ಸರಿಯಿಲ್ಲವೆಂದು ಕಳುಹಿಸುವುದು ತಪ್ಪಾ? ನಾವು ನಿಮ್ಮ ಜೊತೆಯಲ್ಲಿದ್ದೇವೆಂದು ಹೇಳುವುದು ತಪ್ಪಾ?

ಶ್ರೀ ಸಿದ್ದರಾಮಯ್ಯ : ನಾನು ನಿನ್ನೆ ಬಹಳ ಸ್ಪಷ್ಟವಾಗಿ ಬರೆದಿರತಕ್ಕ ಕಾಗದಲ್ಲಿ ತಮಿಳುನಾಡಿಗೂ ನಮಗೂ ಇರತಕ್ಕ ನೀರಿನ ವಿವಾದದ ಬಗ್ಗೆ ಚರ್ಚೆಯಾದ ವಿಚಾರಗಳು ಅಲ್ಲ, ಇದು ಒಂದನೆಯದು. ಎರಡನೆಯದು 17ನೇ ಚಾಪ್ಟರ್ ಸರ್ಕಾರಿಯಾ ಕಮಿಷನ್ ಶಿಫಾರಸ್ಸುಗಳು ಏನಿದೆ ಅದರ ಬಗ್ಗೆ ಸ್ಟಾಂಡಿಂಗ್ ಕಮಿಟಿಯ ಶಿಫಾರಸ್ಸುಗಳನ್ನು ಮಾಡಿ ಅವರು ಕಳುಹಿಸಿದ್ದಾರೆ. "By consensus"- ಇಂಟರ್ ಸ್ಟೇಟ್ ಕೌನ್ಸಿಲ್‌ನವರು ನಮ್ಮ ಅಭಿಪ್ರಾಯಗಳನ್ನು ಕೇಳಿದ್ದಾರೆ. Before the meeting ನಾವು ಸ್ಟಾಂಡಿಂಗ್ ಕಮಿಟಿಯ ರೆಕಮಂಡೇಷನ್‌ಗೆ ನಮ್ಮ ಕಾಮೆಂಟ್ಸ್ ಕಳುಹಿಸಿಕೊಟ್ಟಿದ್ದೇವೆ. ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಅವರು ಏನೇನು ಹೇಳಿದ್ದಾರೋ ಗೊತ್ತಿಲ್ಲ. ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಇಂಟರ್‌ಸ್ಟೇಟ್ ಡಿಸ್‌ಪ್ಯೂಟ್ ಆಕ್ಟ್‌ಗೆ ಸಂಬಂಧಪಟ್ಟ ವಿಚಾರಕ್ಕೆ ಸ್ಪಷ್ಟವಾಗಿ ಹೇಳಿದ್ದೇವೆ. ಅದರ ಮೇಲೆ ನನ್ನ ಭಾಷಣದಲ್ಲೂ ಕೂಡ ನೀವೇನು ಶಿಫಾರಸ್ಸು ಮಾಡಿದ್ದೀರಿ ಅದಕ್ಕೆ ನಮ್ಮ ನಿಲುವು ಈ ತರಹ ಇದೆ ನಾವು ಒಪ್ಪುವುದಿಲ್ಲ ಎನ್ನತಕ್ಕ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಪ್ರೊಸೀಡಿಂಗ್ಸ್ ಅಲ್ಲೇ ನಮ್ಮ ಎದುರುಗಡೆ ರೆಕಾರ್ಡ್ ಆಗಿದ್ದು ಅಲ್ಲ. ಪ್ರೊಸೀಡಿಂಗ್ಸ್ ನಮಗೆ 7ನೇ ತಾರೀಖು ಬಂದಮೇಲೆ ನಿನ್ನೆ ಸ್ಟ್ರಾಂಗ್ ಪ್ರೊಟೆಸ್ಟ್ ಲೆಟರ್ ಬರೆದಿದ್ದೇವೆ. "It is wrongly reported, ನಮ್ಮ ನಿಲುವು ಅದಲ್ಲ. ಮತ್ತೆ ಮೀಟಿಂಗ್ ಕರೆದು ಚರ್ಚೆಮಾಡಿ ಮುಂದಿನ ಮೀಟಿಂಗ್‌ನಲ್ಲಿ ತೀರ್ಮಾನ ಮಾಡಬೇಕೆಂದು" ಸ್ಪಷ್ಟವಾಗಿ ಹೇಳಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನೇ ನಾವು ಒಟ್ಟಾರೆ ತೀರ್ಮಾನವೆಂದು ಹೇಳುವುದರಲ್ಲಿ ತಪ್ಪೇನಿದೆ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನು ರಾಜಕೀಯವಿದೆ ಹೇಳಿ ನೋಡೋಣ. ಏನು ನಿಮ್ಮ ವಿರುದ್ಧ ಇದೆಯೋ?

ಶ್ರೀ ಸಿದ್ದರಾಮಯ್ಯ : ನಿರ್ಣಯ ಮಾಡುವ ಅಗತ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನು ಅಗತ್ಯವಿಲ್ಲ?

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಏನು ವಿನಂತಿ ಮಾಡಿ ಕೊಳ್ಳುತ್ತೇನೆಂದರೆ, ಈ ತರಹ ಇಂಟರ್ ಸ್ಟೇಟ್ ಕೌನ್ಸಿಲ್ ವಿಚಾರದ ಬಗ್ಗೆ ಯಾವುದೇ ಸಭೆ ಇಲ್ಲಿಯವರೆಗೆ ಎಲ್ಲೂ ಇಂತಹ ನಿರ್ಣಯಗಳು ಆಗಿಲ್ಲ. ಕಾಮೆಂಟ್ಸ್ ಮಾಡಿದ್ದಾರೆ. ಆ ಕಾಮೆಂಟ್ಸನ್ನು ಸರ್ಕಾರದವರು ಕೇಂದ್ರಸರ್ಕಾರದ ಗಮನಕ್ಕೆ ತರುತ್ತಾರೆ. ನೀವು ಆ ತರಹ ಮಾಡಿ. ಕಾನೂನು ಬಾಹಿರವೆಂದು ನಿರ್ಣಯ ಮಾಡುವುದಕ್ಕೆ ಹೋದರೆ ಸಂಪ್ರದಾಯ ಒಳ್ಳೆಯದಾಗುವುದಿಲ್ಲ. ಜೊತೆಗೆ ಅದರ ಅವಶ್ಯಕತೆ ಕೂಡ ಇಲ್ಲ. After all, it is a recommendatory body. All the avenues are not over. ಈ ಸರ್ಕಾರಕ್ಕೆ ಏನಾದರೂ ನಿರ್ಣಯ ಮಾಡಿ ನಾವು ಒತ್ತಾಯ ಮಾಡಬಹುದು. ಬೇಕಾದರೆ ಸರ್ಕಾರದ ಮುಂದೆ ಏನಾದರೂ ಮಾಡಿಕೊಳ್ಳೋಣ. ದಯವಿಟ್ಟು ಇದನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಒಂದು ಪತ್ರ ಬರೆಯುತ್ತಿದೆ. ಅದು ಒಂದು ತರಹ ಪ್ರತಿಭಟನೆ. ಪತ್ರ ಬರೆಯುತ್ತಿರುವುದರಿಂದ ನಿರ್ಣಯದ ಬಗ್ಗೆ ಮತ್ತೊಂದು ಸಾರಿ ಚಿಂತನೆ ಮಾಡುವುದು ಒಳ್ಳೆಯದೆಂದು ನನಗನಿಸುತ್ತದೆ. ಪತ್ರವನ್ನು ನೇರವಾಗಿ ಬರೆಯುತ್ತಿದ್ದಾರೆ. ಅದೊಂದು ರೀತಿಯಲ್ಲಿ ನಿರ್ಣಯ ಇದ್ದಹಾಗೆ ಆಗುತ್ತದೆ. ಪತ್ರ ಬರೆದು ಆಗಿದೆಯೆಂದು ಸದನದಲ್ಲಿ ಓದಿದ ಮೇಲೆ ಅದು ಸಾಕು ಎಂದು ನನಗನ್ನಿಸುತ್ತದೆ. ಅದಕ್ಕಿಂತ ಮುಂದೆ ಹೋಗತಕ್ಕ ಅವಶ್ಯಕತೆಯಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿದ ಪ್ರಶ್ನೆಯನ್ನು ನಾನು ಒಪ್ಪುತ್ತೇನೆ. ಅಂತರ್ ರಾಜ್ಯ ಮಂಡಳಿ ಒಂದು ನಿರ್ಣಯ ಮಾಡಿದೆ. ಆ ನಿರ್ಣಯ ಸರ್ಕಾರದ ವಾದದ ಪ್ರಕಾರನೇ ಆಗಿಲ್ಲವೆಂದು ತಾವು ಹೇಳುತ್ತೀರಿ, ನಿರ್ಣಯವಾಗಿಲ್ಲವೆಂದು ಹೇಳುತ್ತಿಲ್ಲ. ನಮ್ಮ ವಾದ ಏನೆಂದರೆ ಅದನ್ನು ತಾವು ಅರ್ಥಮಾಡಿಕೊಳ್ಳಬೇಕು, ಅವರು ಏನು ಹೇಳುತ್ತಾರೆ ನಮ್ಮ ವಾದ ಅದಲ್ಲ ನಾವು ಒಪ್ಪಿಲ್ಲವೆಂದು ಹೇಳುತ್ತಾರೆ. ಒಪ್ಪುವುದಕ್ಕೂ ನಿರ್ಣಯವಾಗುವುದಕ್ಕೂ ವ್ಯತ್ಯಾಸವಿದೆ. ಎಲ್ಲರೂ ಒಪ್ಪಬೇಕಲ್ಲಾ ನಿರ್ಣಯವಾಗಲಿಕ್ಕೆ.

SRI H.N. NANJEGOWDA : It may help to create an opinion.

ಶ್ರೀ ಎಂ. ವೀರಪ್ಪ ಮೊಯಿಲಿ : ನೀವು ಬಹಳ ಸೂಕ್ಷ್ಮವಾಗಿ ಪರಿಗಣಿಸಬೇಕು. ಆ ನಿರ್ಣಯವಾಗಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ನನ್ನ ಪ್ರಕಾರ ಆ ತರಹ ನಿರ್ಣಯವಾಗಿಲ್ಲ. This decision was not taken before me. ಪ್ರೊಸೀಡಿಂಗ್ಸ್‌ನಲ್ಲಿ ಇಂತಹ ರೆಕಾರ್ಡ್ ಮಾಡಿ ತಾವು ಕಳುಹಿಸುವುದನ್ನು ನಿರ್ಣಯವಾಗಿದೆಯೆಂದು ನಾವು ಒಪ್ಪಿಕೊಂಡಿದ್ದೇವೆಂದರೆ?

ಶ್ರೀ ಎಂ. ವೀರಪ್ಪಮೊಯಿಲಿ : ತಮ್ಮ ವಾದ ಇರಬಹುದು. ಆದರೆ ಇಂಟರ್ ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಒಂದು ನಿರ್ಣಯವಾಗಿದೆಯೆಂದು ಹೇಳಿ ಅವರು ಪ್ರೊಸೀಡಿಂಗ್ಸ್ ಕಳುಹಿಸುತ್ತಾರೆ. ತಾವು ಹೇಳುವುದು ಬಿಟ್ಟರೆ ಈ ನಿರ್ಣಯವಾಗಿಲ್ಲವೆಂದು ಈ ಬೇರೆ ಯಾವ ರಾಜ್ಯದವರು ಹೇಳುತ್ತಾರೆ? ಇಲ್ಲಿ ಒಂದೇ ರಾಜ್ಯದ ಪ್ರಶ್ನೆಯಲ್ಲ. ತಾವು ನಿರ್ಣಯವಾಗಿಲ್ಲವೆಂದು ಹೇಳತಕ್ಕದ್ದು ಸರಿಯಿಲ್ಲ there is a resolution, ಆದರೆ ಅಲ್ಲಿ ನಿರ್ಣಯವಾಗಿದೆ. ನಿರ್ಣಯದ ಮೇಲೆ what is the next step. ವಾಟಾಳ್ ನಾಗರಾಜ್ ಅವರೇ, ಪಾರ್ಲಿಮೆಂಟ್‌ನಲ್ಲಿ ಸರ್ಕಾರದ ಮುಂದಿನ ಸ್ಟೆಪ್ ಏನು ಗೊತ್ತೇ? ಸರ್ಕಾರ ಈ ಬಗ್ಗೆ ಕಾಯಿದೆಗೆ ತಿದ್ದುಪಡಿಯನ್ನು ತರುತ್ತದೆ. ಕಾಯದೆಗೆ ತಿದ್ದುಪಡಿಯನ್ನು ತಂದಮೇಲೆ ಪಾರ್ಲಿಮೆಂಟ್‌ನಲ್ಲಿ ಎಲ್ಲರೂ ಅದನ್ನು ಒಪ್ಪುತ್ತಾರೆ. ಕರ್ನಾಟಕ ರಾಜ್ಯಸರ್ಕಾರದವರು ಬೊಬ್ಬೆ ಹಾಕಿಕೊಂಡರೆ ಅಲ್ಲಿ ನಿಲ್ಲಿಸುತ್ತಾರಾ? ಮುಂದೆ ಪಾರ್ಲಿಮೆಂಟ್‌ನಲ್ಲಿ ಒಂದು ಕಾನೂನು ಬರುತ್ತದೆ. ಕಾನೂನು ಬಂದಮೇಲೆ ಅಲ್ಲಿ ವಾದ ಮಾಡಬೇಕು. ನಮ್ಮ ಪರವಾಗಿ ನಮ್ಮ ಎಂ.ಪಿ.ಗಳು ಮಾತನಾಡಬೇಕು. ಅಷ್ಟೇ ಹೊರತು ಬೇರೆ ಏನೂ ಇಲ್ಲ. ಆದ್ದರಿಂದ ಈ ಇಂಟರ್ ಸ್ಟೇಟ್ ಕೌನ್ಸಿಲ್ ಮಟ್ಟದಲ್ಲೇ ಇದನ್ನು ತಡೆಹಿಡಿಯಬೇಕು. ಅದಕ್ಕೆ ತಾವು ಕಾಗದ ಬರೆದಿದ್ದೀರಿ. ಆದರೆ ಇದು ಇವತ್ತು ನಿಮ್ಮ ರಾಜ್ಯಸರ್ಕಾರಕ್ಕಿಂತಲೂ ಮೀರಿ ಹೋಗಿದೆ. ಏಕೆಂದರೆ ಈ ಇಡೀ ರಾಷ್ಟ್ರದ ನಿರ್ಣಯ ಆಗಿಬಿಟ್ಟಿದೆ. ನೀವು ಟೆಕ್ನಿಕಲ್ ರೀಸನ್ಸ್ ಕೊಡಬಹುದು. ನವೆಂಬರ್ 28ರಲ್ಲಿ ಆದ ನಿರ್ಣಯ ನಮಗೆ ಗೊತ್ತಾದದ್ದು ಮೊನ್ನೆ ಎಂದು. It is absolutely technical. May be you are correct also. ಆದರೆ ಆ ಟೆಕ್ನಿಕಲ್ ರೀಸನ್ಸ್‌ನ್ನು ಯಾರು ಒಪ್ಪುತ್ತಾರೆ? ದೇಶದ ಜನ ಯಾರೂ ಒಪ್ಪುವುದಿಲ್ಲ. ಇಂಟರ್ ಸ್ಟೇಟ್ ಕೌನ್ಸಿಲ್‌ನ ನಿರ್ಣಯ, ಅದಕ್ಕೆ ಸ್ಯಾಂಕಿಟಿ ಇದ್ದೇ ಇದೆ. ನಾವು ಹೇಳತಕ್ಕದ್ದು ಏನು ಎಂದರೆ ಆ ನಿರ್ಣಯದ ಮೇಲೆ please don't act upon such resolution. ಅದರ ಮೇಲೆ ಕಾರ್ಯಾಚರಣೆ ಮಾಡಬೇಕು. ಕಾನೂನು ತಿದ್ದುಪಡಿ ತರತಕ್ಕಂಥ ಕೆಲಸ ಮಾಡಬೇಡಿ ಎಂದು ಯಾರು ಹೇಳಬೇಕು? ಕೌನ್ಸಿಲ್‌ನಲ್ಲಿ ನಿಮ್ಮ ಮಾತೂ ನಡೆಯಲಿಲ್ಲ, ಸರ್ಕಾರದ ಮಾತೂ ನಡೆಯಲಿಲ್ಲ. ಹಾಗಾದರೆ ಇವತ್ತು ಇಡೀ ರಾಜ್ಯದ ಒಂದು ಧ್ವನಿಯನ್ನು ನಾವು ತೆಗೆಯಬೇಕಾದ ಅವಶ್ಯಕತೆ ಇದೆ. ಅದಕ್ಕೇ ನಾನು ಹೇಳಿದೆ. ಇಡೀ ರಾಜ್ಯದ ಧ್ವನಿಯನ್ನು ಹೇಗೆ ತೆಗೆಯಬೇಕು? ಒಂದು ನಿರ್ಣಯದ ಮುಖಾಂತರ ತೆಗೆಯಬಹುದು. ಇದು ಸಣ್ಣ ವಿಚಾರವೇನೂ ಅಲ್ಲ. ಒಂದು ಪತ್ರದ ಮೂಲಕ ಬಗೆಹರಿಸತಕ್ಕಂಥ ವಿಚಾರ ಅಲ್ಲ ಇದು. ಆದ್ದರಿಂದಲೇ ನಾನು ಹೇಳುವುದೇ ಏನೆಂದರೆ, ಇದು ಬೇಕಾದರೆ ಇವತ್ತು ಆದರೂ ಮಾಡಿ ಅಥವಾ ನಾಳೆಯಾದರೂ ಮಾಡಿ. ಏಕೆಂದರೆ ಇಂಟರೀಮ್ ಆರ್ಡರನ್ನೂ ಕೂಡ ಅವಾರ್ಡ್ ಎಂದು ಹೇಳಿದ ಹಿನ್ನೆಲೆಯಲ್ಲಿ ಇನ್ನು ಅವರಿಗೆ ತಮಿಳುನಾಡಿನವರಿಗೆ ಪ್ರಾಧಿಕಾರವೂ ಬೇಕಾಗಿಲ್ಲ, ಸುಪ್ರೀಂ ಕೋರ್ಟ್ ಕೂಡ ಬೇಕಾಗಿಲ್ಲ. ಇದೇ ಒಂದು ನಿರ್ಣಯ ಸಾಕು. ಈ ನಿರ್ಣಯದ ಮೇಲೆ ಒಂದು ಕಾನೂನು ಬಂದರೆ ಅದರ ತೀರ್ಮಾನವಾಗುತ್ತದೆ, ನಮ್ಮ ತಲೆ ಹೊರಟುಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ಅಷ್ಟೇ ಎಚ್ಚರಿಕೆ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಇದು ಜನರಲ್ ನಿರ್ಣಯ ಅಲ್ಲ. ಇದರ ಬಗ್ಗೆ ಸ್ಟಾಂಡಿಂಗ್ ಕಮಿಟಿಯಲ್ಲಿ ಯಾರು ಇದ್ದಾರೆ ಎಂಬುದನ್ನು ನೀವು ನೋಡಿದ್ದೀರಾ? ಅವರ ಉದ್ದೇಶವೇ ಇದು. ಅವರಿಗೆ ಸುಪ್ರೀಂ ಕೋರ್ಟು ಬೇಕಾಗಿಲ್ಲ. ಪ್ರಾಧಿಕಾರ ಬೇಕಾಗಿಲ್ಲ, ಕೇಂದ್ರಸರ್ಕಾರವೂ

ಬೇಕಾಗಿಲ್ಲ. ಇವತ್ತು ಇಡೀ ರಾಷ್ಟ್ರ ಎಲ್ಲಾ ರಾಜ್ಯಗಳನ್ನು ಪಾರ್ಟಿ ಮಾಡಿಕೊಂಡು ನಮ್ಮ ತಲೆಯಮೇಲೆ ಈ ನಿರ್ಣಯವನ್ನು ಹೇರತಕ್ಕಂಥ ಕೆಲಸ, ಒಂದು ದೊಡ್ಡ ಪಿತೂರಿ ಇದು. It is a national conspiracy. ಕರ್ನಾಟಕ ರಾಜ್ಯದಮೇಲೆ. ಇದರ ಬಗ್ಗೆ ಎಚ್ಚರ ತೆಗೆದುಕೊಳ್ಳಿ ಎಂದು ಯಾರು ಹೇಳಬೇಕು? ಬರೀ ಸರ್ಕಾರದ ಪ್ರೊಟೆಸ್ಟ್ ನಡೆಯುತ್ತದೆಯೇ? ಅದು ಇನ್ನೂ ನಡೆದಿಲ್ಲ. ಆದ್ದರಿಂದ ಇವತ್ತು ನಾವು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. The issue is not a government issue. ಇದು ಇಡೀ ರಾಜ್ಯದ, ಜನರ ಇಡೀ ಸದನದ ಇಷ್ಯೂ. ಆದ್ದರಿಂದ ಇದನ್ನು ವಿಚಾರ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದರು. ಅವರು ಅನುಭವ ಇರತಕ್ಕಂಥವರು. ಸನ್ಮಾನ್ಯ ಖರ್ಗೆಯವರು ಅನುಭವ ಇರತಕ್ಕಂಥವರು. ಒಂದು ಸಂಗತಿಯನ್ನು ತಾವು ಗಮನಿಸಿ. ಏನು ಬೇಕಾದರೂ ನಿರ್ಣಯ ಮಾಡೋಣ. ಆದರೆ ಇದು ಸಾಧು ಅಲ್ಲ. ಏಕೆಂದರೆ ತಾವು ಅಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ಆದರೆ ಇಲ್ಲಿ ಏನು ಆಗಿದೆ? ಈ ನಿರ್ಣಯದಲ್ಲಿ ಏನಾಗಿದೆ ಎಂದರೆ ಇವತ್ತು 'ಅವಿಸಂವಿಧಾನಿಕ ಮತ್ತು ಕಾನೂನು ಬಾಹಿರ ನಿರ್ಣಯವನ್ನು ರದ್ದುಗೊಳಿಸುವ ಕ್ರಮ ತೆಗೆದುಕೊಳ್ಳಬೇಕು ಎಂದು ನಾವು ಹೇಳಿದ್ದೇವೆ. ನಾನು ಹೇಳುತ್ತೇನೆ, ಅಲ್ಲಿರುವಂಥ ಅಂತರ ರಾಜ್ಯ ಮಂಡಳಿ ಏನಿದೆ, ಅವರು ಈ ನಿರ್ಣಯವನ್ನು ಸಲ್ಲಿಸುತ್ತಿದ್ದಾರೆ. ನಿಮ್ಮದೇ ಆದಂಥ ಅಭಿಪ್ರಾಯವನ್ನು ನೀವು ಕೊಟ್ಟಿದ್ದೀರಿ. ಅವರು ಕೆಲವು ನಿರ್ಣಯವನ್ನು ಅವತ್ತು ಮಾಡಿದ್ದಾರೆ. ಕಾನೂನು ಬಾಹಿರ ಎಂದು ನಾವು ಹೇಳುವುದಕ್ಕೆ ಹೇಗೆ ಬರುತ್ತದೆ? ಅದಕ್ಕಾಗಿ ನಾನು ಪ್ರಾರಂಭದಲ್ಲೇ ತಮಗೆ ಏನು ಹೇಳಿದ್ದೇ ಎಂದರೆ, ಕರ್ನಾಟಕ ರಾಜ್ಯದ ನಮ್ಮ ಅಭಿಪ್ರಾಯವನ್ನು ಜನತೆಗೆ ಧಕ್ಕೆ ಆಗದ ರೀತಿಯಲ್ಲಿ ಸಂಬಂಧಪಟ್ಟಂಥ ಸದಸ್ಯರಿಗೆ ಆ ಸಭೆಗೆ ಮುನ್ನ ಕನ್ವಿನ್ಸ್ ಮಾಡಿ ನಮ್ಮ ಅಭಿಪ್ರಾಯವನ್ನು ಅವರಿಗೆ ಮನದಟ್ಟುಮಾಡಿ ಆ ರೀತಿಯ ನಿರ್ಣಯ ಆಗದಂತೆ ಮುನ್ನೆಚ್ಚರಿಕೆಯನ್ನು ಅಲ್ಲಿ ತೆಗೆದುಕೊಳ್ಳಬೇಕಿತ್ತು. ಇದು ಒಂದು. ಈಗ ನಾವು ಯಾವುದೇ ಕಾರಣಕ್ಕೆ ಇದನ್ನು ಒಪ್ಪಿಲ್ಲ ಎಂದು ಪತ್ರ ಬರೆಯುತ್ತಿದ್ದೇವೆ. ಇದರ ಆಧಾರದಮೇಲೆ ಇದು ಮಾರ್ಪಾಡು ಆಗಬೇಕು ಎಂದು ಸ್ಪಷ್ಟವಾದ ಅಭಿಪ್ರಾಯವನ್ನು ಪತ್ರದ ಮೂಲಕ ಬರೆದಮೇಲೆ ಇದು ಅಸಂವಿಧಾನಿಕ ಮತ್ತು ಕಾನೂನುಬಾಹಿರ ಎಂದು ಹೇಳಿದರೆ ಅದು ಒಂದು ರೀತಿಯಲ್ಲಿ ಸಮಿತಿಗೆ ಅಪಮಾನ ಮಾಡಿದ ಹಾಗೆ ಆಗುತ್ತದೆ ಮತ್ತು ಅವರೆಲ್ಲರನ್ನೂ ಮೈಮೇಲೆ ಹಾಕಿಕೊಂಡು ಇದರಿಂದ ಗೊಂದಲಕ್ಕೆ ಅವಕಾಶವಾಗುತ್ತದೆ. ಅದರ ಬದಲು ಇವತ್ತು ಏನು ನೀವು ಪತ್ರ ಬರೆದಿದ್ದೀರಿ, ಆ ಪತ್ರವನ್ನು ಪರ್ಸುಯೇಡ್ ಮಾಡಿ ಪ್ರಧಾನಿಯವರನ್ನು ಭೇಟಿ ಮಾಡುವುದು, ಅದನ್ನು ಮಾಡಬೇಕೇ ಹೊರತು ಈ ರೀತಿ ನಿರ್ಣಯ ಮಾಡುವುದು ಬಹುಶಃ ನಮ್ಮ ಚೌಕಟ್ಟಿನಲ್ಲಿ ಸರಿಯಲ್ಲ. ಏಕೆಂದರೆ ಅವರೆಲ್ಲರ ಸಹಕಾರವನ್ನು ಮುಂದೆ ನಾವು ತೆಗೆದುಕೊಳ್ಳಬೇಕಲ್ಲಾ? ಅವತ್ತಿದಂಥ ಪರಿಸ್ಥಿತಿ ಬೇರೆ, ಇವತ್ತಿನ ಪರಿಸ್ಥಿತಿ ಬೇರೆ ಇದೆ. ಆದ್ದರಿಂದ ಈ ಹಂತದಲ್ಲಿ ಈ ರೀತಿ ನಿರ್ಣಯ ಮಾಡುವಂಥಾದ್ದು ಬಹುಶಃ ಇದುವರೆಗೂ ಇತಿಹಾಸದಲ್ಲಿ ಆಗಿಲ್ಲ. ಆ ತರಹ ತೀರ್ಮಾನವನ್ನು ತೆಗೆದುಕೊಳ್ಳುವುದು ಬೇಡ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿ) : ಏಕೆ ಈ ನಿರ್ಣಯ ಬೇಕಾಗುವುದಿಲ್ಲ ಎಂದರೆ ಪ್ರೊಸೀಡಿಂಗ್ಸ್ ನಮ್ಮ ಗಮನಕ್ಕೆ ಬಂದ ತಕ್ಷಣವೇ ನಮ್ಮ ಅಭಿಪ್ರಾಯವನ್ನು ಬಹಳ ಸ್ಪಷ್ಟವಾಗಿ ಅವರಿಗೇ ಹೇಳಿದ್ದೇವೆ. ಇದು ಬದಲಾವಣೆಯಾಗಬೇಕು, ಇದು ನಮಗೆ ಒಪ್ಪಿಗೆ ಇಲ್ಲ. ನಾವು ಈ ತರಹ ಒಪ್ಪಿಗೆಯನ್ನೂ ಕೂಡ ಕೊಟ್ಟಿಲ್ಲವೆಂದು ಹೇಳಿದ್ದೇವೆ. Wrongly it has been recorded ಎಂದು ಹೇಳಿಬಿಟ್ಟಿದ್ದೇವೆ. ಆದ್ದರಿಂದ ಬೇರೆ ಬೇರೆ ವೇದಿಕೆಗಳಲ್ಲಿ ಕೂಡ ಹೇಳುವುದಕ್ಕೆ ಆಗುತ್ತದೆ. ಮತ್ತೆ ಮಾನ್ಯ ಯಡಿಯೂರಪ್ಪನವರು ಹೇಳಿರತಕ್ಕಂಥ ವಿಚಾರ ಕೂಡ ಸರಿಯಿದೆ. ಮತ್ತು ನಾವು ಏನು ಕಾಗದ ಬರೆದಿದ್ದೇವೆ ಅದರ ಜೊತೆಗೆ ಪ್ರಧಾನ ಮಂತ್ರಿಯವರಿಗೂ ಕೂಡ ಇನ್ನೂ ವಿವರವಾದ ಕಾಗದ ಬರೆದು ಮತ್ತೆ ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗನ್ನು ಕರೆಯಬೇಕು, ಈ ವಿಚಾರ ಮತ್ತೆ ಚರ್ಚೆಯಾಗಬೇಕು, ಮತ್ತೆ ನಮ್ಮ ವ್ಯೂಸನ್ನು ಕೇಳಬೇಕು ಎಂಬುದರ ಬಗ್ಗೆ ಕೂಡ ನಾವು ಬಹಳ ಸ್ಪಷ್ಟಪಡಿಸುತ್ತೇವೆ. ಆದ್ದರಿಂದ ಇದೆಲ್ಲಾ ಇರುವುದರಿಂದ ಈ ಹಂತದಲ್ಲಿ ಈಗ ನಮಗೆ ಪ್ರೊಸೀಡಿಂಗ್ಸ್ ಬಂದು ನಮಗೆ ತಲುಪಿರುವುದರಿಂದ ಮತ್ತೆ ನಾವು ಈಗಾಗಲೇ ನಮ್ಮ ಪ್ರೊಟೆಸ್ಟ್ ಕಾಗದವನ್ನು ಬರೆದಿರುವುದರಿಂದ ಮತ್ತೆ ಪ್ರಧಾನಮಂತ್ರಿಯವರಿಗೆ ಬರೆಯುತ್ತಾ ಇರುವುದರಿಂದ, ಮಾನ್ಯ ಯಡಿಯೂರಪ್ಪನವರು ಸಲಹೆ ಮಾಡಿದ ರೀತಿ ಪ್ರಧಾನಿಯವರನ್ನೂ ಕೂಡ ಭೇಟಿಮಾಡಿ ಇದನ್ನು ಪರ್ಸ್ಯೂ ಮಾಡತಕ್ಕಂಥ ವಿಚಾರ ಕೂಡ ಮಾಡುವುದರಿಂದ ಈ ತರಹ ನಿರ್ಣಯ ಈ ಹಂತದಲ್ಲಿ ಅನಗತ್ಯ. ಆದ್ದರಿಂದ ನಾನು ಈ ನಿರ್ಣಯ ಬೇಕಾಗಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಮಾನ್ಯ ನಂಜೇಗೌಡರು ಹೇಳುತ್ತಾ ಇದ್ದರು, ಅದೇಕೋ ಅಲ್ಲಿಗೆ ಕುಳಿತರು. ಇದು ಅಸಂವಿಧಾನಿಕ ಮತ್ತು ಕಾನೂನು ಬಾಹಿರ ಎನ್ನತಕ್ಕಂಥ ಪದ ಸರಿಯಿಲ್ಲವೆಂದರೆ ಯಾವ ಪದ ಸರಿಯಿದೆ, ಅದನ್ನೇ ಹಾಕಿ ಬೇಕಾದರೆ ನಿರ್ಣಯ ಮಾಡಿ. ಇಲ್ಲ ಸರ್ಕಾರದವರೇ ನಿರ್ಣಯ ತೆಗೆದುಕೊಳ್ಳಲಿ. ಏಕೆಂದರೆ ಇಡೀ ಸದನ ಇವತ್ತು ಇದರ ಬಗ್ಗೆ ಪ್ರೊಟೆಸ್ಟ್ ಮಾಡುತ್ತದೆ ಅಥವಾ ಇಡೀ ಸದನ ನಿಮ್ಮ ಜತೆಯಲ್ಲಿ ಇದೆ ಎನ್ನತಕ್ಕಂಥ ದೃಷ್ಟಿಯಿಂದ ನಾವು ಇದ್ದೇವೆ. ನನ್ನ ನಿರ್ಣಯ ಸರಿಯಿಲ್ಲವೆಂದರೆ ನೀವು ನಿರ್ಣಯವನ್ನು ಮಂಡಿಸಿ, ನಾವು ಒಪ್ಪಿಗೆಯನ್ನು ಕೊಡುತ್ತೇವೆ. ಬೇಕಾದರೆ ನಾಳೆ ಮಂಡಿಸಿ, ನಾಡಿದ್ದು ಮಂಡಿಸಿ. ನಾವೇನೂ ಇವತ್ತೇ ಈಗಲೇ ಹೀಗೇ ಆಗಬೇಕೆಂದು ಹೇಳುತ್ತಿಲ್ಲ. ನಾಳೆ ತೆಗೆದುಕೊಂಡು ಬನ್ನಿ, ನಾಡದ್ದು ತೆಗೆದುಕೊಂಡುಬನ್ನಿ....

ಶ್ರೀ ಸಿದ್ದರಾಮಯ್ಯ : ಅವಶ್ಯಕತೆ ಏನಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವಶ್ಯಕತೆ ಇದೆ. ಅವಶ್ಯಕತೆ ಏಕೆ ಇದೆ ಎಂದರೆ In view of the Inter-State Council ಮೀಟಿಂಗ್ ಆದಮೇಲೆ, ಇವತ್ತು ಪ್ರೊಸೀಡಿಂಗ್ಸ್ ಆಗಿ ಎಲ್ಲಾ ಬೇರೆ ರಾಜ್ಯಗಳೂ ಕೂಡ ಒಪ್ಪಿಕೊಂಡಿವೆ. ನಾವು ಒಪ್ಪಿಕೊಳ್ಳದೇ ಇರಬಹುದು. ನಿಮ್ಮ ಭಾಷಣಗಳನ್ನೂ ಕೂಡ ಅಲ್ಲಿ ಒಪ್ಪಿಕೊಂಡಿಲ್ಲ. ಅಂದಾಗ ನಾವು ಇವತ್ತು ಒಂಟಿಯಾಗಿ ಒಂದು ಕಡೆ ಇರುತ್ತೇವೆ. ಬೇರೆ ರಾಜ್ಯದವರು ಎಲ್ಲರೂ ಒಂದು ಕಡೆ ಆಗುತ್ತಾರೆ. ಅದಕ್ಕಾಗಿ ನಾವು ಇಡೀ ಸದಸ್ಯರೆಲ್ಲರೂ ಒಂದಾಗಿದ್ದರೆ, ಒಳ್ಳೆಯದು. ಬೇಕಾದಂಥ ಶಬ್ಧವನ್ನು ತನ್ನಿ. ನೀವೇ ಮೂವ್ ಮಾಡಿರಿ.

+ ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ವಿಚಾರವನ್ನು ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ತರುತ್ತೇನೆ. ಈಗ ನಾವು ಚರ್ಚೆ ಮಾಡತಕ್ಕಂಥ ವಸ್ತು ಯಾವುದು ? ಅಂತರ್‌ರಾಜ್ಯ ಮುಖ್ಯಮಂತ್ರಿಗಳ ಆ ಒಂದು ಸಮ್ಮೇಳನದಲ್ಲಿ ನಡೆದಿರತಕ್ಕಂಥ ರಾಷ್ಟ್ರಕ್ಕೆ ಸಂಬಂಧಪಟ್ಟಿರತಕ್ಕಂಥ ವಿಚಾರಗಳಿಗೆ ಸಂಬಂಧಪಟ್ಟಂತೆ ತೆಗೆದುಕೊಂಡಿರತಕ್ಕಂಥ ತೀರ್ಮಾನ. ಅದರಲ್ಲಿ ಒಂದು ಅಂಶ ಚರ್ಚೆಗೆ ಬಂದಿರತಕ್ಕಂಥಾದ್ದು ಎಂದರೆ ಅದು ಅಂತರ್ ರಾಜ್ಯ ಜಲ ವಿವಾದಕ್ಕೆ ಸಂಬಂಧಪಟ್ಟಹಾಗೆ. ಅಂತರ್ ರಾಜ್ಯ ಜಲ ವಿವಾದಕ್ಕೆ ಸಂಬಂಧಪಟ್ಟಿದ್ದು, ಅದು ಸರ್ಕಾರಿಯಾ ಕಮೀಷನ್‌ನವರು ಕೊಟ್ಟಿರತಕ್ಕಂಥ ಒಂದು ಶಿಫಾರಸ್ಸು. ಆ ಶಿಫಾರಸ್ಸಿನ ಹಿನ್ನಲೆಯಲ್ಲಿ ತೆಗೆದುಕೊಂಡಿರತಕ್ಕಂಥ ತೀರ್ಮಾನ. ಅದರ ಬಗ್ಗೆ ಬಹಳ ಚರ್ಚೆಯಾಗಿದೆ. ಆ ಒಂದು ಪ್ರೊಸೀಡಿಂಗ್ಸ್ ಯಾವುದು ಉಂಟು, ಅದರಲ್ಲಿ ಆ ಟ್ರಿಬ್ಯೂನಲ್‌ನ ತೀರ್ಮಾನ ಸುಪ್ರೀಂ ಕೋರ್ಟಿನ ತೀರ್ಮಾನಕ್ಕೆ, ಆ ಡಿಕ್ರಿಗೆ ಅನುಗುಣವಾಗಿ ಇರಬೇಕು ಎಂದು ಹೇಳುತ್ತಾ ಇರತಕ್ಕಂಥಾದ್ದರ ಬಗ್ಗೆ ಈ ನಿರ್ಣಯವಾಗಿದೆ: ಹೌದು, ತಾನೆ? ಇದು ತಾನೇ ನಮ್ಮ ಮುಂದೆ ಇರತಕ್ಕಂಥ ವಸ್ತು? ನಾವು ರಾಜ್ಯಸರ್ಕಾರ ಇದು ಕೂಡದು ಎಂದು ಹೇಳಿದ್ದೇವೆ. ನಿಮ್ಮ ನಿರ್ಣಯವನ್ನೇ ಎತ್ತಿಕೊಳ್ಳುವ. ನಾವು ಏನು ಹೇಳಬೇಕು? ಬಹುಶಃ ರಾಜ್ಯಸರ್ಕಾರಕ್ಕೆ ಸಂಬಂಧಪಟ್ಟಹಾಗೆ ನಮ್ಮ ಚಿಂತನೆ ಏನು ಎಂಬುದನ್ನು ಅವರ ಭಾಷಣದಲ್ಲಿ ಮತ್ತು ಕಾಮೆಂಟ್ಸ್ ಹೇಳತಕ್ಕಂಥ ಸಂದರ್ಭದಲ್ಲಿ, ರಾಜ್ಯ ಸರ್ಕಾರ ಏನು ತೀರ್ಮಾನ ತೆಗೆದು ಕೊಂಡಿದೆ ಎಂದು ನಾವು ಕಳುಹಿಸಿಯಾಗಿದೆ. ಆದ್ದರಿಂದ ಒಪ್ಪಲಾಗಿದೆ. 'ಅಗ್ರೀಡ್' ಎಂದು ಹೇಳತಕ್ಕಂಥ ಸಂದರ್ಭದಲ್ಲಿ an impression is sought to be given that the State Government has also agreed for the proposal. ಎಂದು ಹೇಳುತ್ತಾ ಇರತಕ್ಕಂಥ ಒಂದು ಇಂಪ್ರೆಷನ್, ಒಂದು ಭಾವನೆ ಬರುತ್ತದೆ, 'ಐ ಅಗ್ರೀಡ್' ಎಂದು ಹೇಳತಕ್ಕಂಥ ಸ್ಥಳದಲ್ಲಿ, ಅದಕ್ಕೋಸ್ಕರ ಈ ಪ್ರೊಸೀಡಿಂಗ್ಸ್ ಬಂದಾದ ಕೂಡಲೇ ನಾವು ರಾಜ್ಯಸರ್ಕಾರದ ವತಿಯಿಂದ 'ಅಪ್ಪಾ, ನೀವು 'ಅಗ್ರೀಡ್' ಎಂದು ಬರೆದಿದ್ದೀರಿ. It gives an impression that the State of Karnataka has also agreed to this proposal, ಎಂದು ಹೇಳತಕ್ಕಂಥ ಇಂಪ್ರೆಷನ್ ಆ ಒಂದು ಪ್ರೊಸೀಡಿಂಗ್ಸ್‌ನಲ್ಲಿ ಬರುತ್ತದೆ. This is wrong. The state government has clearly objected to this and we are not prepared to agree, ಎಂದು ಹೇಳುತ್ತಾ ಇರತಕ್ಕಂಥಾದ್ದನ್ನು ಆ ಕಲಮಿನ ಕೆಳಗಡೆ ಕರ್ನಾಟಕ ರಾಜ್ಯಸರ್ಕಾರದ ಚಿಂತನೆ ಏನು ಎಂಬುದನ್ನು ಸ್ಪೆಸಿಫೈ ಮಾಡಬೇಕು. ಇದನ್ನು ಮಾಡಬೇಕಾದ ಸಂದರ್ಭ ಬಂದಿರುವಾಗ ಇದನ್ನು ನಾವು ಈಗ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಇವತ್ತು ಇಲ್ಲಿ ನಾವು ನಿರ್ಣಯ ತೆಗೆದುಕೊಳ್ಳುವಂಥಾದ್ದು. ಆದರೆ ಅಂತರ್‌ರಾಜ್ಯ ಸಮ್ಮೇಳನದಲ್ಲಿ20-22 ರಾಜ್ಯಗಳ ಮುಖ್ಯಮಂತ್ರಿಗಳು ತೆಗೆದುಕೊಂಡಿರತಕ್ಕಂಥ ತೀರ್ಮಾನ ಅದು. ಅದರಲ್ಲಿ ಬಹುತೇಕ ರಾಜ್ಯಗಳು 'ಹೌದಪ್ಪ, ಈ ಒಂದು ಸಲಹೆ ಸರಿ' ಎಂದು ಅವರು ಹೇಳಿದ್ದಾರೆ. ನಾವು ಹೇಳುತ್ತಿದ್ದೇವೆ ಏನೆಂದರೆ ಕಾವೇರಿಗೆ ಸಂಬಂಧಪಟ್ಟಹಾಗೆ ನಮ್ಮ ಚಿಂತನೆ ಯಾವಾಗಲೂ ಇರುತ್ತದೆ.

6.20 ಪಿ.ಎಂ.

ನಮ್ಮ ಚಿಂತನೆಯು ಯಾವಾಗಲೂ ಕಾವೇರಿಗೆ ಸಂಬಂಧಪಟ್ಟ ಹಾಗೆ ಇರುತ್ತದೆ. ಆದ್ದರಿಂದ ಅವರು ಎಲ್ಲಾದರೂ ಇದನ್ನು ಜನರಲ್ ಆಗಿ ಮಾಡಿದರೆ ಕಾವೇರಿಗೆ ಸಂಬಂಧಪಟ್ಟ ಹಾಗೆ ಇರತಕ್ಕಂಥ ಈ ಒಂದು ತೀರ್ಮಾನ ಏನು ಆಗಿದೆ, ಅದರಿಂದ ನಮಗೆ ತೊಂದರೆಯಾಗುತ್ತದೆ ಎಂಬುದನ್ನು ಮನಗಂಡು ನಾವು ಇದನ್ನು ಒಪ್ಪುವುದಿಲ್ಲ ಎಂದು ಹೇಳಿದ್ದೇವೆ. ಒಂದು ವೇಳೆ ಕಾವೇರಿ ಪ್ರಶ್ನೆಯೇ ಇಲ್ಲದೇ ಹೋಗಿದ್ದರೆ? ಇಲ್ಲಿ ಬೇರೆ ರಾಜ್ಯಗಳಿಗೆ ಕಾವೇರಿಯ ಪ್ರಶ್ನೆ ಇಲ್ಲ. ಬೇರೆ ರಾಜ್ಯಗಳಿಗೆ ನರ್ಮದಾನದಿ ಪ್ರಶ್ನೆ ಇಲ್ಲ. ಆದರೆ ಇವೊತ್ತು ಅವರು ತಂದಿರತಕ್ಕಂಥದ್ದರಲ್ಲಿ ನೀವು ಇಂಥ ವಿಚಾರಗಳು ಇವೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ಕುರಿತಾದ ಚರ್ಚೆಯನ್ನು ನಾವು ನಿನ್ನೆ ಮತ್ತು ಇವೊತ್ತು ಮಾಡಿದ್ದೇವೆ. ಕೊನೆಯಲ್ಲಿ ಇದರಲ್ಲಿ ಆಗಿರತಕ್ಕಂಥ ಪ್ರತಿಫಲ ಏನೆಂದರೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ತಮ್ಮ ಭಾಷಣದಲ್ಲಿ ಸರಕಾರದ ವಿಚಾರಗಳನ್ನು ಹೇಳುವುದಕ್ಕೆ ಒಂದು ಅವಕಾಶವಾಯಿತು. ಚರ್ಚೆಯಲ್ಲಿ ಬಂದಿರತಕ್ಕಂಥ ವಿಚಾರವನ್ನು ನಾವು ಇವೊತ್ತು ಒಪ್ಪಲಿಲ್ಲ, ಸರಕಾರವು ಹೇಳಿಕೊಟ್ಟು ಇದನ್ನು ಒಪ್ಪಲಿಲ್ಲ ಎಂದು ಹೇಳತಕ್ಕಂಥಾದ್ದನ್ನು ಸ್ಥಿರೀಕರಣ ಮಾಡಲಿಕ್ಕೆ ನಮಗೆ ಒಂದು ಅವಕಾಶ ಸಿಕ್ಕಿತು. ನಾವು ಮಾಡಿರತಕ್ಕಂಥಾದ್ದರಲ್ಲಿ ಏನೂ ತಪ್ಪು ಇಲ್ಲ ಎಂದು ಹೇಳಲು ಒಂದು ಅವಕಾಶ ಸಿಕ್ಕಿತು. ಎರಡನೆದಾಗಿ ನಾವು ಆಡಿರತಕ್ಕಂಥ ಮಾತು ಇವೊತ್ತು ತಮಿಳುನಾಡಿಗೆ ಹೋಯಿತು. ಅವರು ಮಾತುಕತೆಗೆ ಬರುವುದಿಲ್ಲ ಎಂದು ಹೇಳಿದರು. ಅದಕ್ಕೆ ನಾವು ಏನು ಹೇಳಿದೆವು? ನೀವು ಮಾತುಕತೆಗೆ ಬರಲು ಒಪ್ಪುವುದಿಲ್ಲವಾದರೆ ನಾವು ಏತಕ್ಕೆ ಬರಬೇಕು ಎಂಬ ಒಂದು ಪರಿಸ್ಥಿತಿ ಮತ್ತು ಚಿಂತನೆಯು ಬಂತು. ನಾಳೆ ಕೇಂದ್ರ ಸರಕಾರದವರು ಇದರ ಬಗ್ಗೆ ಚಿಂತನೆ ಮಾಡುವಾಗ ಕೇಂದ್ರ ಸರಕಾರದವರ ಇವೊತ್ತಿನ ಚಿಂತನೆಯು ಬೇರೆ ಎಂದು ವ್ಯಕ್ತವಾಗುತ್ತದೆ. ಮಾನ್ಯ ಪ್ರಧಾನಿ ವಾಜಪೇಯಿಯವರು ಇದರ ಬಗ್ಗೆ ಮಾತನಾಡುವಾಗ ನದಿನೀರಿನ ವಿವಾದಗಳು ಬಂದಾಗ ರಾಜ್ಯ ರಾಜ್ಯಗಳ ವಿರುದ್ಧ ಎತ್ತಿ ಕಟ್ಟತಕ್ಕಂಥ ಕೆಲಸವನ್ನು ಮಾಡಬಾರದು ಎಂದು ತಮ್ಮ ಚಿಂತನೆಯನ್ನು ಹೇಳಿದ್ದಾರೆ. ಆದ್ದರಿಂದ ಇಂಥ ಸಂದರ್ಭದಲ್ಲಿ ನಾವು ಮಾಡಬೇಕಾಗಿರತಕ್ಕಂಥ ಕೆಲಸ ಅಂದರೆ, ಕೇಂದ್ರ ಸರಕಾರದ ಚಿಂತನೆಗೆ ಅನುಗುಣವಾಗಿ ನಮ್ಮ ಚಿಂತನೆಗಳನ್ನು ಕ್ರೋಢೀಕರಿಸಿಕೊಂಡು ಅಂಥ ಸಂದರ್ಭ ಬಂದಾಗ ನಾವು ಕೇಂದ್ರ ಸರಕಾರದವರ ಜೊತೆಯಲ್ಲಿ ನಮ್ಮ ಪ್ರಭಲವಾಗಿರತಕ್ಕಂಥ ಹೋರಾಟವನ್ನು ಮಾಡುತ್ತಾ ಇರತಕ್ಕಂಥಾದ್ದನ್ನು ಮಾಡಬೇಕಾಗುತ್ತದೆ. ಆದ್ದರಿಂದ ಇವೊತ್ತು ಅಂತರರಾಜ್ಯ ಮಂಡಳಿಯವರು ತೆಗೆದುಕೊಂಡಿರತಕ್ಕಂಥ ಒಂದು ತೀರ್ಮಾನವನ್ನು ರದ್ದು ಮಾಡಬೇಕೆಂದು ನಾವು ಕೇಳಿದರೆ ನಮ್ಮ ಈ ವಿಧಾನಸಭೆಗೆ ಇರತಕ್ಕಂಥ ಅಧಿಕಾರವನ್ನು ನಾವು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಟ್ರಿಬ್ಯೂನಲ್ ಕೊಟ್ಟಿರತಕ್ಕಂಥ ರಿಪೋರ್ಟನ್ನು ರಿಜೆಕ್ಟ್ ಮಾಡಬೇಕೆಂದು ರೆಸಲ್ಯೂಷನ್ ಮಾಡುವುದೂ ಒಂದೇ ಇಂಟರ್‌ಸ್ಟೇಟ್ ಕೌನ್ಸಿಲ್ ಮಾಡಿದ ತೀರ್ಮಾನವನ್ನು ವಿರೋಧ ಮಾಡುತ್ತೇವೆ ಎನ್ನುವುದೂ ಒಂದೇ. ಬರುವುದಿಲ್ಲವೇ? ಸುಮ್ಮನೆ ಬುದ್ಧಿ ಹೇಳಲು ಬರಬೇಡಿ. ರೆಸಲ್ಯೂಷನ್ ಮಾಡುವುದು ಸರಿಯಲ್ಲ ಎಂದು ಹೇಳಿ. ಆದರೆ ರೆಸಲ್ಯೂಷನ್ ಮಾಡಲು ಬರುವುದಿಲ್ಲ ಎಂದು ಹೇಳಬೇಡಿ.

SRI M.C. NANAIAH : Kindly hear me. Sir, I think strategically we will adopt such a resolution. All other states, which are agreeable to that, they will also pass similar resolutions, stating that it shall be implemented. Are we to give a lever to them? Are we to give lever to Tamil Nadu tomorrow to pass a resolution which should be implemented? As long as there is no reference to the Cauvery Dispute, and as a general term when the matter came up for discussion, we have said it keeping in view the Cauvery, "we are not prepared to agree". ಆದ್ದರಿಂದ ಇವೊತ್ತು ಈ ತರಹದ ಒಂದು ತೀರ್ಮಾನವನ್ನು ಮಾಡಿ, ಮಾನ್ಯ ಪ್ರಧಾನಿಯವರಿಗೆ ನಾವು ಕಳುಹಿಸುತ್ತಾ ಇರತಕ್ಕಂಥಾದ್ದು, ಮತ್ತು ಈಗ ಅವರು ತೆಗೆದುಕೊಂಡಿರತಕ್ಕಂಥ ತೀರ್ಮಾನವನ್ನು ರದ್ದು ಮಾಡಿ ಎಂದು ಹೇಳತಕ್ಕಂಥಾದ್ದು ಮತ್ತು ಆ ಕುರಿತು ಇರುವ ಯಾವ ಭಾವನೆಗಳು ನಮ್ಮಲ್ಲಿವೆ, ಅವುಗಳನ್ನು ಬಿಟ್ಟು, ಈ ಕುರಿತಾಗಿ ಒಳ್ಳೆಯ ಚರ್ಚೆಯು ಆಗಿದೆ, ಫಲಪ್ರದವಾಗಿರತಕ್ಕಂಥ ಚರ್ಚೆಯು ಆಗಿದೆ. ಅದರ ಮೇಲೆ ನಮ್ಮ ರಾಜ್ಯ ಸರಕಾರದವರು ತೆಗೆದುಕೊಂಡಿರತಕ್ಕಂಥ ನಿಲುವನ್ನು ನಾವು ಈಗಾಗಲೇ ಪ್ರತಿಪಾದನೆ ಮಾಡಿದ್ದೇವೆ. ಪುನಃ ಇನ್ನೊಮ್ಮೆ ಮೀಟಿಂಗ್ ಬಂದಾಗ confirmation of proceedings ಬಂದಾಗ, ಅಥವಾ ಈ ಅಗ್ರೀಡ್ ಎಂದು ಹೇಳತಕ್ಕಂಥಾದ್ದಕ್ಕೆ ನಾವು ಒಪ್ಪಲಿಲ್ಲ ಎಂದು ನಮ್ಮ ವಿಚಾರವನ್ನು ಅಲ್ಲಿ ಪ್ರತಿಪಾದನೆ ಮಾಡುವ. ಆದ್ದರಿಂದ ಇಲ್ಲಿ ನಿರ್ಣಯ ಮಾಡುವುದು ಬೇಕಾಗಿಲ್ಲ. ಆದರೆ ಈ ಕಾವೇರಿಗೆ ಸಂಬಂಧಪಟ್ಟ ಹಾಗೆ ಯಾವುದಾದರೂ ಒಂದು ತೀರ್ಮಾನ ನಾಳೆಯ ದಿನಗಳಲ್ಲಿ ಪಾರ್ಲಿಮೆಂಟ್‌ನಲ್ಲಿ ಬರಬಹುದು. ಈ ಕುರಿತು ಖರ್ಗೆಯವರು ಹೇಳಿದ ವಿಚಾರಕ್ಕೆ ಬರೋಣ. ಇಂಟರ್‌ಸ್ಟೇಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ತೆಗೆದುಕೊಂಡಿರತಕ್ಕ ತೀರ್ಮಾನ. ನಾಳೆ ಅವರು ಇಂಟರ್‌ಸ್ಟೇಟ್ ರಿವರ್ ಡಿಸ್ಪೂಟ್ ಕಾನೂನಿಗೆ ತಿದ್ದುಪಡಿ ತರತಕ್ಕಂಥ ಪ್ರಶ್ನೆಯು ಎಲ್ಲಾದರೂ ಬಂದಾಗ, ಪ್ರಧಾನಿಯವರು ಒಂದು ವೇಳೆ ಇದನ್ನು ತರಲೇ ಬೇಕು ಎಂಬ ತೀರ್ಮಾನವನ್ನು ಎಲ್ಲಾದರೂ ಮಾಡಿದಾಗ ಪಾರ್ಲಿಮೆಂಟ್‌ನಲ್ಲಿ ಅಮೆಂಡ್‌ಮೆಂಟ್ ತರಬೇಕಲ್ಲಾ? ಹಾಗಾದರೆ ಯಾವಾಗ ನಾವು ಇದರ ಬಗ್ಗೆ ಯೋಚನೆ ಮಾಡಬೇಕು ? ಇದು ಆಗಿರತಕ್ಕಂಥದ್ದು 7 ತಿಂಗಳುಗಳ ಹಿಂದೆ. ಪ್ರೊಸೀಡಿಂಗ್ಸ್ ಬಂದಿದೆ. ಈ ಬಗ್ಗೆ ಕೇಂದ್ರ ಸರಕಾರದ ಚಿಂತನೆ ಏನು ಎಂಬುದನ್ನು ನಾವು ಈಗ ತಿಳಿದುಕೊಳ್ಳಬೇಕಾಗಿದೆಯಲ್ಲವೇ ? ಇದರ ಬಗ್ಗೆ ಕೇಂದ್ರ ಸರಕಾರದವರ ಚಿಂತನೆ ಏನು ಎಂಬುದನ್ನು ತಿಳಿಯ ಬೇಕಾಗುತ್ತದೆ. ಆದ್ದರಿಂದ ನಾಳೆ ಎಲ್ಲಾದರೂ ಒಂದು ಸಂದರ್ಭದಲ್ಲಿ ಇದಕ್ಕೆ ತಿದ್ದುಪಡಿಯನ್ನು ತರಬೇಕಾಗುತ್ತದೆ ಎಂಬ ಸಂದರ್ಭ ಬಂದಾಗ ಆ ತರಹದ ತೀರ್ಮಾನವನ್ನು ಮಾಡಿದಾಗ, ಕೇಂದ್ರ ಸರಕಾರದವರು ಈ ತಿದ್ದುಪಡಿಯನ್ನು ತರಬೇಕೆಂಬ ತೀರ್ಮಾನ ಮಾಡಿದರೆ, ಅಂಥ ತಿದ್ದುಪಡಿ ವಿಚಾರದಲ್ಲಿ ಇವೊತ್ತು ಕಾವೇರಿ ಟ್ರಿಬ್ಯೂನಲ್ ಒಂದೇ ಪೆಂಡಿಂಗ್‌ನಲ್ಲಿ ಇರುವುದು. ಬೇರೆ ಯಾವ ಟ್ರಿಬ್ಯೂನಲ್ ಪೆಂಡಿಂಗ್‌ನಲ್ಲಿ ಇಲ್ಲ. ಆ ಒಂದು ಸಂದರ್ಭದಲ್ಲಿ ನಾವು ಕೇಂದ್ರ ಸರಕಾರಕ್ಕೆ ಈ ವಿಚಾರವನ್ನು ತರಬೇಕಾಗುತ್ತದೆ. ಆದ್ದರಿಂದ ಇವೊತ್ತು ನಾವು ಸದನದಲ್ಲಿ ನಿರ್ಣಯವನ್ನು ಮಂಡಿಸಿ ಪಾಸ್ ಮಾಡುವ ವಿಚಾರವನ್ನು ಮಾನ್ಯ ಖರ್ಗೆಯವರು ರಾಜ್ಯದ ಹಿತದೃಷ್ಟಿಯಿಂದ ತಂದಿದ್ದಾರೆ.

ಕಾವೇರಿಯ ಕುರಿತಾಗಿ ನಮ್ಮ ಹಕ್ಕನ್ನು ನಾವು ಕಾಪಾಡಿಕೊಳ್ಳಬೇಕೆಂಬ ವಿಶಾಲ ಮನೋಭಾವನೆಯಿಂದ ನಾವು ಇದನ್ನು ತಂದಿದ್ದೇವೆ. ಆದರೆ ಇವೊತ್ತಿನ ಸ್ಥಿತಿಯಲ್ಲಿ ಇದು ಅಪಕ್ವ. ಯಾವುದೇ ವಿಚಾರ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ, ಸಂಬಂಧಪಟ್ಟಿರತಕ್ಕಂಥ ಯಾವುದೇ ಸೀಮಿತವಾಗಿರತಕ್ಕಂಥ ತಿದ್ದುಪಡಿಗಳನ್ನು ತರುವ ಸಂದರ್ಭದಲ್ಲಿ ನಾವು ಅದನ್ನು ಯೋಚನೆ ಮಾಡೋಣ. ಮಾನ್ಯ ಸಭಾಧ್ಯಕ್ಷರೇ, ಈ ಕುರಿತು ಬಹಳ ಒಳ್ಳೆಯ ಚರ್ಚೆಯು ಆಗಿದೆ. ಕಾವೇರಿ ವಿಚಾರವನ್ನು ನಿನ್ನೆಯಿಂದ ಇವೊತ್ತಿನ ವರೆಗೂ ನಾವು ವಿಚಾರವಿಮರ್ಶೆಗಳನ್ನು ಮಾಡಿದ್ದೇವೆ. ಆದ್ದರಿಂದ ಬಾಕಿ ಇರತಕ್ಕಂಥ ವಿಷಯಗಳ ಚರ್ಚೆಗೆ ಅವಕಾಶ ಮಾಡಿಕೊಟ್ಟು ಈ ವಿಚಾರವನ್ನು ಇಲ್ಲಿಗೆ ಮುಗಿಸೋಣ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಸಂಸದೀಯ ಸಚಿವರು ಬಹಳ ಒಳ್ಳೆಯ ಭಾಷಣವನ್ನು ಮಾಡುತ್ತಾರೆ. ಅವರಿಗೆ ಯಾವುದೇ ಕೇಸ್ ಕೊಟ್ಟರೂ ಕೂಡ, ವಿಷಯಕ್ಕೆ ತಕ್ಕಂಥ ಅರ್‌ಗ್ಯೂಮೆಂಟ್ ಮಾಡುತ್ತಾರೆ. ಕೇಸ್ ಬಗ್ಗೆ ಜಜ್ಡ್‌ಮೆಂಟ್ ಏನೇ ಆಗಲಿ. ಅರ್‌ಗ್ಯೂಮೆಂಟ್ ಚೆನ್ನಾಗಿ ಮಾಡುತ್ತಾರೆ. ಅವರು ಒಳ್ಳೆಯ ವಕೀಲರು. ಆದರೆ ಎಲ್ಲಾ ಕೆಟ್ಟ ಕೇಸ್‌ಗಳನ್ನು ಹಿಡಿಯುತ್ತಾರೆ.

SRI M.C. NANAIAH : I am very thankful to the Leader of Opposition for the most charitable compliment. And the argument which he advanced on the Floor of the House, absolutely it was of the highest order.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾವು ಯಾವುದೇ ದುರುದ್ದೇಶದಿಂದ ಈ ರೆಸಲ್ಯೂಷನ್ ತಂದಿಲ್ಲ. ಆದರೆ ಮಾನ್ಯ ಕಾನೂನು ಸಚಿವರು ಏನು ಹೇಳಿದರು ಅಂದರೆ, ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ಆಗಿದೆ, ಇಲ್ಲಿ ಆ ಬಗ್ಗೆ ರೆಸಲ್ಯೂಷನ್ ತರುವುದಕ್ಕೆ ಸಾಧ್ಯವೇ ? ಅದರಲ್ಲಿ ಚೀಫ್‌ಮಿನಿಸ್ಟರ್ಸ್ ಇರುತ್ತಾರೆ ಮುಂತಾಗಿ ಹೇಳಿದ್ದಾರೆ. ಉದಾಹರಣೆಗೆ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಟ್ರಿಬ್ಯೂನಲ್‌ರವರು ಇಂಟೀರಿಯಂ ಆರ್ಡರನ್ನು ಪಾಸ್ ಮಾಡಿದ್ದನ್ನು ಇಡೀ ಸದನವೇ ಒಂದಾಗಿ ರಿಜೆಕ್ಟ್ ಮಾಡಿತ್ತು. ಅದೇ ಈ ಒಂದು ಕೌನ್ಸಿಲ್, ರೆಕಮೆಂಡೇಟರಿ ಬಾಡಿ ಎಂದೆಲ್ಲಾ ನೀವೇ ಹೇಳುತ್ತೀರಿ. ನಾವೆಲ್ಲರೂ ಕೂಡ ಅದನ್ನು ಒಪ್ಪಿಕೊಂಡಿದ್ದೇವೆ. ರೆಕಮಂಡೇಟರಿಬಾಡಿಗೆ ನಮ್ಮ ಈ ಸದನದ ಅಭಿಪ್ರಾಯವನ್ನು ತಿಳಿಸುವ ಹಕ್ಕು ಇಲ್ಲ, ಅಧಿಕಾರ ಇಲ್ಲ ಎಂದು ತಾವೇನು ಹೇಳುತ್ತಿದ್ದೀರಿ, ಇದು ಎಷ್ಟರಮಟ್ಟಿಗೆ ಸಮಂಜಸ ಎಂದು ತಾವು ಹೇಳಬೇಕು. ಎರಡನೇದಾಗಿ, ನಾವು ಈ ವಿಚಾರ ಕುರಿತು ವಾಕ್‌ಔಟ್, ಧರಣಿ, ಮುಂತಾಗಿ ಮಾಡುವುದಿಲ್ಲ. ಏಕೆಂದರೆ ಇದು ಕಿವುಡರ ಸರಕಾರ, ಈ ಸರಕಾರದವರು ಅಲ್ಲಿ ಹೋಗಿ ಮಾತನಾಡುವುದಿಲ್ಲವಾದ ಕಾರಣ ಇದು ಮೂಕರ ಸರಕಾರ. ಅದಕ್ಕಾಗಿ ಇಂಥ ಸರಕಾರಕ್ಕೆ ನಾವು ಹೇಳತಕ್ಕಂಥದ್ದು ಏನೆಂದರೆ, ಇನ್ನು ಮೇಲಾದರೂ ಕೂಡ ನೀವು ಸ್ವಲ್ಪ ಕಣ್ಣು ತೆರೆದು, ಬಾಯಿ ಬಿಚ್ಚಿ ಕೇಳಿ, ವಕೀಲರ ಅಡ್ವೈಸ್ ತೆಗೆದುಕೊಂಡು, ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ತೆಗೆದುಕೊಂಡು ಇನ್ನು ಮುಂದಾದರೂ ಕೂಡ ಸರಿಯಾಗಿ ಕೆಲಸ ಮಾಡಲಿ ಮತ್ತು ಈಗ ಏನು ತಿದ್ದುಪಡಿ ಮಾಡಬೇಕಾಗಿದೆಯಲ್ಲಾ ಇದಾದರೂ ಕೂಡ ಕನ್‌ಫರ್‌ಮೇಷನ್

ಆಗುವ ಕಾಲಕ್ಕೆ ಸರಿಯಾದ ರೀತಿಯಲ್ಲಿ ಇದು ಪ್ರೊಸೀಡಿಂಗ್ಸ್‌ನಲ್ಲಿ ಬರುವ ಹಾಗೆ ಮಾಡುತ್ತಾರೆ ಎಂಬ ನಂಬಿಕೆಯನ್ನು ನಾನು ಇಟ್ಟುಕೊಳ್ಳುತ್ತೇನೆ. ಏಕೋ ನಮ್ಮ ವಿರೋಧಪಕ್ಷದ ಮಾನ್ಯ ನಂಜೇಗೌಡರೂ ಕೂಡ ಬೇರೆ ರೀತಿಯಲ್ಲಿ ಹೇಳಿದರು. ಮಾನ್ಯ ವಾಟಾಳ್‌ನಾಗರಾಜ್ ರವರು ಕೂಡ ತಮ್ಮ ಅಭಿಪ್ರಾಯವನ್ನು ಹೇಳಿದರು.

ಶ್ರೀ ಎಂ. ಸಿ. ನಾಣಯ್ಯ : ಅವರು ಕರೆಕ್ಟ್ ಅಡ್ರೆಸ್ ಕೊಟ್ಟರೆ ಇವರಿಗೆ ಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ನಿಮಗೆ ಬೇಕಾಗಿರುವಂಥ ಪ್ಲೇಟನ್ನು ಹಾಕಿದ್ದಾರೆ ಎಂದು ತಿಳಿದುಕೊಳ್ಳೋಣ. ಸರಿ ಅದೇ ದಾರಿಯಲ್ಲಿ ಹೋಗಿಬಿಡಿ. ನಮಗೇನೂ ಬೇಕಾಗಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ನಿಮಗೆ ಬೇಕಾಗಿರತಕ್ಕಂಥ ಪ್ಲೇಟನ್ನು ಹಾಕಿದ್ದಾರೆ ಎಂದು ಹೇಳಿದ್ದಾರೆ. ರಾಜಕಾರಣ ಬಂದಾಗ ಪ್ಲೇಟ್ ಹಾಕಬಹುದು. ಆದರೆ ಕಾವೇರಿ, ಕೃಷ್ಣಕ್ಕೆ ಸಂಬಂಧಪಟ್ಟ ವಿಷಯ ಬಂದಾಗ ಬೇರೆ ಪ್ಲೇಟ್ ಹಾಕುವುದಿಲ್ಲ. ಹೀಗೆ ನೀವು ಆ ತರಹದಲ್ಲಿ ಹೇಳಿ ಅವಮಾನ ಮಾಡಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಅವರ ಬಗ್ಗೆ ತುಂಬಾ ಗೌರವವಿದೆ. ನಾವು ಸಾಕಷ್ಟು ಅವರ ಮಾತುಗಳನ್ನು ಕೇಳಿದ್ದೇವೆ. ಈ ಸದನದಲ್ಲಿ ನಾವು ಅನೇಕ ಸಾರಿ ಅವರ ಸಲಹೆಗಳನ್ನು ಕೇಳುತ್ತೇವೆ. ಹೊರಗಡೆ ನಾವಿಬ್ಬರೂ ಕೂಡ ಮಾತನಾಡಿಕೊಂಡು ಬಂದು ಇಲ್ಲಿ ಪ್ರಸ್ತಾಪ ಮಾಡಿದ್ದು. ರಾಜ್ಯದ ಹಿತದೃಷ್ಟಿಯಿಂದ ಈ ಚರ್ಚೆಯನ್ನು ಇಲ್ಲಿ ಪ್ರಸ್ತಾಪ ಮಾಡಬೇಕೆಂದರೆ ಇದನ್ನು ಕೊನೆಯಲ್ಲಿ ತೆಗೆದುಕೊಳ್ಳಬಾರದಿತ್ತು, ಇದನ್ನು ಮೊದಲು ತೆಗೆದುಕೊಳ್ಳಬೇಕಾಗಿತ್ತು. ಇದು ಬಹಳ ಮಹತ್ವದ ವಿಚಾರ ಎಂಬುದನ್ನು ಮಾನ್ಯ ನಂಜೇಗೌಡರು ಹೇಳಿದರು. ಆದರೆ ನಿನ್ನೆ ಅವರು ಇರಲಿಲ್ಲ. ಅವರ ಸಹಿ ತೆಗೆದುಕೊಂಡು ಮಾಡಬಹುದಾಗಿತ್ತು. ಆದರೂ ಕೂಡ ನಾವು ಇಷ್ಟೊಂದು ಕಷ್ಟಪಟ್ಟು ಹೇಳಿದರೂ ಕೂಡ ಅದನ್ನು ಒಪ್ಪುವ ಬುದ್ಧಿಯನ್ನು ದೇವರು ನಿಮಗೆ ಕೊಡಲಿಲ್ಲವಲ್ಲಾ? ದೇವರು ನಿಮಗೆ ಇಂಥ ಕೆಟ್ಟ ಬುದ್ಧಿಯನ್ನು ಏತಕ್ಕೆ ಕೊಟ್ಟಿದ್ದಾನೆ ಎಂದು ಕೇಳಬಯಸುತ್ತೇನೆ. ಇದನ್ನು ನಾನು ಬಲವಾಗಿ ಪ್ರೊಟೆಸ್ಟ್ ಮಾಡುತ್ತೇನೆ, ಈ ರೆಸಲ್ಯೂಷನ್‌ಗೆ ಅವರು ಒಪ್ಪುತ್ತಾ ಇಲ್ಲ, ಆದರೂ ಕೂಡ ಇದನ್ನು ನಾನು ನಿಮ್ಮ ಮುಂದೆ ಇಟ್ಟು, ಇನ್ನು ಮುಂದಾದರೂ ಅವರು ಇದರ ಬಗ್ಗೆ ತಿಳುವಳಿಕೆ ಪಡೆದುಕೊಂಡು, ಒಪ್ಪುತ್ತಾರೆ ಎಂಬ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಈ ವಿಚಾರದಲ್ಲಿ ವಾಕ್‌ಔಟ್ ಮಾಡುವ ಅಗತ್ಯವಿಲ್ಲ. ಆದರೆ ನಮ್ಮ ಪ್ರೊಟೆಸ್ಟ್ ಇಷ್ಟೇ. ತಾವುಗಳು ಹೇಳಿದ ಹಾಗೆ ಸ್ಟಾಂಡಿಂಗ್ ಕಮಿಟಿಯಲ್ಲಿ ಆದ ತೀರ್ಮಾನ. ನಾವು ಅಲ್ಲಿ ಸದಸ್ಯರು ಅಲ್ಲ. ಆದ್ದರಿಂದ ಅಲ್ಲಿ ಏನಾಗಿದೆ ಗೊತ್ತಿಲ್ಲವಾದ ಕಾರಣ ನಮ್ಮ ಪ್ರೊಟೆಸ್ಟನ್ನು ನಮ್ಮದೇ ಆದ ರೀತಿಯಲ್ಲಿ ತಿಳಿಸುತ್ತಿದ್ದೇವೆ. ಆದರೆ ಇಂಟರ್‌ಸ್ಟೇಟ್ ಕೌನ್ಸಿಲ್‌ನಲ್ಲಿ ನಾವು ಸದಸ್ಯರಿದ್ದೇವೆ. ಅಲ್ಲಿ ಈ ನಿರ್ಣಯವನ್ನು ಯಾವರೀತಿಯಲ್ಲಿ ನೀವು ಪ್ರತಿಭಟಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬೇಕಾಗಿತ್ತೋ ಅದನ್ನು ಮಾಡದೇನೇ ನೀವು ವಿಫಲರಾಗಿದ್ದೀರಿ. ಸರಕಾರದ ಹಿತಕ್ಕೆ ಧಕ್ಕೆ ತಂದಿದ್ದೀರಿ. ಈ ಪ್ರೊಟೆಸ್ಟನ್ನು ನಾವು ಮಾಡುತ್ತಾ ಇದ್ದೇವೆ. ಎಲ್ಲಿಯೇ ಆದರೂ ಕೂಡ

ನಿರ್ಣಯವನ್ನು ಆ ಮೇಲೆಯೇ ಬರೆಯುವುದು. ನಾನು ಹೇಳುವುದೇನೆಂದರೆ, ಆ ಮೆಂಬರ್ಸನ್ನು ಕಂಡು ಭೇಟಿ ಮಾಡಿ, ನಮ್ಮ ನಿಲುವನ್ನು ಕ್ಲಿಯರ್ ಮಾಡಿ, ಈ ರೀತಿಯಲ್ಲಿ ನಿರ್ಣಯವನ್ನು ಮಾಡದ ಹಾಗೆ ನೋಡಿಕೊಳ್ಳುವುದರಲ್ಲಿ ನಿಮ್ಮ ಸರಕಾರ ಸಂಪೂರ್ಣವಾಗಿ ವಿಫಲವಾಗಿದೆ. ಕಾವೇರಿ ಬೇಸಿನ್ ರೈತರನ್ನು ಮತ್ತೆ ಮತ್ತೆ ಮಾರಣಹೋಮ ಮಾಡುವಂಥ ಕೆಲಸವನ್ನು ಮಾಡುತ್ತಾ ಇದ್ದೀರಿ. ನಿಮಗೆ ಇನ್ನೂ ಸದ್ಬುದ್ಧಿ ಬಂದಿಲ್ಲ. ಇದನ್ನು ನಾವು ಪ್ರತಿಭಟನೆ ಮಾಡುತ್ತೇವೆ. ಆದರೆ ವಾಕ್‌ಔಟ್ ಮಾಡುವ ಅಗತ್ಯವಿಲ್ಲ. ಇಲ್ಲಿಯೇ ಇರುತ್ತೇನೆ. ಇನ್ನು ಮುಂದಾದರೂ ಕೂಡ ಬಹಳ ಎಚ್ಚರದಿಂದ ಇರಬೇಕೆಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಖರ್ಗೆಯವರು ಮತ್ತು ಯಡಿಯೂರಪ್ಪನವರು ಹೊರತರಹದ ಪ್ರತಿಭಟನೆ ಮಾಡಿದ್ದಾರೆ. ಧರಣಿ, ಸಭಾತ್ಯಾಗವನ್ನು ಅವರು ಮಾಡಿಲ್ಲ. ನಮಗೆ ಅದು ಅರ್ಥವಾಗಲೇ ಇಲ್ಲ.

ಉಪಾಧ್ಯಕ್ಷರು : ಕಾವೇರಿ ಚರ್ಚೆಯು ಸಾಕಷ್ಟು ಒಳ್ಳೆಯ ರೀತಿಯಿಂದ ಆಗಿದ್ದು ಅದನ್ನು ಇಲ್ಲಿಗೆ ಮುಕ್ತಾಯಮಾಡೋಣ.

ಗಮನ ಸೆಳೆಯುವ ಸೂಚನೆ

ಮೈಸೂರು ನಗರದಲ್ಲಿ ಸ್ವಂತ ಮನೆ ಹೊಂದಿ ಮತ್ತು ಮಂದಿರ ಯೋಜನೆಯಡಿಯ ಫಲಾನುಭವಿಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಶೋಷಣೆ ಮಾಡುತ್ತಿರುವ ಬಗ್ಗೆ

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮೈಸೂರು ನಗರದಲ್ಲಿ ಸ್ವಂತ ಮನೆ ಹೊಂದಿ ಮತ್ತು ಆಶಾಮಂದಿರ ಯೋಜನೆಯಡಿಯ ಫಲಾನುಭವಿಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಶೋಷಣೆ ಮಾಡುತ್ತಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

+ ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) : ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದ ಆದೇಶ ಸಂಖ್ಯೆ ಹೆಚ್‌ಯುಡಿ 30 ಎಂಐಬಿ 87 ದಿನಾಂಕ 23-12-1987ರ ಆದೇಶದಂತೆ ಮಂಜೂರಾತಿ ಪಡೆದ ಆಶಾಮಂದಿರದ ಯೋಜನೆಯಡಿ ವಿವಿಧ ವರ್ಗಗಳಿಗೆ ಸೇರಿದ 6500 ಮನೆಗಳನ್ನು ವಿತರಿಸಲು ಕ್ರಮ ಕೈಗೊಂಡಿರುತ್ತಾರೆ. ಈ ಪೈಕಿ ಹೆಬ್ಬಾಳು ಮೊದಲನೇ ಹಂತದಲ್ಲಿ ಸಹಾ ಒಟ್ಟು 921 ಮನೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದ್ದು ದಿನಾಂಕ 16-2-1997 ರ ಪ್ರಾಧಿಕಾರದ ಪ್ರಕಟಣೆಯಂತೆ ವಿವಿಧ ಕಟ್ಟಡಗಳಿಗೆ ಈ ಕೆಳಕಂಡಂತೆ ಧರಗಳನ್ನು ನಿಗಧಿಪಡಿಸಲಾಗಿತ್ತು.